ಚಿತ್ರದುರ್ಗ ಜಿಲ್ಲೆಯ ಶಾಸನಗಳಲ್ಲಿ ನಾಯಕ ಸಮುದಾಯ

(ಚಿತ್ರದುರ್ಗ, ಹಿರಿಯೂರು, ಹೊಳಲ್ಕೆರೆ ತಾಲೂಕುಗಳನ್ನು ಅನುಲಕ್ಷಿಸಿ)

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ನೋಂದಣಿ ಸಂಖ್ಯೆ 140109030020

ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೫

ಚಿತ್ರದುರ್ಗ ಜಿಲ್ಲೆಯ ಶಾಸನಗಳಲ್ಲಿ ನಾಯಕ ಸಮುದಾಯ

(ಚಿತ್ರದುರ್ಗ, ಹಿರಿಯೂರು, ಹೊಳಲ್ಕೆರೆ ತಾಲೂಕುಗಳನ್ನು ಅನುಲಕ್ಷಿಸಿ)

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ನೋಂದಣಿ ಸಂಖ್ಯೆ 140109030020


ಸಂಶೋಧಕರು - ಮಂಜಪ್ಪ. ಸಿ
ಮಾರ್ಗದರ್ಶಕರು - ಡಾ. ಕಲವೀರ ಮನ್ವಾಚಾರ್

ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬


೨೦೧೫

ಪರಿವಿಡಿ

ಚಿತ್ರದುರ್ಗ ಜಿಲ್ಲೆ



MAP SHOWING PUBLICT HEALTH FACILITY
CHITRADURGA DISTRICT
N
W
E
S
Legend
ChitradurgaPHCselt
ChitradurgaCHCselt
ChitradurgaTLHselt
ChitradurgaDHselt
ChitradurgaTalukBoundary
ChitradurgaPHC
ChitradurgaCHC
MOLAKALMURU
RAMPURA
A Siddapura
H K Halli
Nagasamudra
B.G. Kere
Kondlahalli
Mustalagummi
B R Hally
NAYAKANAHATTI
Thalaku
D Ullarthy
Nelagetanahatti
Turuvanuru
Kaigere
BHARMASAGARA
Muddapura
CHITRADURGA
Belagatta
CHALLAKERE
Challakere
Jajuru
Ramajogihalli
Gopanahalli
PARASRAMPURA
Siddheswaranadurga
CTA Town
Kyasavarahalli
D S Halli
Sanikere
D Chellur
Muthugaduru
BHARMANAIKANADURGA
Chikkajajuru
MARADIHALLI
Yaraballi
Kalamarahalli
HOLALKERE
Chitrahalli
Godabanahal
Pandarahalli
Aimangala
Bethurpalya
Shivapura
Gunderi
HD Pura
Bharamapura
Guilal
Mallappanahalli
Rangenahalli
DHARMAPURA
Khandenahalli
Abbinahole
Tallkatte
N G Halli
HIRIYUR
A V Kottige
Maskal
Huvinahole
Hosayelnadu
Kodihalli
Tuppadahalli
Govdihalli
V V Pura
Javanagondanahalli
Ranganathapura
Janikal
Madadakere
Adivala
Bevigere
M P Hally
Baguru
HOSADURGA
Mathodu
G N Kere
Yalladakere
Dindavara
Srirampura
RANCHIRAJRA
Bellalasamudra
BELAGURU
SRIRAMAPURA

ಚಿತ್ರದುರ್ಗ ತಾಲೂಕು



CHITRADURGA TALUK GP MAP
N
DAVANAGERE DIST
CHALLAKERE TALUK
HOLALKERE TALUK
HIRIYUR TALUK
CHITRADURGA
BELAGATTA
J.N.KOTE
INGALADAL
ANNEHAL
0
5
10
kilometers
MAP INDEX
GP BOUNDARY
TALUK BOUNDARY

ಹಿರಿಯೂರು ತಾಲೂಕು


HIRIYUR GP MAP WITH VILLAGES
N
W
E
S
CHITRADURGA TALUK
CHALLAKERE TALUK
HOLALKERE TALUK
HOSADURGA TALUK
ANDRA PRADESH STATE
TUMAKUR DISTRICT
MAP INDEX
GP BOUNDARY
TALUK BOUNDARY
0
5
10
kilometers
Prepared by : NRDMS Centre
ZP office, Chitradurga

ಹೊಳಲ್ಕೆರೆ ತಾಲೂಕು


HOLALKERE TALUK GP MAP
ANDANUR
MUTTAGADUR
B.DURGA
CHITRADURGA TALUK
GUNJIGANUR
HIREYEMMIGANUR
CHIKKAJAJUR
T.NULENUR
CHIKKAYEMMIGANUR
CHITRAHALLI
ADANUR
SHIVAGANGE
SHIVAPURA
H.D.PURA
MALLADIHALLI
HOLALKERE TMC
AREHALLI
MADDERU
TEKALAVATTI
DUMMI
TALYA
DAVANGERE DIST
R.NULENUR
UPPARIGENAHALLI
GUNDERI
V.N.HALLI
RAMAGIRI
TALIKATTE
H.G.HALLI
GANGASAMUDRA
HOSADURGA TALUK
TUPPADAHALLI
BIDAREKERE
MAP INDEX
TALUK BOUNDARY
GP BOUNDARY
Prepared by: NRDMS Centre
ZP office, Chitradurga
0
5
10



ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಪ್ರಸ್ತಾವನೆ

ಇತಿಹಾಸವೆಂದರೆ ಕೇವಲ ರಾಜ-ಮಹಾರಾಜರ ಹಾಗೂ ಹುಟ್ಟು-ಸಾವು, ವೈಭೋಗ, ಆಡಳಿತ, ಯುದ್ಧ, ಸೋಲು-ಗೆಲುವು, ರಾಜ್ಯ ವಿಸ್ತಾರ ಮುಂತಾದವುಗಳನ್ನು ಚಿತ್ರಿಸುವುದು ಅಷ್ಟೇ ಅಲ್ಲ. ಇತಿಹಾಸವೆಂದರೆ ಒಟ್ಟು ಬದುಕಿನ ಸಮಗ್ರ ಚಿತ್ರಣವನ್ನು ನೀಡುವುದು. ಅಂದರೆ ರಾಜಕೀಯ, ಧಾರ್ಮಿಕ, ಸಾಮಾಜಿಕ, ಸಾಹಿತ್ಯಕ, ಸಾಂಸ್ಕೃತಿಕ ಆಯಾಮಗಳನ್ನು ಪ್ರತಿನಿಧಿಸುವುದು. ಈ ನಿಟ್ಟಿನಲ್ಲಿ ನಮ್ಮ ನಾಡಿನ ಸುಪ್ರಸಿದ್ಧ ಅರಸು ಮನೆತನಗಳೆಂದು ಗುರುತಿಸಿಕೊಂಡ ಶಾತವಾಹನರು, ಬನವಾಸಿಯ ಕದಂಬರು, ತಲಕಾಡಿನ ಗಂಗರು, ಬಾದಾಮಿ ಚಾಳುಕ್ಯರು, ಕಲ್ಯಾಣದ ಚಾಳುಕ್ಯರು, ಮಾನ್ಯಖೇಡದ ರಾಷ್ಟ್ರಕೂಟರು, ಕಳಚೂರ್ಯರು, ದೋರಸಮುದ್ರದ ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರನ್ನು ಒಳಗೊಂಡಂತೆ ಮುಂತಾದವರ ಕುರಿತಾಗಿ ಅಧ್ಯಯನಗಳು ನಡೆದಿವೆ ಹಾಗೂ ನಡೆಯುತ್ತಿವೆ. ಆದರೆ ಸಾಮಾನ್ಯ ಅರಸು ಮನೆತನಗಳ ಕುರಿತಾದ ಅಧ್ಯಯನಗಳು ಕಡಿಮೆಯೆಂಬುದು ಸ್ಪಷ್ಟ.

ಒಂದು ಪ್ರದೇಶದ ನಿಜವಾದ ಇತಿಹಾಸವೆಂದರೆ ಸಾಮಾನ್ಯ ಜನರ ಜೀವನ ಅವರು ಬದುಕಿದ ರೀತಿ ನೀತಿ, ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಅಳವಡಿಸಿಕೊಂಡ ಜೀವನದ ಮೌಲ್ಯಗಳು, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಆಚರಣೆಗಳು ಬಹುಮುಖ್ಯಗುತ್ತದೆ. ಇಂತಹ ಸಾಮಾನ್ಯ ಅರಸರಲ್ಲಿ ಕರ್ನಾಟಕದ ನಾಯಕರು ಪ್ರಮುಖರು. ಕರ್ನಾಟಕದ ಚರಿತ್ರೆಯಲ್ಲಿ ನಾಯಕ (ಬೇಡ)ರ ಚರಿತ್ರೆಯನ್ನು ಬಹುಮುಖ್ಯವಾಗಿ ಪರಿಗಣಿಸಬೇಕಾಗುತ್ತದೆ. ನಾಯಕ ಅರಸು ಮನೆತನಗಳ ಆಳ್ವಿಕೆ, ಸೈನಿಕರ ಸೇವೆ, ತ್ಯಾಗ, ಬಲಿದಾನಗಳು ಸಾಮಾಜಿಕವಾಗಿ, ರಾಜಕೀಯವಾಗಿ ಅವರ ಸಾಧನೆಗಳು ಹೀಗೆ ಒಂದಕ್ಕಿಂತ ಒಂದರಲ್ಲಿ ಮೇಲು ಎಂಬಂತೆ ಇವೆ.

ಹೀಗಾಗಿ ಸ್ಥಳೀಯ ಚರಿತ್ರೆಯ ದೃಷ್ಟಿಯಿಂದ ಈ ನಾಯಕ ಮನೆತನಗಳನ್ನು ರಚಿಸುವಲ್ಲಿ ಸಾಮಾನ್ಯ ಅರಸು ಮನೆತನಗಳು ಬಹುಮುಖ್ಯ ಪಾತ್ರವನ್ನು ವಹಿಸಿವೆ. ಅದರಲ್ಲೂ ಸೈನ್ಯವ್ಯವಸ್ಥೆಗೆ ನಾಯಕರೆ ಸೂಕ್ತ ಎಂಬಂತೆ ಶೌರ್ಯ ಪರಾಕ್ರಮಗಳಿಗೆ ಹೆಸರಾದವರು ನಾಯಕ ಜನಾಂಗದವರು. ಒಂದು ರಾಜ್ಯದ ರಕ್ಷಣೆಗೆ ಸೈನ್ಯ ವ್ಯವಸ್ಥೆಯು ಮೊದಲ ಭದ್ರತೆಯಾಗಿ ಕಂಡುಬರುತ್ತದೆ. ಇಂತಹ ವ್ಯವಸ್ಥೆಯಲ್ಲಿ ಬಹುಪಾಲು ನಾಯಕರದೇ. ಈ ರೀತಿಯಲ್ಲಿ ಮುಖ್ಯವಾಗಿ ಕಂಡುಬರುವ ಇವರನ್ನು ಮುಂದೆ ಪಾಳೆಯಗಾರರು, ದೊರೆಗಳು, ನಾಯಕರು, ತಳವಾರರು ಎಂಬಿತ್ಯಾದಿ ಹೆಸರುಗಳಿಂದಲೂ ಕರೆಯುತ್ತಿದ್ದರು. ಮೊದಲು ಈ ಹೆಸರುಗಳು ಅಧಿಕಾರ ಸೂಚಕವಾಗಿಯೂ ನಂತರ ಜಾತಿ ಸೂಚಕವಾಗಿಯೂ ಪ್ರಸಿದ್ಧಿ ಪಡೆಯಿತು.

ನಾಯಕ ಅರಸು ಮನೆತನಗಳು ಸಾಮಾನ್ಯ ಅರಸು ಮನೆತನಗಳಾಗಿ ಗುರುತಿಸಿಕೊಂಡು ಬಂದಿದ್ದರು. ಚರಿತ್ರೆಯ ಪುಟಗಳಲ್ಲಿ ಇವರ ಸಾಧನೆಗಳು ಗುರುತಿಸುವಂತಿವೆ. ಈ ನಿಟ್ಟಿನಲ್ಲಿಯೇ ಚಿತ್ರದುರ್ಗದ ನಾಯಕರು ಕೂಡ ವಿಜಯನಗರದ ಪತನ ನಂತರ ಸ್ವತಂತ್ರ ಅಸ್ತಿತ್ವವನ್ನು ಪಡೆದುಕೊಂಡು ಚಿತ್ರದುರ್ಗದಲ್ಲಿ ತಮ್ಮ ಆಡಳಿತ ಪ್ರಾರಂಭಿಸುವುದರ ಮೂಲಕ ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಉತ್ತಮ ಆಡಳಿತ ನಡೆಸಿ ಇತಿಹಾಸದಲ್ಲಿಯೇ ಮದಕರಿನಾಯಕರೆಂದರೆ ಚಿತ್ರದುರ್ಗ ನಾಯಕರು ಎನ್ನುವಂತೆ ಗುರುತಿಸಿಕೊಂಡಿದ್ದಾರೆ.

೧.೧. ಅಧ್ಯಯನದ ಉದ್ದೇಶ

ಇತ್ತೀಚಿನ ಸಂಶೋಧನೆಗಳು ತಲಸ್ಪರ್ಶಿ ಅಧ್ಯಯನಗಳಾಗಿದ್ದು, ಹೊಸ ಆಯಾಮಗಳನ್ನು ಮೈಗೂಡಿಸಿಕೊಂಡು ಮುನ್ನಡೆಯುತ್ತಿರುವುದು ಸೂಕ್ಷ್ಮ ಅಧ್ಯಯನಗಳಿಗೆ ನಾಂದಿಯಾಗಿದೆ. ಈಗಿನ ಈ ಅಧ್ಯಯನಗಳು ಕೆಳಮಟ್ಟದ ಪುನಾರಚನೆಯಾಗುತ್ತಿವೆ. ಒಂದು ನಾಡಿನ ಇತಿಹಾಸದಲ್ಲಿ ಪ್ರಧಾನ ರಾಜ ವಂಶಗಳಿಗೆ ನೀಡುವ ಮಹತ್ವವನ್ನು ಈ ಸೈನಿಕ ಸಂಸ್ಥಾನಗಳಿಗೂ ನೀಡುತ್ತಿರುವುದು, ಈ ಮನೆತನಗಳ ವಿಸ್ತೃತ ಸ್ವರೂಪದ ಅಧ್ಯಯನಕ್ಕೆ ಪುಷ್ಟಿ ನೀಡಿದಂತಾಗಿದೆ.

ಈ ಹಿನ್ನಲೆಯಲ್ಲಿ ಚಿತ್ರದುರ್ಗದ ನಾಯಕರನ್ನು ಕುರಿತಂತೆ ಅಧ್ಯಯನವನ್ನು ಕೈಗೊಂಡಿದ್ದು, ಈ ಅಧ್ಯಯನದ ಮೂಲಕ ಸಾಮಾನ್ಯ ಅರಸರು ಕೂಡ ಇತಿಹಾಸದ ರಚನೆಯಲ್ಲಿ ಪ್ರಾಮುಖ್ಯತೆ ಪಡೆಯಬಹುದು ಎಂಬುದನ್ನು ಶಾಸನಗಳ ಹಿನ್ನಲೆಯಲ್ಲಿ ಅಧ್ಯಯನ ಮಾಡುವುದು. ಒಂದು ರಾಜ್ಯ ವ್ಯವಸ್ಥೆಯ ಹುಟ್ಟಿಗೆ ಪ್ರಾದೇಶಿಕ ಅರಸು ಮನೆತನಗಳು ಹೇಗೆ ಕಾರಣರಾಗಿ ಕಂಡುಬರುತ್ತಾರೆ. ಸೈನ್ಯ ವ್ಯವಸ್ಥೆ ಮತ್ತು ಆಡಳಿತದಲ್ಲಿ ರಾಜರುಗಳಿಗೆ ಇವರು ನೀಡಿದ ನಿಷ್ಠೆಯ ಸೇವೆಗಳು ಹಾಗೆಯೇ ಸ್ವತಂತ್ರಗೊಂಡು ಒಂದೊಂದು ಪಾಳೆಯಗಳನ್ನು ಹೊಂದಿ ಅಂದರೆ ಸ್ಥಳೀಯವಾಗಿ ಅಧಿಕಾರವನ್ನು

ಪಡೆದ ಇವರು ರಾಜಕೀಯವಾಗಿ, ಸಾಮಾಜಿಕವಾಗಿ ಇವರ ಸಾಧನೆಗಳು ಇತಿಹಾಸದ ರಚನೆಯಲ್ಲಿ ಬಹುಮುಖ್ಯತೆ ಪಡೆದಿದ್ದು, ಇಂತಹ ಸಾಮಾನ್ಯ ಅರಸು ಮನೆತನಗಳ ಆಳ್ವಿಕೆಯನ್ನು ಇತಿಹಾಸ ಮರೆಮಾಚಿ ಮೇಲ್ವರ್ಗದವರ ಬಗ್ಗೆಯಷ್ಟೇ ಬೆಳಕು ಚೆಲುತ್ತಾ ಬಂದಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಈ ಅಧ್ಯಯನದಲ್ಲಿ ಈ ಮೇಲ್ವರ್ಗದವರ ಯಶಸ್ಸಿಗೆ ಪಾಳೆಗಾರರ ಆಡಳಿತದ ಶ್ರಮ ಮತ್ತು ಅವರ ನಿಷ್ಠೆಯೇ ಪ್ರಾಮುಖ್ಯತೆ ಪಡೆದಿದೆ ಎಂಬುದನ್ನು ಈ ಅಧ್ಯಯನದಲ್ಲಿ ತಿಳಿಸಲಾಗಿದೆ. ಸೈನ್ಯವ್ಯವಸ್ಥೆಯಲ್ಲಿ ಮತ್ತು ಆರ್ಥಿಕ, ಸಾಮಾಜಿಕ, ಧಾರ್ಮಿಕವಾಗಿ ಇವರುಗಳ ಕೊಡುಗೆಗಳೇನು ಎಂಬುದನ್ನು ಚಿತ್ರದುರ್ಗ ಜಿಲ್ಲೆಯ ನಾಯಕರ ಶಾಸನಗಳನ್ನು ಆಧರಿಸಿ ತಿಳಿಸಿದೆ.

೧.೨. ಅಧ್ಯಯನದ ವ್ಯಾಪ್ತಿ

ಸಾಮಾನ್ಯ ಅರ್ಥದಲ್ಲಿ ವ್ಯಾಪ್ತಿ ಎಂದರೆ. ಎಲ್ಲೆ, ಮೇರೆ, ಹರವು, ಗಡಿ, ವೈಶಾಲ್ಯತೆ, ಅಥವಾ ಸೀಮಾರೇಖೆ ಎಂದಾಗುತ್ತದೆ. ಆದರೆ ಯಾವುದೇ ಒಂದು ವಿಷಯದ ವ್ಯಾಪ್ತಿ ಎಂದರೆ ಆ ಕ್ಷೇತ್ರದ ವೈಶಾಲ್ಯತೆ, ಹರವು ಅಥವಾ ಅಧ್ಯಾಯನದ ಸೀಮಾ ರೇಖೆ ಎಂದರ್ಥ. ಯಾವುದೇ ಸಂಶೋಧನೆಗೆ ಒಂದು ಚೌಕಟ್ಟು ಅಂದರೆ ವ್ಯಾಪ್ತಿ ಬಹಳ ಮುಖ್ಯ. ನಿರ್ದಿಷ್ಟ ಹಾಗೂ ಉದ್ದೇಶ ಪೂರಿತವಾದ ಸಂಶೋಧನೆ ಯಶಸ್ಸು ಕಾಣಬೇಕೆಂದರೆ ಅದಕ್ಕೆ ಒಂದು ಚೌಕಟ್ಟು ಅಗತ್ಯ. ಈ ಚೌಕಟ್ಟಿನ ಕ್ರಮಬದ್ಧತೆಯಿಂದ ಸ್ಪಷ್ಟವಾದ ಇತಿಹಾಸವನ್ನು ರಚಿಸಲು ಸಾಧ್ಯವಾಗುತ್ತದೆ. ವ್ಯಾಪ್ತಿಗಳಿಲ್ಲದ ಅಧ್ಯಯನವು ಗೊಂದಲಮಯವಾಗಿ ಸಂಶೋಧಕನ ಮಿತಿಯನ್ನು ತೀವ್ರಗೊಳಿಸುವುದಲ್ಲದೇ ಸಂಶೋಧಕನನ್ನ ದಾರಿ ತಪ್ಪಿಸುತ್ತದೆ.

ಪ್ರಸ್ತುತ ಅಧ್ಯಯನದ ವ್ಯಾಪ್ತಿಯು ಶಿರ್ಷಿಕೆಯನ್ವಯ ಚಿತ್ರದುರ್ಗದ ನಾಯಕರಿಗೆ ಮಾತ್ರ ಸೀಮಿತವಾಗಿದ್ದು, ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ, ಹಿರಿಯೂರು, ಚಿತ್ರದುರ್ಗ ತಾಲೂಕಿನ ನಾಯಕರ ಶಾಸನಗಳನ್ನು ಮಾತ್ರ ನನ್ನ ಅಧ್ಯಯನದ ವ್ಯಾಪ್ತಿಗೆ ಬಳಸಿಕೊಂಡಿದ್ದೇನೆ. ಅಂದರೆ ಈ ಮೂರು ತಾಲೂಕಿನಲ್ಲಿ ದೊರೆತ ಚಿತ್ರದುರ್ಗ ನಾಯಕರ ಶಾಸನಗಳಲ್ಲಿ ಕಂಡುಬರುವಂತೆ ನಾಯಕರುಗಳ ಅವರ ಕಾಲದ ವಿಚಾರ ಯಾವ-ಯಾವ ನಾಯಕರು ಆಳ್ವಿಕೆ ನೆಡೆಸಿದ್ದರು ಹಾಗೂ ಸ್ಥಳೀಯವಾಗಿ ಇವರ ಕೊಡುಗೆ ಅಥವಾ ಸಾಧನೆಗಳೇನು ಎಂಬುದನ್ನು ಪರಿಶೀಲಿಸುವುದಾಗಿದೆ.

೧.೩. ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವು ದಾಖಲಾತಿ ಮತ್ತು ವಿವರಣೆಗಳನ್ನೊಳಗೊಂಡಂತೆ ವಿಶ್ಲೇಷಣಾತ್ಮಕ ವಾಗಿರುತ್ತದೆ. ಮುಖ್ಯವಾಗಿ ಚಿತ್ರದುರ್ಗ ಪಾಳೆಯಗಾರರ ಆಡಳಿತ, ಸಾಮಾಜಿಕ, ಧಾರ್ಮಿಕ ಕೊಡುಗೆ ಗಳು ಇವರ ಸೈನ್ಯಬಲ ಸ್ಥಳೀಯವಾಗಿ ಇವರ ಪ್ರಭುತ್ವವನ್ನು ಕುರಿತಂತೆ ಸಂಶೋಧನಾತ್ಮಕವಾದ

ಅಧ್ಯಯನವಾಗಿದೆ. ಪ್ರಸ್ತುತ ವಿಷಯವನ್ನು ಅಧ್ಯಯನದ ಅನುಕೂಲಕ್ಕಾಗಿ ಆರು ಅಧ್ಯಾಯಗಳಾಗಿ ವಿಭಾಗಿಸಲಾಗಿದ್ದು. ಪ್ರತಿಯೊಂದು ಅಧ್ಯಾಯವು ಉಪಶೀರ್ಷಿಕೆಗಳನ್ನೊಳಗೊಂಡಿದೆ.

ಮೊದಲನೆಯ ಅಧ್ಯಾಯವು ಅಧ್ಯಯನ ಉದ್ದೇಶ, ವ್ಯಾಪ್ತಿ, ಸ್ವರೂಪ, ವಿಧಾನ, ಹಾಗೂ ಈ ವರೆಗಿನ ಅಧ್ಯಯನ ಸಮೀಕ್ಷೆಯ ವಿಷಯಗಳನ್ನೊಳಗೊಂಡಿದೆ. ಈ ಅಧ್ಯಯನಕ್ಕೆ ಸಹಾಯಕವಾದ ಆಕರಗಳು ಸೇರಿದಂತೆ ಚಿತ್ರದುರ್ಗ ಹಾಗೂ ಚಿತ್ರದುರ್ಗ ಪಾಳೆಯಗಾರರ ಬಗ್ಗೆ ಈ ಹಿಂದೆ ನಡೆದಿರುವ ಅಧ್ಯಯನಗಳು ಕುರಿತು ಚರ್ಚಿಸಲಾಗಿದೆ. ಈ ವಿವರಗಳು ಪ್ರಸ್ತುತ ಸಂಶೋಧನ ಅಧ್ಯಯನಕ್ಕೆ ಅಗತ್ಯವಾದ ಹಿನ್ನೆಲೆಯನ್ನು ರೂಪಿಸುತ್ತವೆ ಎಂದು ಹೇಳಬಹುದು.

ಎರಡನೆಯ ಅಧ್ಯಾಯವು ರಾಜ್ಯ ವ್ಯವಸ್ಥೆಯ ಹುಟ್ಟು ಪ್ರಧಾನವಾಗಿ ಇಲ್ಲಿ ರಾಜ್ಯ ವ್ಯವಸ್ಥೆಯಲ್ಲಿ ಸೈನ್ಯದ ಪ್ರಾಮುಖ್ಯತೆಯನ್ನು ತಿಳಿಯುವ ಉದ್ದೇಶ ಹೊಂದಿದ್ದು ಸೈನ್ಯ ವ್ಯವಸ್ಥೆಯಲ್ಲಿ ನಾಯಕ ಜನಾಂಗದವರ ಶೌರ್ಯ, ಪರಾಕ್ರಮ ಮತ್ತು ಯೋಧರಾಗಿ ಇವರು ರಾಜರುಗಳಿಗೆ ಸಲ್ಲಿಸಿದ ನಿಷ್ಠೆಯನ್ನು ಗಮನಿಸಬಹುದು. ಹಾಗೆಯೇ ಸೈನ್ಯಕ್ಕೆ ಬೇಡರೇ ಸೂಕ್ತವೆಂಬಂತೆ ಸೈನ್ಯದಲ್ಲಿ ನಾಯಕರನ್ನೇ ಬಹುಪಾಲು ನೇಮಿಸಿಕೊಳ್ಳುವ ಅಂಶಗಳನ್ನು ಈ ಅಧ್ಯಾಯದಲ್ಲಿ ತಿಳಿಸಲಾಗಿದೆ.

ಮೂರನೆಯ ಅಧ್ಯಾಯವು ನಾಯಕ ಜನಾಂಗದ ಹುಟ್ಟು ಮತ್ತು ಬೆಳವಣಿಗೆಯ ಮೂಲಕವಾಗಿ ನಾಯಕ ಜನಾಂಗದ ಮೂಲವನ್ನು ಹುಡುಕುವ ಪ್ರಯತ್ನ ನಡೆದಿದೆ. ಹಾಗೆಯೇ ನಾಯಕ ಜನಾಂಗಕ್ಕೆ ಇರುವ ಬೇರೆ ಬೇರೆ ಹೆಸರುಗಳು ಮತ್ತು ಈ ಜನಾಂಗದಲ್ಲಿ ಬರುವ ಉಪ ಪಂಗಡಗಳು ಬೇರೆ-ಬೇರೆ ಪ್ರದೇಶದಲ್ಲಿ ಇವರನ್ನು ಕರೆಯುವ ಹೆಸರುಗಳನ್ನು ಗುರುತಿಸಿರುವುದು ಹಾಗೆಯೇ ಬೇಟೆಯಿಂದ ಹಿಡಿದು ವಿವಿಧ ಹುದ್ದೆಗಳಲ್ಲಿ ಆಧಿಕಾರಿಗಳಾಗಿ ಸ್ವತಂತ್ರ ಅಸ್ತಿತ್ವವನ್ನು ಪಡೆದು ಆಳ್ವಿಕೆ ನಡೆಸುವವರೆಗಿನ ಇವರ ಬೆಳವಣೆಗೆಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯವು ಚಿತ್ರದುರ್ಗ ಜಿಲ್ಲೆಯ ನಾಯಕರ ಶಾಸನಗಳನ್ನಾಧರಿಸಿ ಈ ಜಿಲ್ಲೆಯಲ್ಲಿ ಆಳ್ವಿಕೆ ಮಾಡಿದ ನಾಯಕರುಗಳು ಮತ್ತು ಅವರ ಕಾಲಾವಧಿಯಲ್ಲಿ ರಾಜ್ಯಾಡಳಿತ ವ್ಯವಸ್ಥೆಯ ಉಲ್ಲೇಖ ಮತ್ತು ಯಾವ-ಯಾವ ಪ್ರದೇಶಗಳನ್ನು ಈ ನಾಯಕರು ಆಳ್ವಿಕೆ ನಡೆಸಿದರು ಎಂಬುದನ್ನು ಚರ್ಚಿಸಲಾಗಿದೆ.

ಐದನೆಯ ಅಧ್ಯಾಯವು ಚಿತ್ರದುರ್ಗ ಜಿಲ್ಲೆಯ ನಾಯಕ ಸಾಧನೆಗಳು ಕುರಿತಂತೆ ಸ್ಥಳೀಯವಾಗಿ ಚಿತ್ರದುರ್ಗ ನಾಯಕರು ತಮ್ಮ ಆಡಳಿತಾವಧಿಯಲ್ಲಿ ಮಾಡಿದಂತಹ ಸಾಧನೆಗಳನ್ನು ಶಾಸನಗಳಲ್ಲಿ ಉಕ್ತವಾದಂತೆ ತಿಳಿಸಲಾಗಿದೆ. ಅಂದರೆ ತಮ್ಮ ಅಡಳಿತದಲ್ಲಿ ಸಾಮಾಜಿಕವಾಗಿ, ಧಾರ್ಮಿಕವಾಗಿ, ಮಾಡಿದ ಕೆಲಸ ಕಾರ್ಯಗಳನ್ನು ಅರಿಯುವ ಪ್ರಯತ್ನ ನಡೆದಿದೆ.

ಆರನೆಯ ಅಧ್ಯಾಯವು ಸಮಾರೋಪವಾಗಿದ್ದು, ಪ್ರಸ್ತುತ ಅಧ್ಯಯದಲ್ಲಿ ಕಂಡುಕೊಂಡ ಫಲಿತಗಳು ಹಾಗೂ ಮಿತಿಗಳನ್ನು ಕುರಿತು ವಿವೇಚಿಸಲಾಗಿದೆ. ಹಾಗೆಯೇ ಈ ಅಧ್ಯಯನಕ್ಕೆ

ಸಂಬಂಧಿಸಿದಂತೆ ಅನುಬಂಧದಲ್ಲಿ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ, ಹಿರಿಯೂರು, ಚಿತ್ರದುರ್ಗ ತಾಲೂಕುಗಳ ಸಂಬಂಧಿಸಿದ ನಕ್ಷೆಯನ್ನು, ಸಹಾಯಕವಾದ ಆಕರ ಗ್ರಂಥಗಳ ಪಟ್ಟಿಯನ್ನು ನೀಡಲಾಗಿದೆ.

೧.೪. ಅಧ್ಯಯನದ ವಿಧಾನ

ಯಾವುದೇ ಒಂದು ಕಾರ್ಯವು ಯಶಸ್ವಿಯಾಗಬೇಕಾದರೆ ಕ್ರಮಬದ್ಧತೆ ಅತೀ ಮುಖ್ಯ. ಅದೇ ರೀತಿ ಸಂಶೋಧನ ಕಾರ್ಯಕ್ಕೂ ವ್ಯವಸ್ಥಿತ ಅಧ್ಯಯನ ಕ್ರಮ ಬಹಳ ಅವಶ್ಯಕವಾದುದು. ಅಂತೆಯೇ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳುವ ಮುನ್ನ ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ ಮಾಹಿತಿ ಪಡೆದುಕೊಳ್ಳಲಾಯಿತು. ಈಗಾಗಲೇ ಸಂಶೋಧನೆ ಆಗಿರುವ ವಿಷಯಗಳೊಂದಿಗೆ ಮಾರ್ಗದರ್ಶಕ ರೊಂದಿಗೆ ಸಲಹೆಯನ್ನು ಪಡೆದುಕೊಂಡು ಮತ್ತು ವಿಷಯವನ್ನು ಆಯ್ಕೆಮಾಡಿಕೊಳ್ಳಲಾಯಿತು. ವಿಷಯದ ಆಯ್ಕೆಯ ನಂತರ ಚಿತ್ರದುರ್ಗ ನಾಯಕರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಯಿತು. ಮತ್ತು ಇದಕ್ಕೆ ಸಂಬಂಧಿಸಿದಂತೆ ಶಾಸನಗಳನ್ನು ಸಂಗ್ರಹಿಸುವುದರ ಜೊತೆಗೆ ಅಲ್ಲಲ್ಲಿ ಬಂದ ಬಿಡಿ ಲೇಖನಗಳು, ನಿಂಬಂಧಗಳನ್ನು ಪತ್ರಿಕಾ ವರದಿಗಳನ್ನು ಸಿದ್ಧಪಡಿಸಲಾಯಿತು. ನಂತರ ಅಧ್ಯಯನ ಮಾಡಿ ಚಿತ್ರದುರ್ಗ ಪಾಳೆಯಗಾರರ ಶಾಸನ ಮತ್ತು ಇತರ ಆಕರಗಳಿಂದ ದೊರೆತ ಅಂಶಗಳನ್ನು ಕಾಲಾನುಕ್ರಮವಾಗಿ ದಾಖಲಿಸಿಕೊಳ್ಳಲಾಯಿತು. ತದನಂತರ ಚಿತ್ರದುರ್ಗ ಪಾಳೆಯಗಾರರ ಕಾಲ ಮತ್ತು ಗಡಿಗಳನ್ನು ಗುರುತಿಸಿಕೊಂಡು ಮಾಹಿತಿಯನ್ನು ಒಂದೆಡೆ ಸಂಗ್ರಹಿಸಲಾಯಿತು. ಹಾಗೆಯೇ ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಗ್ರಂಥಾಲಯದ ಕಾರ್ಯವನ್ನು ಕೈಗೊಳ್ಳಲಾಯಿತು. ದಾವಣಗೆರೆ ಸಾರ್ವಜನಿಕ ಕೇಂದ್ರ ಗ್ರಂಥಾಲಯ, ಬೆಂಗಳೂರು ಐ.ಸಿ.ಹೆಚ್.ಆರ್. ಮಿಥಿಕ್ ಸೊಸೈಟಿ ಮತ್ತು ಕನ್ನಡ ವಿಶ್ವವಿದ್ಯಾಲಯ(ಹಂಪಿ)ಗಳ ಗ್ರಂಥಾಲಯಗಳಿಗೆ ಭೇಟಿ ನೀಡಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಾಹಿತ್ಯಕ ದಾಖಲೆಗಳನ್ನು ಪರಿಶೀಲಿಸಿ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲಾಯಿತು. ಹಾಗೂ ವಿಷಯಕ್ಕೆ ಸಂಬಂಧಿಸಿದಂತೆ ಇತರೆಡೆ ದೊರೆತ ಅನೇಕ ಗ್ರಂಥಗಳನ್ನು ಸಂಗ್ರಹಿಸಿಕೊಳ್ಳಲಾಯಿತು.

೧.೫. ಅಧ್ಯಯನದ ಸಮೀಕ್ಷೆ

ಚಿತ್ರದುರ್ಗ ಜಿಲ್ಲೆಯ ಪ್ರಾಚೀನ ಕಾಲದಿಂದ ಇಂದಿನ ಕಾಲದವರೆಗೂ ವಿಶಿಷ್ಠ ಸ್ಥಾನ ಪಡೆದುಕೊಂಡಿದೆ. ಇಂತಹ ವಿಸ್ತಾರವಾದ ಇತಿಹಾಸವನ್ನು ಹೊಂದಿರುವ ಜಿಲ್ಲೆಯ ಬಗ್ಗೆ ಇದುವರೆಗೆ ಅನೇಕ ಅಧ್ಯಯನಗಳು, ಸಂಶೋಧನೆಗಳು ನಡೆದು ಅನೇಕ ಕೃತಿಗಳು, ಪ್ರಬಂಧಗಳು, ಲೇಖನಗಳು, ಲಾವಣಿಗಳು, ಜಾನಪದ ಗೀತೆಗಳು ಕಾದಂಬರಿಗಳಂತಹ ಮುಂತಾದ ಪ್ರಕಾರಗಳು ರಚನೆಯಾಗಿವೆ. ಇವುಗಳಲ್ಲಿ ಕೆಲವು ವೈಚಾರಿಕ ಮತ್ತು ಚಾರಿತ್ರಿಕ ವಸ್ತು ಬಗೆಗಿನ ಖಚಿತ ವಿಶ್ಲೇಷಣೆಯಿಲ್ಲದೆ ಸೊರಗಿದ್ದರೂ

ವಿವಿಧ ಕಾಲಘಟ್ಟಗಳಲ್ಲಿ ಆದ ಒಟ್ಟಾರೆ ಬದಲಾವಣೆ ಸ್ಥಿತ್ಯಾಂತರಗಳನ್ನು ಸ್ಥೂಲವಾಗಿಯಾದರೂ ತಿಳಿದುಕೊಳ್ಳಲು ಸಹಾಯಕವಾಗಿವೆ.

ಚಿತ್ರದುರ್ಗ ನಾಯಕರ ಚರಿತ್ರೆಯ ದೃಷ್ಟಿ ಹಾಗೂ ಅಧ್ಯಯನದ ದೃಷ್ಟಿಯಿಂದ ಈ ಹಿಂದೆ ನಡೆದಿರುವ ಅಧ್ಯಯನಗಳು ಸಮೀಕ್ಷೆ ಮಾಡುವುದು ಅಗತ್ಯ. ಈ ಹಿಂದೆ ನಡೆದ ಅಧ್ಯಯನಗಳೆಂದರೆ. ಪಿ.ಕೃಷ್ಣರಾವ್ ೧೯೫೭ ರಲ್ಲಿ ಚಿತ್ರದುರ್ಗ ಬೆಟ್ಟ ಮತ್ತು ನಾಯಕ ಸಾಮ್ರಾಜ್ಯ ವಿಜಯನಗರೋತ್ತರ ಕಾಲೀನ ಕರ್ನಾಟಕದ ಇತಿಹಾಸ ರಚನೆಯಲ್ಲಿ ಪ್ರಮುಖ ಆಕರವೆಂದರೆ ಎಂ.ಎಸ್. ಪುಟ್ಟಣ್ಣನವರ ಚಿತ್ರದುರ್ಗ ಪಾಳೆಯಗಾರರು ಎಂಬ ಕೃತಿ ಕ್ರಿ.ಶ.೧೯೨೮ ರಲ್ಲಿ ದಿ ಮದರಾಸ್ ಮೇಲೆ ಅನ್ಯುಯಲ್ ನಲ್ಲಿ ಪ್ರಕಟಗೊಂಡ ಎ.ಆರ್ ಸ್ಲೇಟರ್ ಅವರ ದಿ ಹಿಲ್ ಫೈರ್ಟ್ಸ್ ಆಫ್ ಮೈಸೂರು ಎಂಬ ಲೇಖನ ಚಿತ್ರದುರ್ಗ ಕೋಟೆಯ ಬಗ್ಗೆ ಮಾಹಿತಿ ನೀಡುತ್ತದೆ. ಬಿ.ಎಲ್.ಸ್ವಾಮಿಯವರ ಚಿತ್ರದುರ್ಗ ಡಿಸ್ಟ್ರೀಕ್ಟ್ ಕೈಪಿಡಿ, ಬಿ.ರಾಮರಾವ್‌ರವರ ರಿ ಕಲೆಕ್ಷನ್ಸ್ ಆಫ್ ಆನ್ ಇಂಡಿಯನ್ ಜಿಯಾಲಿಸಿಸ್ಟ್ ಎಂಬ ತಮ್ಮ ಆತ್ಮ ಚರಿತ್ರೆಯಲ್ಲಿ ಚಿತ್ರದುರ್ಗ ಕೋಟೆ ಮತ್ತು ಪರಿಸರದ ಬಗ್ಗೆ ಮಾಹಿತಿಯಿದೆ.

ಬಿ.ಎನ್. ಶ್ರೀಸತ್ಯನ್ ಅವರ ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್, ಎಂ.ಜಿ. ವೆಂಕಟೇಶಯ್ಯನವರ ಚಿತ್ರದುರ್ಗ ಪಾಳೆಯಗಾರರು, ಕಮಲಾಹಂಪನ ಅವರ ವೀರವನಿತೆ ಓಬವ್ವ, ಹೆಚ್.ಟಿ. ದೇಶ ಪಾಂಡೆಯವರ ಚಿತ್ರದುರ್ಗ ನಾಯಕರ ಕಾಲದ ಭೂ ವ್ಯವಸ್ಥೆ, ಶ್ರೀಧರ ಮೂರ್ತಿಯವರ ಚಿತ್ರದುರ್ಗ, ಎಂ.ವಿ.ಶ್ರೀನಿವಾಸ್ ಮತ್ತು ಲಕ್ಷ ಣ್ ತೆಲಗಾವಿ (ಸಂ), ಚಂದ್ರವಳ್ಳಿ, ಕೆ.ವೆಂಕಣ್ಣಾಚಾರ್. ಹುಲ್ಲೂರು ಶ್ರೀನಿವಾಸ ಪಾಂಡುರಂಗ ಜೋಯಿಸ್ ಹಾಗೂ ಲಕ್ಷಣ್ ತೆಲಗಾವಿ(ಸಂ)ಅವರ ಐತಿಹಾಸಿಕ ಚಿತ್ರದುರ್ಗ ಮತ್ತು ಚಿತ್ರದುರ್ಗದರ್ಶಿನಿ, ಲಕ್ಷಣ್ ತೆಲಗಾವಿಯವರ ಚಿತ್ರದುರ್ಗ ಜಿಲ್ಲೆಯಲ್ಲಿ ಪಾಳೆಯಗಾರರ ಆಳ್ವಿಕೆ. ಬಿ.ರಾಜಶೇಖರಪ್ಪ ಚಿತ್ರದುರ್ಗ ಪಾಳೇಗಾರರು, ಬಿ.ಜೆ.ಎಲ್.ವೇಣುರವರ ಚಿತ್ರದುರ್ಗದ ಪ್ರಮುಖ ಉತ್ಸವಗಳು. ಹೀಗೆ ಚಿತ್ರದುರ್ಗ ಪಾಳೆಯಗಾರರ ಇತಿಹಾಸದ ಬಗ್ಗೆ ಇನ್ನೂ ಅನೇಕ ಕೃತಿಗಳು, ಲೇಖನಗಳು, ಕಾದಂಬರಿಗಳು, ಲಾವಣಿಗಳು, ಜನಪದ ಗೀತೆಗಳು, ಸ್ವರಣ ಸಂಚಿಕೆಗಳು ರಚನೆಯಾಗಿವೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂದಿಸಿದ ಪ್ರಮುಖವಾದ ದಾಖಲೆಗಳನ್ನು ಮಾತ್ರ ಸಂಗ್ರಹಿಸಲಾಗಿದೆ.

ಅಧ್ಯಾಯ ಎರಡು

ರಾಜ್ಯ ವ್ಯವಸ್ಥೆ ಮತ್ತು ಸೈನ್ಯ ವ್ಯವಸ್ಥೆ

ಅಧ್ಯಾಯ ಎರಡು

ರಾಜ್ಯ ವ್ಯವಸ್ಥೆ ಮತ್ತು ಸೈನ್ಯ ವ್ಯವಸ್ಥೆ

೨.೧. ರಾಜ್ಯ ವ್ಯವಸ್ಥೆಯ ಹುಟ್ಟು

ಒಂದು ರಾಜ್ಯವು ನಿರ್ಮಾಣಗೊಳ್ಳುವುದು ಅಲ್ಲಿನ "ಭೌಗೋಳಿಕ ಪರಿಸರದ ಮೇಲೆ ಭೂಭಾಗದ ಲಕ್ಷಣ, ಮಣ್ಣಿನಗುಣ, ನೆಲದ ಸ್ವರೂಪ, ಕಾಡು, ನದಿ, ತಗ್ಗು ದಿನ್ನೆ, ಅಂಕು ಡೊಂಕು ಮಾರ್ಗಗಳು"[೧] ಒಂದು ರಾಜ್ಯದ ಭೌಗೋಳಿಕ ಲಕ್ಷಣಗಳೊಂದಿಗೆ ಒಂದು ರಾಜ್ಯವು ಎನಿಸಿಕೊಳ್ಳಬೇಕಾದರೆ ಕೌಟಿಲ್ಯನು ಹೇಳುವಂತೆ ಸಪ್ತಾಂಗಗಳನ್ನು ಒಂದಿದ ಒಂದು ಪ್ರದೇಶದ ರಾಜ ಪ್ರಭುತ್ವದ ಆಡಳಿತ ರಾಜ್ಯ ವ್ಯವಸ್ಥೆಎಂದು ಹೇಳಬಹುದು. ಹಾಗೆಯೇ ಒಂದು ಭೂಭಾಗದ ಸ್ವರೂಪ ಮತ್ತು ಅನುಕೂಲಕರ ವಾತಾವರಣವು ರಾಷ್ಟ್ರ ರಕ್ಷಣೆಯ ದೃಷ್ಠಿಯಿಂದ ಮುಖ್ಯವಾಗಿದ್ದು "ಬೆಟ್ಟ-ಗುಡ್ಡ ಅಥವಾ ದಟ್ಟವಾದ ಕಾಡುಗಳಿಂದ ಕೂಡಿದ ಸ್ಥಳವು ರಾಜ್ಯರಚನೆಗೆ ಅತ್ಯಂತ ಉಪಯುಕ್ತವಾದದ್ದು."[೨]

ಪ್ರಾಕೃತಿಕವಾಗಿ ಸುರಕ್ಷಿತವಾದ ಬೆಟ್ಟ-ಗುಡ್ಡ ಹಾಗೂ ನದಿಗಳಿಂದ ಆವೃತವಾದ ಸ್ಥಳಗಳನ್ನು ಆಯ್ದು ಕೋಟೆಗಳನ್ನು ಕಟ್ಟಿ ರಾಜ್ಯವಾಳಿರುವುದು ಇಂದಿಗೂ ಗಮನಿಸಬಹುದು. ಇದೇ ರೀತಿ "ಬೆಟ್ಟಗುಡ್ಡಗಳನ್ನ ಆಧರಿಸಿ ಕಟ್ಟಲಾದ ನೂರಾರು ಕೋಟೆ ಕೊತ್ತಲುಗಳು ಕರ್ನಾಟಕದಾದ್ಯಂತ ನಿರ್ಮಾಣ ಗೊಂಡಿರುವುದನ್ನು ಗಮನಿಸಬಹುದು."[೩] ಆದಿ ಕಾಲದಿಂದಲೂ ಮಾನವನು ಕಾಡಿನಲ್ಲಿ ಬದುಕು ಕಂಡುಕೊಂಡಗಿನಿಂದ ಮನುಷ್ಯ ತನ್ನ ಜೀವನದ ಜೊತೆಗೆ ಜೀವರಕ್ಷಣೆಯ ಜವಬ್ದಾರಿಯನ್ನು ಕಂಡುಕೊಂಡು ಗುಂಪು ಗುಂಪಾಗಿ ಜೀವನ ನಡಿಸುವ ಸಮಯದಲ್ಲಿ ಅದೇ ಗುಂಪಿನ ಒಬ್ಬ ಸಮರ್ಥ ವ್ಯಕ್ತಿಯನ್ನು ತಮ್ಮ ಗುಂಪಿನ ಮುಖಂಡನನ್ನಾಗಿಸಿ ಅವನ ಮಾರ್ಗದರ್ಶನದಲ್ಲಿಯೇ ಜೀವನ ಸಾಗಿಸಿಕೊಂಡು ಬಂದಿರುವುದನ್ನು ಗಮನಿಸಬಹುದು. ಹಾಗೇಯೇ ಇವರ ಜೀವನ ಕಾಡಿನಲ್ಲಿ ಆಗಿರುವುದರಿಂದ ಜೀವ ರಕ್ಷಣೆಗಾಗಿ ಸುರಕ್ಷಿತ ಸ್ಥಳಗಳಲ್ಲಿ ಅಂದರೆ ಬಂಡೆಗಳ ನಡುವೆ, ಗುಹೆಗಳ ಮರದ ಪೊಟರೆಗಳೊಂದಿಗೆ ಜೀವನ ನಡಸುತ್ತ ಬಂದ ಮಾನವನು ಅವನ ಬುದ್ದಿಯಲ್ಲಿ

ವಿಕಾಸಗೊಂಡಂತ್ತೆ ಒಂದು ಪ್ರದೇಶದಲ್ಲಿಯೇ ನೆಲೆನಿಂತು ವಾಸಿಸತೊಡಗಿದನು. ಈ ನೆಲೆಯಿಂದಾಗಿ ರಾಜ್ಯಗಳ ಉದಯದೊಂದಿಗೆ ರಾಜನ ಆಡಳಿತವು ಮುಂದುವರೆದು ರಾಜಪ್ರಭುತ್ವಕ್ಕಾಗಿ ಬಲಿಷ್ಠ ವ್ಯಕ್ತಿಗಳ ನಡುವಿನ ಹೋರಾಟದೊಂದಿಗೆ ಬೇರೆ ಬೇರೆ ಪ್ರದೇಶಗಳಲ್ಲಿ ರಾಜರುಗಳಾಗಿ ರಾಜ್ಯವನ್ನು ನಿರ್ಮಾಣ ಮಾಡಿ ಒಂದೊಂದು ಪ್ರದೇಶದ ಮೇಲೆ ದಾಳಿನಡೆಸಿ ಅಲ್ಲಿನ ಸೋತ ರಾಜನಿಂದ ಆ ಪ್ರದೇಶವನ್ನು ವಿಸ್ತರಿಸಿಕೊಳ್ಳುವುದರೊಂದಿಗೆ ರಾಜ್ಯಗಳ ಸ್ಥಾಪನೆಯು ಬೆಳೆಯತೊಡಗಿತು. ಈ ರೀತಿಯಲ್ಲಿ ಒಂದು ರಾಜ್ಯ ವ್ಯವಸ್ಥೆಯ ಬೆಳೆದಿದೆ ಎಂದು ಗಮನಿಸಬಹುದು.

ಕರ್ನಾಟಕದಲ್ಲಿ ರಾಜ್ಯದಲ್ಲಿರುವ ಕೋಟೆಗಳನ್ನು ಗಮನಹರಿಸಿದರೆ ರಾಜರು ರಾಜ್ಯದ ರಕ್ಷಣೆಗಾಗಿ ಕೋಟೆಗಳನ್ನು ನಿರ್ಮಿಸಿಕೊಳ್ಳುವುದರ ಜೊತೆಗೆ ಈ ಕೋಟೆಗಳನ್ನು ಹೆಚ್ಚಾಗಿ ಬೆಟ್ಟಗುಡ್ಡಗಳಲ್ಲಿ ಕೇಂದ್ರಿಕೃತವಾಗಿರುವುದು ಕಂಡುಬರುತ್ತದೆ. ಹೀಗೆ "ರಾಜ್ಯಡಳಿತವು ಇಡೀ ರಾಜ್ಯಕ್ಕೆ ಸಂಬಂದಿಸಿದ್ದಾಗಿದ್ದು ಆ ರಾಜ್ಯಕ್ಕೆ ರಾಜನು ಮುಖ್ಯವಾದ ಕೇಂದ್ರ ಬಿಂದುವಾಗಿದ್ದು. ಮಹಾಪ್ರಧಾನ ಅಥವಾ ಮಹಾದಂಡನಾಯಕ, ದಂಡನಾಯಕರು, ದಳಪತಿ ಅಥವಾ ದಳವಾಯಿಗಳ ಕ್ರಮವಾಗಿ ಅಧಿಕಾರ ಹೊಂದಿದ್ದರು."[೪]

ಒಂದು ರಾಜ್ಯದ ಆಡಳಿತವನ್ನು ವಿವರಿಸುವಾಗ ನೇರವಾಗಿ ಕೇಂದ್ರಡಳಿತ ಪ್ರಾಂತ್ಯಾಡಳಿತ ಅಧಿಕಾರಿಗಳು ಮಂತ್ರಿಗಳು, ಸೈನ್ಯ, ಕಂದಾಯಇಲಾಖೆ ಇತ್ಯಾದಿಯಾಗಿ ವಿವರಿಸಿಕೊಂಡು ಹೋಗುತ್ತಾರೆ ಈ "ರಾಜ್ಯಗಳ ಒಳಗೇ ಸ್ವಾಯಿತ ಆಡಳಿತ ನಡೆಸಿಕೊಳ್ಳುವ ನಾಡು ಮಹಾನಾಡು ಅಗ್ರಹಾರ, ಊರು, ಇತ್ಯಾದಿಗಳು ಬರುತ್ತವೆ."[೫] ರಾಜ್ಯವ್ಯವಸ್ಥೆಯಲ್ಲಿ ರಾಜನೇ ಮುಖ್ಯವಾಗಿದ್ದು. ಈ ಮನೆತನಗಳ ವಂಶಾವಳಿ ಪ್ರತೇಕ ರಾಜರ ಯುದ್ದ ಸಾಧನೆಗಳು ಬಹುಭಾಗ ತುಂಬಿರುತ್ತವೆ. ನಂತರದಲ್ಲಿ "ಆಡಳಿತ, ಕಲೆ, ಸಂಸ್ಕೃತಿಗಳಿಗೆ ಇವರುಗಳ ಕೊಡುಗೆಗಳು ಇರುತ್ತವೆ."[೬] ಒಂದು ರಾಜ್ಯದ ವ್ಯವಸ್ಥೆಯಲ್ಲಿ ರಾಜನ ಅಧಿಕಾರಿಗಳನ್ನು ರಾಜ್ಯದ ಮಂತ್ರಿ, ಅವನು ರಾಜ್ಯದ ಎರಡನೆಯ ವ್ಯಕ್ತಿ ನಂತರ "ರಾಜನ ಸ್ವಂತ ಭೂಮಿಯ ಗುಮಾಸ್ತರೊಂದಿಗೆ ಭಂಡಾರಿ, ಪ್ರಧಾನಭಂಡಾರಿ, ಮತ್ತು ಅರಮನೆ ರಕ್ಷಕ ದಳಪತಿ, ರತ್ನಭಂಡಾರಿ, ಪ್ರಧಾನ ಅಶ್ವಪತಿ ಇವರಲ್ಲದೆ ರಾಜ್ಯದ ದಳವಾಯಿಗಳು ಇರುವರು."[೭]

ರಾಜ್ಯಾಡಳಿತದ ಸಪ್ತಾಂಗಗಳಲ್ಲಿ ರಾಜ ಅಥವಾ ರಾಜತ್ವ ಕೇಂದ್ರಬಿಂದುವಾಗಿ ಕಂಡುಬರುತ್ತನೆ. "ಅರಸನು ರಾಜ್ಯ ವ್ಯವಸ್ಥೆಯ ಮೂಲಬೇರು, ಮಂತ್ರಿ ಮಂಡಲವನ್ನು ಕಾಂಡಕ್ಕೆ ಸೇನಾಧಿಪತಿಗಳನ್ನು ರಂಬೆಗಳಿಗೆ ಮತ್ತು ಸೇನಾಪಡೆಗಳನ್ನು ಮರದ ಎಲೆ ಹಾಗೂ ಹೂವುಗಳಿಗೆ ಹೋಲಿಸಲಾಗಿದೆ ರಾಜನು ಆಡಳಿತವನ್ನು ಹೇಗೆ ನಡೆಸಬೇಕೆನ್ನುವುದನ್ನು ಅಮುಕ್ತಮೌಲ್ಯದಲ್ಲಿ ಹೀಗೆ ಹೇಳಲಾಗಿದೆ."[೮] ರಾಜನು ರಾಜ್ಯತಂತ್ರದಲ್ಲಿ ನಿಪುಣರಾದವರ ಮೂಲಕ ಆಳಬೇಕು, "ಪ್ರಜೆಗಳ ಮೇಲೆ ತೆರಿಗೆ ಸಾಧಾರಣವಾಗಿರಬೇಕು, ಶತ್ರುಗಳನ್ನು ಬಲಪ್ರಯೋಗದಿಂದ ಅಡಗಿಸಬೇಕು, ಪ್ರಜೆಗಳಲ್ಲಿ ಜಾತಿಬೆರಕೆಗೆ

ಅವಕಾಶ ಮಾಡಿಕೊಡಕೂಡದು"[೯] ಎಂಬುದು ರಾಜ್ಯವ್ಯವಸ್ಥೆಯ ನಿರ್ಮಾಣದ ಯಶಸ್ಸಿನ ಹಾದಿಯಾಗಿದೆ. ಈ ರೀತಿಯಲ್ಲಿ ರಾಜ್ಯವ್ಯವಸ್ಥೆಯನ್ನು ತಿಳಿಯಬಹುದು.

೨.೨. ಸೈನ್ಯವ್ಯವಸ್ಥೆ

"ಸೈನ್ಯಾತ್ ವಿನಾ ನ್ಯವ ರಾಜ್ಯಂನ ಧನಂ ಪರಾಕ್ರಮಃ ಎಂಬ ಸೂಕ್ತಿಯಂತೆ ಸೈನ್ಯವಿಲ್ಲದೆ ರಾಜ್ಯವಿಲ್ಲ ಧನವಿಲ್ಲದೆ ಪರಾಕ್ರಮವಿಲ್ಲವೆಂಬುದು ಪ್ರಾಚೀನ ಕಾಲದಿಂದಲೂ ಸೈನ್ಯವವಸ್ಥೆಯಲ್ಲಿ ರೂಢಿಯಲ್ಲಿದ್ದಿತ್ತು."[೧೦] ಸೈನ್ಯವು ರಾಜ್ಯವ್ಯವಸ್ಥೆಯ ಮೂಲಭೂತ ಅಂಶಗಳಾದ ಸಪ್ತಾಂಗಗಳಲ್ಲಿ ಒಂದು. ಸುಭದ್ರವಾದ ಸಾಮ್ರಾಜ್ಯದ ಸ್ಥಾಪನೆಗೆ ಸೈನ್ಯವೇ ತಳಹದಿ. ರಾಜ್ಯದ ಪರಿಕಲ್ಪನೆಯಲ್ಲಿ ರಾಜನ ಅಗತ್ಯ ಎಷ್ಟು ಅವಶ್ಯಕವೋ ಸೇನೆಯ ಅನಿವಾರ್ಯತೆಯು ಅಷ್ಟೇ ಮುಖ್ಯ. ರಾಜ್ಯ ಮತ್ತು ಸಮಾಜ ಸಂರಕ್ಷಣೆಯಲ್ಲಿ ಸೈನ್ಯದ ಪಾತ್ರ ತುಂಬ ಹಿರಿದು. ಪ್ರಬಲ ಹಾಗೂ ಸದೃಡ ಸೈನ್ಯವನ್ನು ಹೊಂದಿದ ಯಾವುದೇ ರಾಜ್ಯವು ಶತ್ರುಗಳ ಭಯ ಆತಂಕಗಳಿಂದ ಸದಾ ಮುಕ್ತವಾಗಿರುತ್ತದೆ. "ಸೈನ್ಯವು ಸುಭದ್ರ ಸಾಮ್ರಾಜ್ಯದ ಸ್ಥಾಪನೆಗೆ ಬೇಕಾದ ಅನಿವಾರ್ಯ ಅಂಗ"[೧೧]

ಸೈನ್ಯ ಎಂಬುದಕ್ಕೆ ಸೇನೆ, ಡಂಡು, ದಳ, ಪಡೆ-ಇನ್ನು ಮುಂತಾದ ಅರ್ಥಗಳಿವೆ. ಸೇನಾ ಎಂಬ ಪದದಿಂದ ಸೇನೆ, ಸೈನ್ಯ ಪದಗಳ ಬಳಕೆಗೆ ಬಂದಿವೆ. ಸೇನಾ ಎಂಬುದು ಸಾಂಸ್ಕೃತಿಕ ರೂಪ. ಇದು ಪಾಳಿ ಮತ್ತು ಸಿಂಹಳೀ ಭಾಷೆಗಳಲ್ಲೂ ಬಳಕೆಗೊಂಡಿದೆ. ಸೈನ್ಯವ್ಯವಸ್ಥೆ ಕೆಲವು ನಿಯಮ ಕಟ್ಟಳೆಗಳಿಂದ ಸಜ್ಜಗೊಂಡ ಕ್ರಮಬದ್ದ ಸ್ಥಿತಿ. ಸೈನ್ಯ ಮತ್ತು ಯುದ್ದದ ತಾತ್ವಿಕ ಪರಿಕಲ್ಪನೆಗಳು ಅರ್ಥ ಮತ್ತು ವ್ಯಾಪ್ತಿ ಸೈನ್ಯಪಡೆ. ಶಸ್ತ್ರಸ್ತ್ರ. ರಕ್ಷಣಾ ಸಾಧನ ತಂತ್ರ ಮತ್ತು ವಿಧಿ-ವಿಧಾನಗಳನ್ನು ಒಳಗೊಂಡಿರುತ್ತವೆ. ಸೈನ್ಯಾಡಳಿತವು ರಾಜ್ಯವ್ಯವಸ್ಥೆಯು ಒಂದು ಅಂಗ ಇದು ರಾಜ್ಯಾಡಳಿತದ ಅತಿ ಮುಖ್ಯ ಆಧಾರ ಸ್ತಂಬವೂ ಹೌದು ರಾಜ್ಯ ರಕ್ಷಣೆ ಹಾಗೂ ಶಾಂತಿ- ಸುವ್ಯವಸ್ಥೆಗಳಲ್ಲಿ ಇದರ ಪಾತ್ರ ತುಂಬ ಹಿರಿದು. ಯಾವುದೇ ರಾಜ್ಯವು ಭದ್ರತೆಯಿಂದ ಕೂಡಿರಬೇಕಾದರೆ ಅದಕ್ಕೆ ಪ್ರಬಲ ಸೈನ್ಯವು ಅಶ್ಯವಶ್ಯವಾಗಿದೆ. ಅಂತೆಯೇ ಸುಭದ್ರ ಸೈನ್ಯಕ್ಕೆ ವ್ಯವಸ್ಥಿತವಾದ ಆಡಳಿತ ಕ್ರಮವಿರಬೇಕು ಸೈನ್ಯದಲ್ಲಿ ಹೆಚ್ಚು ಪರಿಣತಿ ನಿಪುಣರು ಅನುಭವವುಳ್ಳವರನ್ನು ಈ ಸ್ಥಾನಕ್ಕೆ ನೇಮಕ ಮಾಡಲಾಗುತ್ತಿತ್ತು.

ರಾಜ್ಯಾಡಳಿತವು ಇಡೀ ರಾಜ್ಯಕ್ಕೆ ಸಂಬಂಧಿಸಿದ್ದುದಾದರೆ ಸೈನಾಡಳಿತವು ಸೇನೆಗೆ ಮಾತ್ರ ಅನ್ವಯಿಸುವುದು. ಸೈನ್ಯಾಡಳಿತವನ್ನು ಮುಖ್ಯವಾಗಿ ಎರಡು ರೀತಿಯಲ್ಲಿ

- ಕೇಂದ್ರ ಸೈನ್ಯ
- ಪ್ರಾಂತೀಯ ಸೈನ್ಯ

ಎಂಬುದಾಗಿ ವಿಂಗಡಿಸಲಾಗುತ್ತಿತ್ತು. ಕೇಂದ್ರ ಸೈನ್ಯವು ಅರಸನ ನೇರ ಅಧೀನದಲ್ಲಿದ್ದು. ದಂಡನಾಯಕರ ಮೂಲಕ ನಿಯಂತ್ರಿಸಲಾಗುತ್ತಿತು. ಈ ಸೈನ್ಯಕ್ಕೆ ಯೋದರನ್ನು ರಾಜ ಅಥವಾ ಅವನ ಅಧಿಕಾರಿಗಳ

ಮೂಲಕ ನೇಮಿಸಲಾಗುತ್ತಿತ್ತು ಈ ಬಗೆಯಲ್ಲಿ ನೇಮಕಗೊಂಡ ಯೋಧರಿಗೆ ವೇತನ ಮತ್ತಿತರ ಸೌಲಭ್ಯಗಳು ಕೇಂದ್ರ ಖಜಾನೆಯಿಂದ ದೊರೆಯುತ್ತಿದ್ದವು ಪ್ರಾಂತೀಯ ಸೈನ್ಯವು ಪ್ರಾಂತ್ಯಾಧಿಕಾರಿಗಳಾದ, ಸಾಮಂತರ ಅಧೀನದಲ್ಲಿದಲ್ಲಿದ್ದುದರಿಂದ ಈ ಸೈನ್ಯದ ನಿಯಂತ್ರಣವನ್ನು ಸಾಮಾಂತಾಧಿಕಾರಿಗಳೇ ನೋಡಿಕೊಳ್ಳುತ್ತಿದ್ದರು. ಈ ಪ್ರಾಂತೀಯ ಸೈನಿಕರಿಗೆ ವೇತನ ಮತ್ತಿತರ ಸೌಲಭ್ಯಗಳನ್ನು ಪ್ರಾಂತ್ಯಾಧಿಕರಿಗಳೇ ನೋಡಿಕೊಳ್ಳುತ್ತಿದ್ದರು ಸೈನ್ಯನಿರ್ವಹಣೆಗೆ ಬೇಕಾದ ಹಣಕಾಸು ಕುರಿತು ಶುಕ್ರನು ಹೀಗೆ ಹೇಳಿದ್ದಾನೆ "ರಾಜ್ಯದ ಅತ್ಯಂತ ಮುಖ್ಯ ಅಂಗವಾದ ಸೈನ್ಯ ನಿರ್ವಹಣೆಗೆ ಆದಾಯದ ಅರ್ಧಭಾಗವನ್ನು ಮೀಸಲಿಡಬೇಕು"[೧೨] ಈ ಅಂಶವನ್ನು ಕೃಷ್ಣದೇವರಾಯನ ಅಮುಕ್ತ ಮೌಲ್ಯದಲ್ಲೂ ಕಾಣಬಹುದು ಅದರಲ್ಲಿ "ಆನೆ ಕುದುರೆಗಳನ್ನು ಕೊಳ್ಳಲು ಸಾಕಲು ಮತ್ತು ಕಾಪಾಡಲು ವೆಚ್ಚ ಮಾಡಿದ ಹಣವನ್ನು ಎಂದಿಗೂ ಖರ್ಚೆಂದು ಭಾವಿಸಲಾಗದು"[೧೩] ಎಂದು ವಿವರಿಸಿದೆ.

ಕ್ರಿ.ಪೂ ೨೫೦೦ ವರ್ಷಗಳ ಹಿಂದೆ ಭಾರತದಲ್ಲಿ ಸೈನ್ಯವು ಅಸ್ತಿತ್ವದಲ್ಲಿದ್ದುದು ಸಿಂಧೂನದಿ ಬಯಲಿನ ನಾಗರೀಕತೆಯಿಂದ ತಿಳಿದುಬರುತ್ತದೆ. ಸಿಂಧೂ ನದಿಯ ದಡದ ಹರಪ್ಪಾ-ಮೊಹೆಂಜೋದಾರೋ ಹಾಗೂ ಸ್ವಾತಂತ್ರೋತ್ತರ ಭಾರತದ ಲೋಥಲ್, ಕಾಲಿಬಂಗಾನ್, ದೋಲವೀರ, ಮತ್ತಿತರ ಸ್ಥಳಗಳಲ್ಲಿ ನಡೆಸಲಾದ ಉತ್ಖನನದಲ್ಲಿ ಅಂದು ಬಳಸಿದ್ದ ಶಸ್ತ್ರಾಸ್ತ್ರ ಮತ್ತು ಸೈನಿಕ ಪರಿಕರಗಳು ದೊರೆತಿವೆ. ಅವುಗಳಲ್ಲಿ "ಬಿಲ್ಲು, ಬಾಣ, ಖಡ್ಗ, ಕೊಡಲಿ, ಈಟ, ಕಠಾರಿ, ಗದೆ. ಕವಣಿಕಲ್ಲು ಮತ್ತು ಗುಹೆ ಮೊದಲಾದ ರಕ್ಷಣಾ ಪರಿಕರಗಳು ಕೋಟೆ ಅವಶೇಷಗಳು ಸೇರಿವೆ ಈ ಆಯುದಗಳನ್ನು ತಾಮ್ರ, ಹಿತ್ತಾಳೆ, ಮತ್ತು ಕಲ್ಲುಗಳನ್ನು ಬಳಸಿ ಮಾಡಲಾಗಿದೆ."[೧೪] ಇವುಗಳಿಂದ ಅಂದಿನ ಸೈನ್ಯವ್ಯವಸ್ಥೆಯ ಸ್ವರೂಪವನ್ನ ಅರ್ಥಮಾಡಿಕೊಳ್ಳಲು ಸಾಧ್ಯವಾಗಿದೆ. ಪ್ರಾಕೃತಿಕ ಮತ್ತು ಯುದ್ದ ತಂತ್ರಗಳಿಗೆ ಅನುಗುಣವಾಗಿ ಸೈನ್ಯ ಮತ್ತು ಅದರ ಆಡಳಿತ ಕ್ರಮಗಳ ಪ್ರಾಚೀನ ಕಾಲದಿಂದಲೂ ಬದಲಾವಣೆಗೊಂಡಿರುವುದನ್ನು ಚಾರಿತ್ರಿಕ ಸಂಗತಿಗಳಲ್ಲಿ ಕಾಣಬಹುದು.

ಯಾವುದೇ ಒಂದು ರಾಜ್ಯ ಅಥವಾ ಪ್ರದೇಶದ ಚರಿತ್ರೆಯು ಹೆಚ್ಚು ಅವಲಂಬಿತವಾಗಿರುವುದು ಅಲ್ಲಿನ ಭೌಗೋಳಿಕ ಪರಿಸರದ ಮೇಲೆ ಎಂಬುದಂತೂ ಸುಸ್ಪಷ್ಟ ಸೈನ್ಯವ್ಯವಸ್ಥೆ ಮತ್ತು ಯುದ್ದಗಳಿಗೆ ಭೂಭಾಗವು ಬಹಳ ಮುಖ್ಯವೆಂಬುದನ್ನು ಹಲವು ವಿದ್ವಾಂಸರು ಒಪ್ಪುತ್ತಾರೆ. ಕ್ಲಾಸ್‌ವಿಟ್ಜ್ ಭೂಭಾಗದ ಲಕ್ಷಣ ಮಣ್ಣಿನ ಗುಣ, ನೆಲದ ಸ್ವರೂಪ, ಕಾಡು, ನದಿ, ತಗ್ಗುದಿನ್ನೆ, ಅಂಕುಕೊಂಡು ಮಾರ್ಗಗಳು ಹಾಗೂ ರಾಜ್ಯಗಳ ನಡುವಿನ ಅಂತರಗಳು ಸೈನಿಕ ಕಾರ್ಯಚಾರಣೆಯನ್ನು ನಿರ್ಧರಿಸುವ ಅಂಶಗಳು ಎಂದಿದ್ದಾರೆ. ಇದಕ್ಕೆ ಪೂರಕವಾಗಿ ಮತ್ತೊಬ್ಬ ವಿದ್ವಾಂಸರಾದ ಜೊಮಿನಿಯ "ಭೂಭಾಗದ ಸ್ವರೂಪ ಮತ್ತು ಅನುಕೂಲಕರ ವತಾವರಣವು ರಾಷ್ಟ ರಕ್ಷಣೆ ದೃಷ್ಟಿಯಿಂದ ಮುಖ್ಯವಾಗಿದ್ದು ಬೆಟ್ಟಗುಡ್ಡ ಅಥವಾ ದಟ್ಟವಾದ ಕಾಡುಗಳಿಂದ ಕೂಡಿದ ಸ್ಥಳವು ರಾಜ್ಯ ರಚನೆಗೆ ಅತ್ಯಂತ ಉಪಯುಕ್ತವಾದದ್ದು

ಎಂದಿರುವರು. ಒಟ್ಟಿನಲ್ಲಿ ಭೂಭಾಗವು ಸೇನಾಪಡೆಗಳಾದ ಕಾಲ್ದಳ, ಅಶ್ವದಳ, ಗಜದಳ, ಹಾಗೂ ಫಿರಂಗಿದಳಗಳ ಗಾತ್ರ ನಿರ್ವಹಣೆ ಹಾಗೂ ಕಾರ್ಯಚರಣೆಗಳ ಮೇಲೆ ಪರಿಣಾಮ ಬೀರುವುದು."[೧೫]

ಸೈನ್ಯವ್ಯವಸ್ಥೆಯು ವಿಜಯನಗರ ಅರಸರ ಕಾಲದಲ್ಲಿ ಅಂದಿನ ಅರಸು ಮನೆತನಗಳು ಅನುಸರಿಸಿಕೊಂಡು ಬಂದಿದೆ. ಸೈನಿಕ ನೀತಿ–ನಿಯಮಗಳನ್ನು ಹೆಚ್ಚಾಗಿ ಅಳವಡಿಸಿ ವಿಜಯನಗರ ಸಾಮ್ರಾಜ್ಯದ ಸೈನ್ಯವನ್ನು ನೊಡುವುದಕ್ಕೂ ಮೊದಲು ಪ್ರಾಚೀನ ಕಾಲದಿಂದಲೂ ಸೇನಾಬಲ ವಿಂಗಡನೆ ಸಂಬಂಧಿಸಿದಂತೆ ವಿವರಗಳ ದೊರೆಯುತ್ತವೆ. ವೇದಕಾಲ ರಾಮಾಯಣ–ಮಹಾಭಾರತ ಮತ್ತು ಚಾರಿತ್ರಿಕ ಯುಗಕ್ಕೆ ಸೇರಿದ ಮೌರ್ಯ ಸಾಮ್ರಾಜ್ಯ ಅವಧಿಗಳಲ್ಲಿ ಚತುರಂಗಬಲವು ಸಾಮಾನ್ಯವಾಗಿ ಬಳಕೆಯಲ್ಲಿದ್ದಿತು. ಕೌಟಲ್ಯನು ತನ್ನ ಗ್ರಂಥ ಅರ್ಥಶಾಸ್ತ್ರದಲ್ಲಿ ಚತುರಂಗ ಬಲದ ಕಾರ್ಯ ವೈಖರಿಗಳ ಪೂರ್ಣ ವಿವರ ನೀಡುತ್ತಾನೆ. ಜೊತೆಗೆ ಚತುರಂಗದ ಬಲದ ಮುಖಂಡರನ್ನು ಅಶ್ವಾದ್ಯಕ್ಷ, ಹಸ್ತದಕ್ಷ, ರಥಾಧ್ಯಕ್ಷರೆಂದು ಕರೆದಿದ್ದು. ಇದು "ಕ್ರಿ.ಪೂ.ಕಾಲದ ಸೇನಾ ವಿಭಾಗವಾದರೆ ಕ್ರಿ.ಶ ಆರಂಭದ ಹೊತ್ತಿಗೆ ಚತುರಂಗಬಲದಲ್ಲೊಂದು ರಥದಳವು ಕಣ್ಮರೆಯಾದುದನ್ನು ಹಲವು ವಿದ್ವಾಂಸರು ಆಕರಗಳ ಮೂಲಕ ದೃಡಪಡಿಸಿರುವರು."[೧೬]

ಭಾರತದಲ್ಲಿ ಗುಪ್ತರ ಕಾಲದ ಹೊತ್ತಿಗೆ ರಥವು ಕಣ್ಮರೆಯಾಗಿದ್ದು. "ಅಶ್ವದಳ, ಗಜದಳ, ಮತ್ತು ಕಾಲ್ದಳಗಳು ಅಂದಿನ ಮುಖ್ಯ ಸೇನಾ ವಿಭಾಗಗಳಾಗಿದ್ದವೆಂದು ಹೇಳಲಾಗಿದೆ."[೧೭] "ವಿಜಯನಗರ ಮತ್ತು ಅದರ ಪೂರ್ವದಲ್ಲೂ ಸೈನ್ಯದಲ್ಲಿ ಆನೆ, ಕುದುರೆ ಮತ್ತು ಕಾಲಾಳುಗಳಿದ್ದು ವಿದೇಶಿ ಪ್ರವಾಸಿಗರು ತಮ್ಮ ವರದಿಗಳಲ್ಲಿ ದಾಖಲಿಸಿದ್ದಾರೆ. ಶಾಸನಗಳ ಕೂಡ ಈ ಮೇಲಿನ ಮೂರು ವಿಭಾಗಗಳನ್ನೆ ಹೇಳುತ್ತವೆ."[೧೮] ಬಿ.ಎ ಸಾಲ ತೊರೆಯವರು ವಿಜಯನಗರದ ಕಾಲದಲ್ಲಿ ಆರು ಸೈನಿಕ ವಿಭಾಗ ಗಳಿದ್ದವೆಂದು ಹೇಳುತ್ತಾರೆ. ಅವರ ಈ ಹೇಳಿಕೆಗೆ ಆಕರಗಳು ರಾಮರಾಜನ ಬಖೈರು ಮತ್ತು ನೆಲ್ಲೂರಿನ ಶಾಸನಗಳಾಗಿವೆ. ಇವುಗಳನ್ನಾಧರಿಸಿ ಕಾಲ್ದಳ, ಅಶ್ವದಳ, ಗಜದಳ, ರಥ ಅಥವಾ ಬಂಡಿಗಳಿಂದ ಕೂಡಿದ ಯುದ್ದಸ್ತ್ರಗಳು ಒಂಟಿ ಮತ್ತು ಎತ್ತುಗಳೆಂಬುದಾಗಿ ಹೇಳುತ್ತಾರೆ.

ಪ್ರಮುಖವಾಗಿ ಸೇನಾ ಬಲದ ವಿಂಗಡನೆಯನ್ವಯ ವಿಜಯನಗರದ ಸೇನೆಯನ್ನು ಕಾಲ್ದಳ, ಅಶ್ವದಳ, ಗಜದಳ, ಮತ್ತು ಫಿರಾಂಗಿದಳಗಳೆಂಬ ನಾಲ್ಕು ಮುಖ್ಯ ವಿಭಾಗಗಳಲ್ಲಿ ಹಾಗೂ ಪೋಷಕ ಅಥವಾ ಸೈನ್ಯವಾಗಿರುವ ಒಂಟೆ ಎತ್ತು ಕತ್ತೆಗಳನ್ನು ಸೈನ್ಯದಲ್ಲಿ ಬಳಸಿಕೊಳ್ಳಲಾಗುತ್ತಿತ್ತು ಎಂಬುದಾಗಿ ತಿಳಿಯಲಾಗಿದೆ. ಹೀಗೆ ಒಂದು ರಾಜ್ಯ ವ್ಯವಸ್ಥೆಯಲ್ಲಿ ಸೈನ್ಯವ್ಯವಸ್ಥೆಯ ಮುಖ್ಯ ಪಾತ್ರವನ್ನು ವಹಿಸುತ್ತದೆ. ಒಂದು ರಾಜ್ಯವು ವೈಭವದ ತುತ್ತತುದಿಯನ್ನು ಮುಟ್ಟಿರಬೇಕಾದರೆ ಪ್ರಮುಖವಾಗಿ ಅಲ್ಲಿನ ಸೈನ್ಯವವ್ಯಸ್ಥೆಯ ಬಲಿಷ್ಠವಾಗಿರಬೇಕು. ಇಂತಹ ಸೈನ್ಯವವಸ್ಥೆಯೊಳಗೆ ಸೈನಿಕರಾಗಿ ಸೇರುವವರು ಸಾಮಾನ್ಯ ವರ್ಗದ

ಜನರಾದರು ಇವರ ಪಾರಾಕ್ರಮ ನಿಷ್ಠೆಯ ಸೇವೆಯಿಂದ ಒಂದು ರಾಜ್ಯವು ಸುಭದ್ರವಾಗಿರಲು ಸಾಧ್ಯವಾಗುತ್ತದೆ.

ಹೀಗೆ ಒಂದು ರಾಜ್ಯವ್ಯವಸ್ಥೆಯ ಮುಖ್ಯ ಅಂಗವಾಗಿ ಕಾರ್ಯ ನಿರ್ವಹಿಸುವ ಸೈನ್ಯವವಸ್ಥೆಯ ಆ ರಾಜ್ಯದ ರಕ್ಷಣ ಕವಚವಿದ್ದಂತೆ ಇಂತಹ ಸೈನ್ಯದಲ್ಲಿ ಸಾಮಾನ್ಯ ಜನರು ಸೈನಿಕರಾಗಿ ಸೇರಿ ರಾಜನನ ಮತ್ತು ರಾಜ್ಯದ ರಕ್ಷಣೆಗಾಗಿ ಪ್ರಾಣಕ್ಕೆ ಹೆದರದೆ ಧೈರ್ಯವಾಗಿ ಪರಾಕ್ರಮದಿಂದ ಯುದ್ದಗಳಲ್ಲಿ ಹೋರಾಡಿ ನಾಡರಕ್ಷಣೆ ಮಾಡುವುದರಲ್ಲಿ ಸೈನಿಕವ್ಯವಸ್ಥೆಯಲ್ಲಿ ಸೈನಿಕರ ಪಾತ್ರ ಬಹುಮುಖ್ಯವಾಗಿದ್ದು. ಇಂತಹ ಸೈನಿಕರಲ್ಲಿ ಸಾಮಾನ್ಯ ವರ್ಗದ ಜನರೇ ಇದ್ದು ಬಹುಪಾಲು ನಾಯಕರು ಅಥವಾ ಬೇಡರು ಸೈನಿಕ ವೃತ್ತಿಗೆ ಸೇರಿ ಹೋರಾಡಿರುವ ಸಾಕಷ್ಟ ನಿದರ್ಶನಗಳನ್ನು ನಾವುಗಮನಿಸಬಹುದು. ಇಂತಹ ನಾಯಕರು ಸೈನ್ಯವವಸ್ಥೆಯಲ್ಲಿ ಮಾಡಿದ ಸೇವೆಯನ್ನು ಈ ಮುಂದಿನ ಉಪ ಶಿರ್ಷಿಕೆಯಲ್ಲಿ ನೀಡಲಾಗಿದೆ.

೨.೩. ಸೈನ್ಯ ವ್ಯವಸ್ಥೆಯಲ್ಲಿ ನಾಯಕ ಜನಾಂಗ

ಗುಡ್ಡಗಾಡು ಪ್ರದೇಶಗಳಲ್ಲಿ ಬೇಟೆಯನ್ನೇ ಜೀವನವಾಗಿ ರೂಪಿಸಿಕೊಂಡು ಬದುಕುತ್ತಿದ್ದ. ನಾಯಕ ಅಥವಾ ಬೇಡಜನಾಂಗದವರು ಬಿಲ್ಲುಗಾರಿಕೆಯಲ್ಲಿ ನಿಪುಣರಾಗಿದ್ದರು. ಅಷ್ಟೆ ಅಲ್ಲದೆ ನಿರ್ಭಯವಾಗಿ ಹೋರಾಡುವ ಶಕ್ತಿಯನ್ನು ಹೊಂದಿದ್ದರು. ಇಂತಹ ಕ್ಷಾತ್ರ ಪರಂಪರೆಯ ಲಕ್ಷಣಗಳನ್ನು ಹೊಂದಿದ್ದ ಬೇಡರನ್ನು ರಾಜರು ಯುದ್ಧಾಸ್ತ್ರಗಳನ್ನಾಗಿ ಬಳಕೆ ಮಾಡಿಕೊಂಡರು. ದೈಹಿಕವಾಗಿ ಸದೃಡರಾಗಿದ್ದು ಎಂತಹ ಸಂದರ್ಭದಲ್ಲೂ ಧೈರ್ಯದಿಂದ ಎದುರಾಳಿಯೊಡನೆ ಹೋರಾಡುವ ಶಕ್ತಿಯನ್ನು ಕಂಡ ರಾಜರುಗಳು ಬೇಡರನ್ನು ಸೈನ್ಯಕ್ಕೆ ಸೇರಿಸಿಕೊಳ್ಳತೊಡಗಿದರು. ಹೀಗೆ ಬೇಟೆಯ ವೃತ್ತಿಯಿಂದ ನಾಯಕ ಜನಾಂಗವು ಸೈನಿಕ ವೃತ್ತಿಗೆ ಬಂದಂತೆಲ್ಲಾ ಸೈನ್ಯದಲ್ಲಿ ಇವರದೇ ಬಹುಪಾಲಾಗುವುದರೊಂದಿಗೆ ಕರ್ನಾಟಕ ಸೈನ್ಯವೆಂದರೆ ಬೇಡರ ಸೈನ್ಯವೆಂದೇ ಎನ್ನುವಷ್ಟರ ಮಟ್ಟಿಗೆ ಸೈನ್ಯದಲ್ಲಿ ಬೇಡರು ಗುರುತಿಸಿಕೊಂಡಿದರು. –

ಬೇಡರು ಹಿಂದಿನಿಂದಲೂ ಬಹುಸಂಖ್ಯೆಯಲ್ಲಿ ಸೈನ್ಯ ಶಸ್ತ್ರಧಾರಿಗಳು ಮತ್ತು ಆಯುಧ ಜೀವಿಗಳೂ ಆಗಿದ್ದರಿಂದ ಅನೇಕ ರಾಜಮನೆತನಗಳಲ್ಲಿ ಸೈನಿಕ ವೃತ್ತಿಯಲ್ಲಿ ನಾಯಕರನ್ನು ಗಮನಿಸಬಹುದಾಗಿದೆ. "ಶಿವಸ್ಕಂದ ವರ್ಮನ ವಿರುದ್ಧ ಮಯೂರ ಶರ್ಮನಿಗೆ ಶ್ರೀಶೈಲ ಪರ್ವತ ಪ್ರದೇಶದಲ್ಲಿ ಬೇಡ ಸೈನಿಕರು ಸಹಾಯ ಮಾಡಿದರು. ಮತ್ತು ಮಯೂರ ಶರ್ಮನು ಅವರ ಸಹಾಯದಿಂದ ಕದಂಬ ರಾಜ್ಯವನ್ನು ಕಟ್ಟಿದನು. ಹಾಗೆಯೇ ಸೈನ್ಯದ ಕೊರತೆ ಬಿದ್ದಾಗಲೆಲ್ಲ ಗುಡ್ಡಗಾಡು ಜನರನ್ನು ಕರೆಸಿ ಪ್ರತ್ಯೇಕ ಪಡೆಯನ್ನಾಗಿ ಮಾಡಿ ಸೈನ್ಯ ತರಬೇತಿ ನೀಡುತ್ತಿದ್ದರು. ಕಾಲಕ್ರಮೇಣ

ರಾಜ್ಯಗಳ ಉದಯ ಹೆಚ್ಚಾದಂತೆ ರಾಜ ರಾಜರಲ್ಲಿ ಸೈನ್ಯ ಕಟ್ಟುವಲ್ಲಿ ಸ್ಪರ್ದೆಯುಂಟಾಯಿತು. ಹೀಗೆ ಗುಡ್ಡಗಾಡು ಜನರು ಸೈನ್ಯದಲ್ಲಿ ಸೇರಿಕೊಳ್ಳುವ ಕ್ರಿಯೆಯೂ ಜೋರಾಯಿತು. ಗಂಗರು ಬೇಡರನ್ನು ಸೈನ್ಯಕ್ಕೆ ಸೇರಿಸಿಕೊಳ್ಳುವ ಕೆಲಸ ಮಾಡಿದರು. ಇದು ಹೊಯ್ಸಳರ ಕಾಲದವರೆಗೂ ಮುಂದುವರೆಯಿತು."[೧೯]

ಬಾದಾಮಿ ಚಾಲುಕ್ಯರ ಪ್ರಸಿದ್ದ ದೊರೆ ಇಮ್ಮಡಿ ಪುಲಕೇಶಿಯ ನರ್ಮದಾನದಿಯವರೆಗೆ ದಂಡಯಾತ್ರೆಯನ್ನು ಕೈಗೊಂಡ ಉತ್ತರ ಪಥೇಶ್ವರನೆಂದು ಮೆರೆಯುತ್ತಿದ್ದ ಹರ್ಷವರ್ಧನನ್ನು ಸೋಲಿಸಿದನು. "ಪುಲಿಕೇಶಿ ಸೈನ್ಯವನ್ನು 'ಕರ್ನಾಟಕ ಬಲ' ಎಂದು ಕರೆಯಲಾಗುತ್ತಿತ್ತು. ಕನ್ನಡಿಗರ ಸೈನ್ಯ ಸಹಾಸದ ಬಗ್ಗೆ ಹೊಯನ್‌ತ್ಸಾಂಗ್ ಮತ್ತು ಆಲ್‌ಮಸೂದಿ ಮತ್ತಿತರ ಪ್ರವಾಸಿ ಬರಹಗಾರರು ಹೊಗಳಿದ್ದಾರೆ."[೨೦] ಚಾಲುಕ್ಯ ಮತ್ತು ರಾಷ್ಟ್ರಕೂಟದ ಕಾಲದಲ್ಲಿ ಬೇಡ ಪಡೆಗಳು ಕರ್ನಾಟಕ ಸೈನ್ಯದಲ್ಲಿ ಪ್ರಸಿದ್ದಿಯಾಗಿದ್ದವು. "ಕರ್ನಾಟಕ ಸೈನ್ಯವೆಂದರೆ ಬೇಡರ ಸೈನ್ಯವೆಂದೇ ಹೆಸರಾಗಿತ್ತು. ಏಕೆಂದರೆ ಕರ್ನಾಟಕ ಸೈನ್ಯದಲ್ಲಿ ಬೇಡರೇ ಹೆಚ್ಚು ಸಂಖ್ಯೆಯಲ್ಲಿದ್ದರು."[೨೧]

ಹೊಯ್ಸಳ ಪ್ರಸಿದ್ದ ದೊರೆ ವಿಷ್ಣುವರ್ಧನನು ಬೇಡರನ್ನ ಸೈನ್ಯದಲ್ಲಿ ನೇಮಿಸಿಕೊಂಡಿದ್ದನು. ಅವನ ಸೈನ್ಯದಲ್ಲಿ ಬೇಡರ ಪಡೆಯೇ ಮುಖ್ಯವಾಗಿತ್ತು. ಇವನು "ಕ್ರಿ.ಶ.೧೧೧೭ರಲ್ಲಿ ಕಿರಾತ ಮುಖ್ಯಸ್ಥರನ್ನು ಶಕ್ತಿಶಾಲಿ ವೀರರನ್ನ ತನ್ನ ಸಹಾಯಕ್ಕಾಗಿ ನೇಮಿಸಿಕೊಂಡಿದ್ದನು. ಇದೇ ಸಮಯದಲ್ಲಿ ಹೊಯ್ಸಳರಿಗೆ ಮತ್ತು ಸೇವುಣರಿಗೂ ಯುದ್ದವಾದಾಗ, ಬೇಡ ಸೈನಿಕರ ಪಾತ್ರ ನಿರ್ಣಾಯಕವಾಗಿತು."[೨೨] ಹೊಯ್ಸಳರ ಸೈನ್ಯದಲ್ಲಿ ನಡಾಳು ಪಡೆಯ ಮುಖ್ಯವಾಗಿತು. "ಈ ಪಡೆಯು ಬೇಡರು, ಕಳ್ಳರು ಮೊದಲಾದ ಗಿರಿಕಂದರವಾಸಿಗಳಿಂದ ಕೂಡಿತ್ತು."[೨೩] ಬಾಣ ಪ್ರಯೋಗ ಚತುರರಾದ ಬೇಡರ ಪಡೆಯು ಕಾಲ್ದಳದ ಮುಖ್ಯಾಂಗವಾಗಿತ್ತು. ಬೇಡರು ಹಳ್ಳಿಗಳಲ್ಲೂ ದನಗಳ ಅಪಹರಣ ಮೊದಲಾದ ಕಾರ್ಯಗಳನ್ನೆಸಗಿ ಶಾಂತಿಭಂಗಕ್ಕೆ ಕಾರಣವಾಗುವ ಸಂಭವವಿದ್ದುದರಿಂದ ಅವರನ್ನು ಹೊಯ್ಸಳರು ಸೈನ್ಯಕ್ಕೆ ಸೇರಿಸಿಕೊಂಡು ಅಲ್ಲಲ್ಲಿ ತಲೆದೋರುವ ಬಂಡಾಯಗಳ ನಿಗ್ರಹಕ್ಕೆ. ಹೊಸರಾಜ್ಯ ಆಕ್ರಮಣಕ್ಕೆ ಕಾರ್ಯಚರಣೆಗೆ ಹೊರಡುವ ಸೈನ್ಯಕ್ಕೆ ಬಳಸಿಕೊಳ್ಳುತ್ತಿದ್ದರು.

ಕನ್ನಡ ಶಾಸನಗಳಲ್ಲಿ ಕಂಡುಬರುವ ಲೆಂಕರು ಬೇಡ ವೀರರೇ ಇರಬೇಕು ಧರ್ಮ, ಸಾಹಸ ಮತ್ತು ಪ್ರಾಣದ ಹಂಗು ತೊರೆದು ತಮ್ಮ ಸ್ವಾಮಿಗಾಗಿ ಹೋರಾಡುತ್ತಿದ್ದರು. ಇವರ ಗುಣಗಳು ಬೇಡರ ಗುಣಗಳಿಗೆ ಸರಿಸಮನಾಗಿ ಇವರು ಯುದ್ಧ ಶಿಕ್ಷಣವನ್ನು ಹೊಂದಿ ತಮ್ಮ-ತಮ್ಮ ಊರುಗಳಲ್ಲಿ ಜೀವಿಸುತ್ತಾ ಯುದ್ಧ ಸಮಯದಲ್ಲಿ ಸೇನೆಯನ್ನು ಸೇರಿಕೊಳ್ಳುತ್ತಿದ್ದರು. ಇವರಿಗೆ "ಕೆಲವು ಊರುಗಳನ್ನು ಬಿಟ್ಟುಕೊಟ್ಟು ಆ ಊರುಗಳ ಆದಾಯವನ್ನು ಅನುಭವಿಸುವಂತೆ ರಾಜನೋ ಸಾಮಂತನೋ ನೇಮಿಸುತ್ತಿದ್ದನು."[೨೪] ಹೀಗಾಗಿ ಯುದ್ದದಲ್ಲಿ ಭಾಗವಹಿಸುವುದು ವಂಶಪಾರಂಪರ್ಯವೆನಿಸಿತು.

ಬೇಡರು ಬೆಳೆಯಲು ಅವರ ಸೈನ್ಯ ವೃತ್ತಿಯೆ ಸಹಾಯವಾಯಿತು. ನಂತರ ಈ ವೃತ್ತಿಯು ವಂಶಪಾರಂಪರ್ಯವೆನಿಸಿತು. "ಬೇಡರ ಬೆಳೆಯಲು ಅವರ ಸೈನ್ಯ ವೃತ್ತಿಯೂ ಸಹಾಯವಾಯಿತು. ನಂತರ ಈ ವೃತ್ತಿಯು ವಂಶಪರಂಪರೆಯೂ ಆಯಿತು. ವಿಜಯನಗರ ಸ್ಥಾಪನೆಯಾಗುವ ತೆಲುಗು ಸೀಮೆಯಲ್ಲಿ ಬೇಡರ ಸಂಸ್ಥಾನಗಳಿದ್ದವು."[೨೫] ಬೇಡರು ಈ ಹಿಂದಿನಿಂದ ಅನುಭವಿಸಿಕೊಂಡು ಬಂದ ಸೈನಿಕ ವೃತ್ತಿಯನ್ನು ಮುಂದುವರೆಸಿದ್ದರು. "ಮೂರನೇ ಬಲ್ಲಾಳನು ತನ್ನ ಕೋಟೆಯ ರಕ್ಷಣೆಗಾಗಿ ಕಿರಾತಪಡೆಯನ್ನು ಸ್ಥಾಪಿಸಿದನು."[೨೬]

ಮಲ್ಲಿಕಾಫಿರನ ದಾಳಿಯನ್ನು ತಡೆಯಲು ೩ನೇ ಬಲ್ಲಾಳನು ಮಾಡಿದ ಪ್ರಯತ್ನಗಳೆಲ್ಲಾ ವಿಫಲವಾದವು. ದಕ್ಷಿಣಭಾರತದಲ್ಲಿದ್ದ ಎಲ್ಲಾ ಅರಸರು ಅವರಿಗೆ ಶರಣಾಗಿ ಕಪ್ಪಕಾಣಿಕೆಯನ್ನು ನೀಡಿದರು. ಆದರೆ ತುಂಗಭದ್ರ ತೀರದಲ್ಲಿದ್ದ ಕುಮ್ಮಟದುರ್ಗ ಮಾತ್ರ ಮುಸ್ಲಿಂ ದೊರೆಗಳಿಗೆ ಸುಲಭವಾಗಿ ಶರಣಾಗಲಿಲ್ಲ, ಅಲ್ಲಿನ ಬೇಡ ಪಾಳೆಯಗಾರರು ಧೈರ್ಯ ಸಾಹಸ, ಮುಸ್ಲಿಂರ ವಿರುದ್ಧ ನಡೆಸಿದ ಹೋರಾಟ, ಅವರಲ್ಲಿದ್ದ ರಾಜ್ಯಕಟ್ಟುವ ಹುಮಸ್ಸು ಸಾಮ್ರಾಜ್ಯದೊಡೆಯನಿಗಿಂತ ಕಡಿಮೆಯೇನು ಇರಲಿಲ್ಲ.ಮುಮ್ಮಡಿ ಸಿಂಗನು ಕಮ್ಮಟ ದುರ್ಗದ ಮೊದಲ ಪಾಳೆಯಗಾರ ಎಂಬುದನ್ನು "ಕ್ರಿ.ಶ.೧೨೮೦ ಮತ್ತು ೧೨೮೭ ಶಾಸನಗಳ ಸಮರ್ಥಿಸುತ್ತವೆ. ಹಾಗೇಯೇ ಸೈನ್ಯದಲ್ಲಿ ಬಲಿಷ್ಠವಾಗಿದ್ದರು ಎಂಬುದು ಇದರಿಂದ ತಿಳಿಯುತ್ತವೆ. ಕಂಪಿಲರಾಯನ ಮಗ ಕುಮಾರ ರಾಮನು ತಂದೆಯಂತೆ ಸ್ವಾತಂತ್ರ್ಯಭಿಮಾನಿ, ಶೂರ ಹೋರಾಟಗಾರನಾಗಿದ್ದನು. ಕಂಪಿಲರಾಯನಿಗೆ ಸಹಾಯಕನಾಗಿ ನಿಂತು ಕುಮಾರ ರಾಮನು ಅನೇಕ ಯುದ್ದಗಳನ್ನು ಗೆದ್ದನು. ಯೋಧನಾದ ಕುಮಾರ ರಾಮನು ಕುಮಟ್ಟಿದುರ್ಗವನ್ನು ಒಂದು ಹೊಸರಾಜಧಾನಿಯಾಗಿ ಮಾರ್ಪಡಿಸಿದನು."[೨೭] ಹೊಸಮಲೆ ಪಟ್ಟಣದ ಪ್ರಜೆಗಳೆಲ್ಲರೂ ಹೊಸ ಕುರ್ಮಟದುರ್ಗಕ್ಕೆ ಬಂದು ನೆಲಸಿದರು ರಾಮನಾಥನ ಭಾವಮಲ್ಲ ಎಂಬುವನು ನಾನ್ನ ದೊರೆಗಳಿಗೆ ಕಳುಹಿಸಿ ವೀರರ ಬೇಡರನ್ನು ಕರೆಯಿಸಿಕೊಂಡು.ಬೇಡ ಪಡೆಗಳನ್ನು ಏರ್ಪಡಿಸಿದನು. ಈ ರೀತಿಯಾಗಿ ಭೋಟಿ ಬೊಮ್ಮ, ಮುದಿಗೊಂಡಲೋಬ, ಬೇಟಸಿಂಗ ಮೊದಲಾದ "ಎಪ್ಪತ್ತು ಮಾನ್ಯರ ಅಧೀನದಲ್ಲಿ ಬೇಡ ಸೈನ್ಯವು ತುಕಡಿಗಳಾಗಿ ವಿಂಗಡಿಸಲ್ಪಟ್ಟಿತು. ಸೋದರ ಮಾವಂದಿರು ಅಶ್ವಸೇನಾಪತಿಗಳಾದರು."[೨೮]

ಓರಂಗಲ್ಲಿನ ಪ್ರತಾಪರುದ್ರನ ಮೇಲೆ ಸೈನ್ಯ ಸಮೇತನಾಗಿ ಹೋಗಿ ಜಯಶೀಲನಾಗಿ ಅಲ್ಲಿಂದ ಪ್ರಸಿದ್ದ "ಎಪ್ಪತರಾಯನ ಬೊಲ್ಲ ಎಂಬ ಪ್ರಸಿದ್ದ ಅಶ್ವವೊಂದನ್ನು ತೆಗೆದುಕೊಂಡು ಬಂದು ಸಕಲಬಿರುದುಗಳನ್ನು ಇಟ್ಟುಕೊಂಡನು."[೨೯] ಹೊಯ್ಸಳ ದೊರೆ ವೀರಬಲ್ಲಾಳನ ಮೇಲೆ ೧೬ ಸಾವಿರ ಪಡೆಯೊಂದಿಗೆ ದಾಳಿ ಮಾಡಿದನೆಂದರೆ ಕುಮಾರ ರಾಮನ ಸೈನ್ಯದ ಸಾಮರ್ಥ್ಯ ಗೊತ್ತಾಗುತ್ತದೆ. ಹಾಗೆಯೇ ಬೇಡರ ಪಡೆಯು ಎಷ್ಟ ಬಲವನ್ನು ಹೊಂದಿತ್ತು ಎಂಬುದು ಇದರಿಂದ ತಿಳಿಯುತ್ತದೆ.

ವಿಜಯನಗರ ಕಾಲದಲ್ಲು ಕೂಡ ನಾಯಕ ಜನಾಂಗದವರು ವಿಜಯನಗರ ರಕ್ಷಣಾ ಕಾರ್ಯದಲ್ಲಿ ನಿರತರಾದರು. ಯೋಧ ವೃತ್ತಿಯಲ್ಲಿ ಪಳಗಿದ್ದವರು ಈ ನಾಯಕರು. "ಈ ಕಾಲಕ್ಕಾಗಲೆ ಅವರ ಮುಖ್ಯ ವೃತ್ತಿ ಯುದ್ದ ಮಾಡುವುದಾಗಿತ್ತು."[೩೦] ಯೋಧ ವೃತ್ತಿಯು ವಂಶಪರಾಂಪರ್ಯವಾಗಿ ಬೇಡ ಜನಾಂಗದಲ್ಲಿ ಮುಂದುವರೆಯಿತು. ವಿಜಯನಗರ ಅರಸರು ಬೇಡರನ್ನು ಸೈನ್ಯದಲ್ಲಿ ಸೇರಿಸಿಕೊಂಡರು. "ವಿಜಯನಗರದ ಸೈನ್ಯದ ಬಹುಭಾಗವು ಈ ಬೇಡರ ಕಾಲಾಳುಗಳ ಪಡೆಯಿಂದ ಕೂಡಿದ್ದಿತು."[೩೧] "ಅಲ್ಲದೆ ಸೈನ್ಯದ ಅನೇಕ ಹುದ್ದೆಗಳಲ್ಲಿ ಬೇಡರಿದ್ದರು."[೩೨] ಕ್ರಿ.ಶ.೧೩೪೭ರಲ್ಲಿ ಬಹುಮನಿ ಸಾಮ್ರಾಜ್ಯವು ಸ್ಥಾಪನೆಯಾಯಿತು. ಬಹುಮನಿ ಸುಲ್ತಾನರು ವಿಜಯನಗರದ ಮೇಲೆ ಸದಾ ಕಾಳಗವನ್ನು ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಮುಸ್ಲಿಂ ದಾಳಿಗಳನ್ನು ತಡೆಯುವುದಕ್ಕಾಗಿ ಬೇಡರನ್ನು ನೇಮಕ ಮಾಡಿಕೊಂಡರು. ಈ ಜವಾಬ್ದಾರಿಯನ್ನು ಬೇಡ ಸೈನಿಕರು ಸಮರ್ಥವಾಗಿ ನಿರ್ವಹಿಸಿದರು. ಅವರು "ಮುಸ್ಲಿಂ ದಾಳಿಗಳು ಕೃಷ್ಣನದಿಯನ್ನು ದಾಟದಂತೆ ನೋಡಿಕೊಳ್ಳುವಲ್ಲಿ ಮುಖ್ಯಪಾತ್ರ ವಹಿಸಿದ್ದರು."[೩೩] ವಿಜಯನಗರದ ಸಾಮ್ರಾಜ್ಯದ ಸೈನ್ಯದಲ್ಲಿ ಮೀಸಲು ಪಡೆಯೆಂಬುದು ಇತ್ತು, ಆ ಮೀಸಲು ಪಡೆಯಲ್ಲಿ "ಬೇಡರು ನಾಯಕರಾಗಿದ್ದರು ಎಂದು ಹೇಳಲಾಗಿದೆ."[೩೪]

ವಿಜಯನಗರ ಕಾಲಕ್ಕೆ ಬೇಟಿ ನೀಡಿದ ವಿದೇಶಿ ಪ್ರವಾಸಿಗರು ವಿಜಯನಗರ ಸೈನ್ಯದ ಬಗ್ಗೆ ತುಂಬಾ ಕೊಂಡಾಡಿದ್ದಾರೆ. ಸೈನ್ಯದಲ್ಲಿ ಬೇಡರು ಪ್ರಮುಖ ಸ್ಥಾನದಲ್ಲಿದ್ದರು. "ಪೆರಿಯ ಓಬಳನಾಯಕ ಎಂಬುವನು ವಿಜಯನಗರ ಸೈನ್ಯದಲ್ಲಿ ಉನ್ನತ ಹುದ್ದೆಯನ್ನು ಹೊಂದಿದ್ದನು."[೩೫] ಯೋಧ ವೃತ್ತಿಯಲ್ಲಿ ಪ್ರಸಿದ್ದಿಯನ್ನು ಪಡೆದ ಬೇಡ ಜನಾಂಗವನ್ನು ದಕ್ಷಿಣ ಭಾರತದ ಅರಸರು ಹೋರಾಟದ ಸಾಧನವನ್ನಾಗಿ ಬಳಸಿಕೊಳ್ಳುತ್ತಿದ್ದರು. ವಿಜಯನಗರದ ದೊರೆಯಾದ ೩ನೇ ಹರಿಹರನು ಪಾಳೆಯಗಾರರ ಮೇಲೆ ಮತ್ತು ನಾಯಕರುಗಳ ಮೇಲೆ ನಿಗದಿ ಮಾಡಿದ್ದ ವಾರ್ಷಿಕ ಪೂಗದಿಯನ್ನು ವಸೂಲಿ ಮಾಡುವ ಹಿರಿಮೆಯನ್ನು ಪಡೆದಿದ್ದನು. ಹೀಗಿರುವಾಗ ಗುರ್ರಂ ಕೊಂಡ, ಪೆನಗೊಂಡ, ಪಾತಪಲ್ಲಿ, ಅಮರಕೊಂಡ, ಕೊಂಕುಟ್ಟಿ ಎಲ್ಲುಂಟು ಮುಂತಾದ ಪ್ರದೇಶದ ಪಾಳೆಗಾರರು ಕಪ್ಪಕಾಣಿಕೆಯನ್ನು ನಿಲ್ಲಿಸಿದ್ದರು. ಆಗ ಕದಿರಪ್ಪನಾಯಕನು ವಿಜಯನಗರದ ವೀರ ದಂಡನಾಯಕ ಪೂಜಾಸಿಂಗನ ಜೊತೆಗೂಡಿ ಮತ್ತು ತಮ್ಮಂದಿರನ್ನು ಜೊತೆ ಸೇರಿಸಿಕೊಂಡು ಇವರ ಮೇಲೆ ದಾಳಿ ಮಾಡಿ ವೈರಿಗಳನ್ನು ಸೋಲಿಸಿ ಕಪ್ಪವನ್ನು ಸಂಗ್ರಹ ಮಾಡಿದನೆಂದು ಶಾಸನಗಳು ತಿಳಿಸುತ್ತವೆ. ಈ ಯುದ್ದದಲ್ಲಿ ತನ್ನ ತಮ್ಮಂದಿರನ್ನು ಮೋಸದಿಂದ ಕೊಲ್ಲಲ್ಲಾಯಿತು. ಕೋಪಗೊಂಡ ಕದಿರಪ್ಪನಾಯಕ ಶತ್ರುಗಳ ತಲೆಯನ್ನು ಕತ್ತರಿಸಿದನಲ್ಲದೆ ವಿಜಯನಗರದ ದೊರೆಗಳಿಗೆ ಗುರುತಾಗಿ ಬೆರುಳಗಳನ್ನು ಕಳುಹಿಸಿದನೆಂದು ಹೇಳಲಾಗಿದೆ. ಇದರಿಂದ ಹರ್ಷಗೊಂಡ ೩ನೇ ಹರಿಹರ ಬಾಗೇಪಲ್ಲಿ, ಚೇಳೂರು ಮತ್ತು ಅದಕ್ಕೆ ೨೩ ಗ್ರಾಮಗಳನ್ನು ಬಳುವಳಿಯಾಗಿ ನೀಡಿ ಮತ್ತು ವಿಜಯನಗರದ ೧೬ ಮಂದಿ ಸೇನಾಪತಿಗಳಲ್ಲಿ ಪ್ರಮುಖ

ಸೇನಾಪತಿಯಾಗಿ ಕದಿರಪ್ಪನಾಯಕನನ್ನ ನೇಮಿಸಿದರೆಂಬುದಾಗಿ ತಿಳಿದುಬರುತ್ತದೆ. ಹೀಗೆ ವಿಜಯನಗರ ಕಾಲದಲ್ಲು ಕೂಡ ಸೈನ್ಯವವಸ್ಥೆಯಲ್ಲಿ ನಾಯಕ ಜನಾಂಗವು ತುಂಬ ಪ್ರಾಮುಖ್ಯತೆ ಹೊಂದಿದ್ದು. ವಿಜಯನಗರದ ಅಂತ್ಯದ ನಂತರ ಜನಾಂಗವು ಸ್ವತಂತ್ರ ಪಾಳೆಗಾರರಾಗಿ ಆಡಳಿತ ನೆಡೆಸಿದರು. ಅಲ್ಲಿಯೂಕೂಡ ಯೋಧರಾಗಿ ನಾಡ ರಕ್ಷಣೆಗೆ ಹೋರಾಡಿದರು. ಎಂದು ಹೇಳಬಹುದು.

ಒಂದು ಪ್ರದೇಶವನ್ನು ಆಡಳಿತ ಸ್ಥಾನವಾಗಿರಿಸಿಕೊಂಡ ಒಂದು ಭೂಪ್ರದೇಶವನ್ನು ವಿಸ್ತರಿಸುವ ಸಲುವಾಗಿ ರಾಜರುಗಳು ತಮ್ಮ ಅದಿಪತ್ಯಕ್ಕಾಗಿ ರಾಜ್ಯಗಳನ್ನು ನಿರ್ಮಿಸಿಕೊಂಡು ಅಂತಹ ರಾಜ್ಯವ್ಯವಸ್ಥೆಯಲ್ಲಿ ಸಪ್ತಾಂಗ ವ್ಯವಸ್ಥೆಯಲ್ಲಿ ಸೈನ್ಯ ವ್ಯವಸ್ಥೆಯ ಒಂದಾಗಿದ್ದು ವಿಶಾಲ ಸಾಮ್ರಾಜ್ಯ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸುವಂಥದ್ದು ಸೈನ್ಯ ಸೈನ್ಯವು ಯಾವುದೇ ರಾಜ್ಯದ ಅವಿಭಾಜ್ಯ ಅಂಗ ಆದುದ್ದರಿಂದಲೇ ಸೈನ್ಯವಿಲ್ಲದೆ ರಾಜ್ಯವನ್ನು ಕಟ್ಟಲು ಸಾದ್ಯವಾಗದು. ಇಂತಹ ಸೈನ್ಯ ವ್ಯವಸ್ಥೆಯಲ್ಲಿ ಸೈನಿಕರ ಪಾತ್ರ ಮುಖ್ಯವಾಗುತ್ತದೆ. ಸೈನಿಕನ ಧೈರ್ಯ, ಪರಾಕ್ರಮ ನಿಷ್ಠೆ ಇವುಗಳಿಂದ ಎದುರಾಳಿಯೊಂದಿಗೆ ನಿರ್ಭಯವಾಗಿ ಹೊರಾಡಿ ನಾಡ ರಕ್ಷಣೆಯೊಂದಿಗೆ ರಾಜ್ಯದ ವಿಸ್ತರಣೆಗೂ ಸೈನಿಕರು ಮಹತ್ವ ಪಡೆಯುತ್ತಾರೆ ಇಂತಹ ಸೈನಿಕರಲ್ಲಿ ಗುರುತಿಸಿ ಕೊಂಡವರಲ್ಲಿ ಬೇಡರೇ ಮುಖ್ಯರು ಎಂದು ಹೇಳಬಹುದಾಗಿದ್ದು ಸೈನ್ಯದಲ್ಲಿ ಇವರನ್ನೇ ಹೆಚ್ಚಾಗಿ ಗುರುತಿಸಬಹುದು.

ಅಡಿಟಿಪ್ಪಣಿಗಳು

೧. ಸೋಮಶೇಖರ್ ಎಸ್.ವೈ., **ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧ ನೀತಿ,** ಪು.೨೨

೨. ಅದೇ, ಪು.೩೩

೩. ಅದೇ, ಪು.೨೨

೪. ಅದೇ, ಪು.೭೧

೫. ವಿಜಯ ಪೂಣಚ್ಚ ತಂಬಂಡ (ಸಂ), **ಚರಿತ್ರೆ ಬರವಣಿಗೆ ಕ್ರಮಗಳು ಮತ್ತು ಸಂಶೋಧನಾ ವಿಧಾನ,** ಪು.೪೯

೬ ರಾಜಾರಾಮ ಹೆಗಡೆ, **ವಸಾಹತು ಪೂರ್ವ ಕರ್ನಾಟಕದ ರಾಜ್ಯಪದ್ಧತಿ,** ಪು.೪

೭ ರಾಬರ್ಟ್‌ಸಿವೆಲ್, **ಮರೆತುಹೋದ ಮಹಾಸಮ್ರಾಜ್ಯ ವಿಜಯನಗರ,** ಸದಾನಂದಕನವಳ್ಳಿ(ಅನು), ಪು.೪೦೮

೮. Sarkar D.C., **Military History of India,** Pp.262

೯. ವೆಂಕಟರತ್ನ ಎ.ವಿ., **ವಿಜಯನಗರ ಕಾಲದ ಸ್ಥಳೀಯ ಸರ್ಕಾರ**, ಪು.೫

೧೦. ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಪು.೨೪೬

೧೧. ಸೋಮಶೇಕರ್ ಎಸ್.ವೈ. **ಪೂರ್ವೋಕ್ತ**, ಪು.೧೧

೧೨. Saletore B.A., **social and political life in the vijayanagar empire**, p no 420

೧೩. ಶ್ರೀಕಂಠಯ್ಯ ಎಸ್., **ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜೀವನ**, ಚಿತ್ರ ಪು.೧೨೧

೧೪. ಸೋಮಶೇಕರ್ ಎಸ್.ವೈ., **ಪೂರ್ವೋಕ್ತ**, ಪು.೧೬

೧೫. ಅದೇ, ಪು.೩೩

೧೬. ಅದೇ, ಪು.೨೪

೧೭. ಅದೇ, ಪು.೨೫

೧೮. ಎ.ಕ. VII, ಸೊಬ, ೩೭೫

೧೯. ಕೇಶವರಾವ್ ಎಂ.ವಿ., ಕೇಶಭಟ್ಟ ಎಂ.(ಸಂ), **ಕರ್ನಾಟಕ ಇತಿಹಾಸ ದರ್ಶನ**, ಸಂಪುಟ ೮, ಪು.೨೨೪

೨೦. ಕಪಟರಾಳ ಕೃಷ್ಣರಾವ್, **ಸುರಪೂರ ಸಂಸ್ಥಾನ ಇತಿಹಾಸ**, ಪು.೨೨೪

೨೧. ವೀಣಾ ಎಂ.ಪಿ., **ಮನೆ ಸಮಾಜ ಮತ್ತು ಸಂಸ್ಕೃತಿ**, ಪು.೧೩

೨೨. ಹರ್ತಿಕೋಟೆ ವೀರೇಂದ್ರಸಿಂಹ ಮತ್ತು ತೇಜಸ್ವೀಕಟ್ಟೆಮನಿ(ಸಂ), **ಘಟ್ಟ ಹೊಸಹಳ್ಳಿ ಗಟ್ಟಿಗ**, ಪು.೩೬

೨೩. ಕೇಶವರಾವ್ ಎಂ.ವಿ., ಕೇಶವಭಟ್ಟ ಎಂ.(ಸಂ), **ಪೂರ್ವೋಕ್ತ**, ಪು.೯೧೯

೨೪. ಚಿದಾನಂದಮೂರ್ತಿ ಎಂ., **ಪೂರ್ವೋಕ್ತ**, ಪು.೨೬೮

೨೫. ವೆಂಕಟರಂಗೋಕಟ್ಟಿ, ಗೈಝುಟಿಯರ್, **ಮುಂಬೈ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು ಅಥವಾ ದಕ್ಷಿಣ ಮಹಾರಾಷ್ಟ್ರಗಳ ಸಹಿತ**, ಪು.೧೯೯

೨೬. ಮಹಾದೇವ ಸಿ., *ತಿರುವಲಾದೇವಿಯರ ಪಟ್ಟಣ ನಾಗಲಾಪುರ ಹೊಸಪೇಟೆ ಒಂದು ಪರಿಶೀಲನೆ*, **ಇತಿಹಾಸ ದರ್ಶನ ಸಂಪುಟ**, ಪು.೧೯೯

೨೭. ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ ಎಂ.ವಿ.(ಸಂ), **ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನಾ ಲೇಖನಗಳು**, ಪು. ೪೭೬

೨೮. ಅದೇ, ಪು.ಸಂ.೪೮೧

೨೯. ಕಲಬುರ್ಗಿ ಎಂ.ಎಂ.(ಸಂ), **ಕರ್ನಾಟಕ ಕೈಪಿಯತಗಳು**, ಪು.೪೯೩

೩೦. ಷೇಕ್ ಅಲಿ (ಸಂ), **ಕರ್ನಾಟಕ ಚರಿತ್ರೆ ಸಂಪುಟ–೩**, ಪು.೨೪೬

೩೧. ಹರ್ತಿಕೋಟೆ ವೀರೇಂದ್ರಸಿಂಹ, **ನಾಯಕ ಜನಾಂಗದ ಪರಂಪರೆ**, ಪು.೨೯

೩೨. ಅಯ್ಯರ್ ಎಲ್.ಕೆ.ಎ., **ದಿ ಮೈಸೂರು ಟ್ರೈಬ್ಸ್ ಆಂಡ್ಯ್ ಕ್ಯಾಸ್ಟ್ಸ್**, ಪು.೧೯೯

೩೩. ಕೃಷ್ಣರಾವ್ ಎಂ.ವಿ., ಹಾಲಪ್ಪ (ಸಂ) ಜಿ.ಎಸ್., **ಹಿಸ್ಟರಿ ಆಫ್ ಫ್ರೀಡಂ ಮೂವ್ಮೆಂಟ ಇನ್ ಕರ್ನಾಟಕ ವ್ಯಾಲೂಮ್ ೧**

೩೪. ಈಶ್ವರಪ್ಪ ಎಂ.ಜಿ., **ಮ್ಯಾಸ ಬೇಡರು**, ಪು.೬

೩೫. ಶಿವಶಂಕರ,ಎಂ.ಎಲ್., ಚನ್ನಬಸಪ್ಪ ಎಸ್.ಪಟೇಲ(ಸಂ), **ವಿಜಯನಗರ ಅಧ್ಯಯನ ಸಂಪುಟ–೨**, ಪು.೯೬

ಅಧ್ಯಾಯ ಮೂರು

ನಾಯಕ ಜನಾಂಗದ ಹುಟ್ಟು ಮತ್ತು ಬೆಳವಣಿಗೆ

ಅಧ್ಯಾಯ ಮೂರು

ನಾಯಕ ಜನಾಂಗದ ಹುಟ್ಟು ಮತ್ತು ಬೆಳವಣಿಗೆ

೩.೧. ನಾಯಕ ಜನಾಂಗದ ಹುಟ್ಟು

ಆದಿಮಾನವನ ಮೂಲ ನೆಲೆ ಅರಣ್ಯ. ಅಲ್ಲಿ ಗೆಡ್ಡೆಗೆಣಸುಗಳನ್ನು ಹಣ್ಣುಹಂಪಲುಗಳನ್ನು ತಿನ್ನುತ್ತಾ ಬದುಕುತ್ತಿದ್ದ ಮಾನವ ತನ್ನ ಸಂಸ್ಕೃತಿಯ ವಿಕಾಸದ ಮೊದಲ ಭಾಗದಲ್ಲಿ ಕೈಗೊಂಡ ವೃತ್ತಿ 'ಬೇಟೆ' ಮನುಕುಲದ ಪ್ರಾಚೀನ ವೃತ್ತಿಯಾಗಿ ಈ ಬೇಟೆ ಗುರುತಿಸಲ್ಪಟಿದೆ. ಇಂದಿಗೂ ಬೇಟೆ ಮತ್ತು ಬೇಡ ಜನಾಂಗದ ನಡುವೆ ನಿಕಟವಾದ ಸಂಬಂದವಿದೆ ಈ ಅರ್ಥದಲ್ಲಿ ಬೇಡ ಜನಾಂಗ ಅತ್ಯಂತ ಪ್ರಾಚೀನ ಜನಾಂಗವಾಗಿದ್ದು ಮತ್ತು ದೀರ್ಘಕಾಲೀನ ಇತಿಹಾಸವನ್ನು ಹೊಂದಿದೆ.

"ಬೇಡ ಎಂಬ ಪದವು ವ್ಯಾಧ ಎಂಬ ಸಂಸ್ಕೃತ ಪದದ ಸಮನಾರ್ಥವಾಗಿದೆ. ಬೇಡ ಅಥವಾ ವ್ಯಾಧ ಎಂದರೆ. 'ಬೇಟೆಗಾರ' ಎಂದು ಅರ್ಥ ಕರ್ನಾಟಕದಲ್ಲಿ 'ನಾಯಕ' ಎಂಬ ಪದಕ್ಕೆ ಪರ್ಯಾಯವಾದ ಪದಗಳಿವೆ ಅವುಗಳಲ್ಲಿ ಬೇಡ, ಬೇಡರ, ತಳವಾರ, ಕಿರಾತಕ, ಶಬರ, ಪುಳಿಂದ, ವಾಲ್ಮೀಕಿ ಮಕ್ಕಳು, ಗುರಿಕಾರರು, ಕನ್ನಯ್ಯಕುಲ, ಪಾಳೆಗಾರರು, ದೊರೆ ಮಕ್ಕಳು"[೧] ಎಂಬಿತ್ಯಾದಿ ಹೆಸರುಗಳಿಂದ ಕರೆಯಲ್ಪಡುತ್ತಾರೆ. ಆದಿ ಮೂಲವಾದ ಭಗವಂತನು ಬೇಡರ ಚಂಚುಲಕ್ಷ್ಮಿಯನ್ನು ಮದುವೆಯಾಗುವ ಮೂಲಕ ಬೇಡರ ವಂಶವನ್ನು ಬೆಳೆಯಿಸಿದನಂತೆ. ಅದರಂತೆ ಮನುವಿನ ಏಳನೆಯ ತಲೆಯವನ್ನಾಗಿ ಚಂದ್ರವಂಶದಲ್ಲಿ ಕಾರ್ತವೀರ್ಯಾರ್ಜುನ ಹುಟ್ಟಿದ ಈ ಹೇಹಯ ರಾಜ್ಯವನ್ನು ಆಳುತ್ತಿರುವಾಗ ವೈಷ್ಣವ ಯಾಗದಿಗಳನ್ನು ಮಾಡುತ್ತಿದ್ದ. ಇದೇ ಸಂದರ್ಭದಲ್ಲಿ ಜಮದಗ್ನಿ ಈತನಿಂದ ಹತನಾದ ಇದರಿಂದ ಕುಪಿತನಾದ ವೇಂದನ್, ವೆಟ್ಟುವ್ ಎಂದೆಲ್ಲ ಕರೆಯಲಾಗಿದೆ. "ಹಳೆಗನ್ನಡದಲ್ಲಿ ವೇಡರ್, ವಿದಿರ್, ಬೇಂಟೆಯವರ್ ಬೇಂಟಿಕಾರ, ವಿಯದರ್, ಬಿಯದರ್, ಕುಣಿಂದರ್, ಕೊವರ್ ಎಂಬ ನಾಮಗಳಿವೆ ರಾಷ್ಟ್ರಕೂಟರ ಅಪಭ್ರಂಶ ಭಾಷೆಯಲ್ಲಿ ನಾಹಲ, ನಾಹಿಲ, ನಾ ಇಲ್ಲ, ನಾಹ,

ಸಮರ, ನಿಮಿರ, ಬೇಂಡ, ಬುದ್ದಿಯ ಮುಂತಾಗಿ ಗುರುತಿಸಲಾಗಿದೆ. ಇವೆಲ್ಲ ಪದಗಳು ಬೇಡ ಜನಾಂಗದ ಹುಟ್ಟಿನ ಬಗ್ಗೆ ಸ್ಪಷ್ಟೀಕರಿಸುತ್ತದೆ."[೨]

ಬೇಡ ಜನಾಂಗದ ಅಸ್ತಿತ್ವವನ್ನು ಪುರಾಣ–ಪ್ರಾಚೀನ ಇತಿಹಾಸ ಕಾಲದಿಂದಲೂ ಗುರುತಿಸುವ ಪ್ರಯತ್ನಗಳು ನಡೆದಿವೆ. ಶಿವನ ಒಂದು ಅಂಶವೇ ಬೇಡ ಜನಾಂಗವಾಗಿ ಜನ್ಮತಾಳಿತು. ಇವರು ಕಣ್ವ ಋಷಿಗಳ ವಂಶಸ್ಥರು ಕನ್ನಯ್ಯನವರು ಎಂದರೆ, ಶ್ರೀಕೃಷ್ಣ ಪರಿವಾರದವರು (ಶ್ರೀಕೃಷ್ಣನ ಅಂತ್ಯ ಅಶೀರ್ವಾದಕ್ಕೆ ಪಾತ್ರನಾದ ಮೂಗನಾಯಕ) ರಾಮೋಶಿ ಎಂದು ಕರೆಸಿಕೊಳ್ಳುವ ಮೂಲಕ ರಾಮನ ವಂಶದವರು ಪರುಶುರಾಮನ ದಾಳಿಗೆ ನಡುಗಿದ ಕ್ಷತ್ರಿಯ ರಾಜರುಗಳೇ ಕಾಡನ್ನು ಸೇರಿ ಬೇಡನಾಯಕರಾದರು ಎಂದೂ ಮುಂತಾಗಿ ಹಲವು ಬಗೆಯ ವಂಶಮೂಲಗಳನ್ನು ಹೇಳುತ್ತಾರಾದರೂ ಇವುಗಳಲ್ಲಿ ಸತ್ಯಾಂಶ ಎಷ್ಟು ಎಂಬುದನ್ನು ನಿರ್ಣಯಿಸುವು ಕಷ್ಟಸಾಧ್ಯ. ಆದರೆ ಬೇಡರ ಮಹಿಮಾನ್ವಿತ ಚೇತನಗಳು ಪುರಾಣೇತಿಹಾಸ ಕಾಲದಿಂದಲೂ ಪ್ರಕಾಶಿಸುತ್ತಾ ಬಂದಿರುವುದನ್ನು ಅಲ್ಲಗಳೆಯಲಾಗುವುದಿಲ್ಲ.

ಬೇಡ ಜನಾಂಗದ ಮೂಲ ವಾಲ್ಮೀಕಿ ಎಂದು ಹಲವರ ಅನಿಸಿಕೆ ಕಿರಾತರ ಯಜಮಾನ ಈ ಕಾಮಕೇತು, ಲಕ್ಷ, ಮೀನು, ಮಲ್ಲರೆಂಬ ಇನ್ನಿತರ ಏಳು ಜನ ಮಕ್ಕಳ ನೇತೃತ್ವದಲ್ಲಿ ಏಳು ಪಡೆಗಳನ್ನು ರಚಿಸಿ ದರೋಡೆ ನೆಡೆಸುತ್ತಿದ್ದನು ಮುಂದೆ ಕಾಡಿನಲ್ಲಿ ಕಾಲಾನಂತರ ಚದುರಿ ಹೋದ ಈ ಪಡೆಗಳು ಬೇಡರ ಜನಾಂಗದ ವಂಶವಿಕಾಸಕ್ಕೆ ನಾಂದಿ ಹಾಡಿದವು. ಎಂಬ ಐತಿಹ್ಯವಿದೆ. ಅದೇನೇ ಇದ್ದರು ತೂರಿ ಹೋದ ಇಂಥ ಬೇಡ ಪಡೆಯ ತುಕುಡಿಗಳು ಆಯಾ ಪ್ರದೇಶಗಳಲ್ಲಿ ಗಟ್ಟಿಯಾಗಿ ನೆಲೆಯೂರಿದವು ಎಂಬುದರಲ್ಲಿ ಸಂಶವಿಲ್ಲ. ಮೂಲತಃ ಇವರು ದ್ರಾವಿಡ ಸಮುದಾಯ ಎಂಬುದಾಗಿ ಹೇಳಲಾಗಿದ್ದು. ದ್ರಾವಿಡ ಭಾಷೆಯಲ್ಲಿ ಪೀಡನ್, ವೇಂದನ್, ವೇಟ್ಟುವನ್ ಎಂದೆಲ್ಲಾ ಹೆಸರುಗಳಿದ್ದವು ಅಲ್ಲದೇ ಅವರು ಆಡುತ್ತಿದ್ದ ಬೇಟೆಗನುಸಾರವಾಗಿ ಅವರಿಗೆ ಪುಲಿಂದರ್, ಕುಳಿಂದರ್, ಕೋವರ್ ಎಂಬ ಹೆಸರುಗಳು ದೊರಕುತ್ತವೆ.

"ಬೇಡರು ಪಂಜಾಬಿನ ಗಿರಿಶಿಖರಗಳಿಂದ ಕರ್ನಾಟಕದೆಡೆ ಬಂದರೆಂದು ಇವರಿಗೆ ಭಿಲ್ಲರು, ನಾಯಕರ್, ಬೇರಾದ್ ಎಂದು ಕರೆಯುತ್ತಿದ್ದಾರೆಂದು ಕೆಲವು ವಿದ್ವಾಂಸರು ಅಭಿಪ್ರಾಯವಿದೆ."[೩] ಹಾಗೆಯೇ "ಆಂಧ್ರಪ್ರದೇಶದ ಶ್ರೀಶೈಲದ ಬಳಿಯ ಕರಿಮಲೆ ಕೊಮ್ಮಮಲೆಗಳ"[೪] ಕಡೆಯಿಂದ ಮತ್ತು "ತಿರುಪತಿ ಬಳಿಯ ಜಡೇ ಕಲ್ಲುದುರ್ಗ"[೫] ಕಡೆಯಿಂದ ಬಂದ ಜನ ಎಂದು ಉಲ್ಲೇಖಗಳ ದೊರೆಯುತ್ತವೆ. ಬೇರೆ–ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರಿನಿಂದ ಕರೆಸಿಕೊಳ್ಳುತ್ತಾ ಬಂದಿರುವ ಈ ಜನಾಂಗವು ಮೂಲದಲ್ಲಿ ಬೇಡರು ನಾಯಕರು ಎಂದೇ ಪ್ರಖ್ಯಾತಿ ಪಡೆದವರಾಗಿದ್ದರೆ ಹಾಗೆಯೇ ನಾಯಕ ಜನಾಂಗಕ್ಕೆ ಮತ್ತೊಂದು ಪ್ರಮುಖ ಪರ್ಯಾಯ ಹೆಸರೆಂದರೆ ಪಾಳೆಯಗಾರ ಅಥವಾ

ಪಾಳೇಗಾರ ಎಂದು ಕರೆಯುತ್ತಾರೆ. ಈ ನಾಯಕರು ಪಾಳೆಯಗಳ ಮುಖಂಡರುಗಳಾಗಿ ಪ್ರಭುತ್ವ ಮಾಡಿದ್ದಾರೆ.

ಬೇಡರ ಗುಂಪಿನಲ್ಲಿ ಶೂರನಾದ ವ್ಯಕ್ತಿ ಪಾಳೆಪಟ್ಟುಗಳನ್ನು ಕಟ್ಟಿಕೊಂಡು ಪಾಳೆಯಗಾರನೆಸಿದ. ಆತನೇ ಮುಂದೆ ಮುಖಂಡನಾದ. ನೇತೃತ್ವವಹಿಸಿದ ಈತನಿಗೆ ನಾಯಕನೆಂದೇ ಗೌರವ ಸೂಚಕ ಅಭಿದಾನವಿತ್ತರು. ನಾಯಕ ಎಂಬ ಪದವು ಕ್ರಿಶ ೬ನೇ ಶತಮಾನದವರೆಗೆ ಕರ್ನಾಟಕದಲ್ಲಿ ಸೇನಾಪತಿ, ಪಡೆದಳ, ಮುಂದಾಳು, ಮುಖ್ಯಸ್ಥನೆಂಬ ಅರ್ಥಗಳಲ್ಲೇ ಬಳಕೆಯಾಗಿದೆ. ಬೇಡರ ಹೆಸರುಗಳ ಕೊನೆಗೆ ನಾಯಕ ಪದ ಬಳಕೆಯಾಗುವ ಪೂರ್ವದಲ್ಲಿ ಬೋವ, ಬೋಯ ಎಂದಿದೆ. ಈ ಬಗ್ಗೆ ಹಲವಾರು ದಾಖಲೆಗಳ ಇಂದಿಗೂ ದೃಡೀಕರಿಸುತ್ತವೆ. ಹಾಗೆಯೇ ಬೇಡರ ಜನಾಂಗವು ಮೂಲ ದ್ರಾವಿಡ ಜನಾಂಗವೆಂಬ ವಾದದಲ್ಲಿ ಅವರಿಗಿದ್ದ ಬಿಲ್ಲ, ಕಿರಾತ, ವ್ಯಾಸ, ಶಬಿರ, ನಿಷಾದ ಮುಂತಾದ ಪುರಾತನ ಹೆಸರುಗಳೇ ಸಾಕ್ಷಿ ಹಲವು ಪ್ರದೇಶಗಳಲ್ಲಿ ಬೇಡರ ಪದಗಳು ಪರ್ಯಾಯ ರೂಪದಲ್ಲಿ ಬಳಕೆಗೊಂಡಿರುವುದನ್ನು ನಾವು ನೋಡಬಹುದು.

ಪ್ರದೇಶಗಳ	ನಾಯಕರ
ತಮಿಳನಾಡು	ನಾಯಾಕ್ವಾ, ನಾಯಕ, ನಾಯಕರ್, ವಾಲ್ಮೀಕಿ, ವೇಡನ್, ವೆತ್ತಲೆ, ನಾಯಕರ್, ವೇತುಕನ್, ಗೆಂಡು.
ಸಿಲೋನ್	ವೆಟನ್, ವೆಡುವಾಸ, ವದ್ದಾನ್, ವೇಟಕಾರನ್.
ಉತ್ತರ ಪ್ರದೇಶದಲ್ಲಿ	ಜಾಟ್
ಪಂಜಾಬ	ಭೀಲ್, ಬಾಲಮೀಕೆ, ವಾಲ್ಮೀಕಿ, ನಾಯಕ ಮಾಂಗ್.
ಬಂಗಾಲ	ಬಿಹಾರ ಸೇನ್
ಕೇರಳ ಮಲೇಶಿಯೂ	ನಾಯರ್
ಕಾಶ್ಮೀರ	ಡೋಗ್ರಾ
ಮಹಾರಾಷ್ಟ್ರ	ರಾಮೋಶಿ, ರಾಣವಾಸಿ
ಆಂಧ್ರಪ್ರದೇಶ	ಭೋವಿ, ಬೋಯಿ, ನಾಯನಿ,

೩.೨. ನಾಯಕ ಜನಾಂಗದ ಉಪ-ಪಂಗಡಗಳು

ಒಂದು ಜನಾಂಗ ಒಂದೇ ಭೌಗೋಳಿಕ ಪರಿಸರದಲ್ಲಿ ಒಟ್ಟಿಗೆಕೂಡಿ ಇದ್ದಾಗ ಅವರಲ್ಲಿ ವೈವಿಧ್ಯತೆಗಳು ಉಂಟಾಗುವುದಿಲ್ಲ. ಭೌಗೋಳಿಕ, ಸಾಮಾಜಿಕ, ಆರ್ಥಿಕ ಕಾರಣಗಳಿಂದಾಗಿ ಒಂದೇ

ಜನಾಂಗದ ಬೇರೆ ಬೇರೆ ಗುಂಪುಗಳು ವಿಭಿನ್ನ ಪರಿಸರದಲ್ಲಿ ವಾಸಿಸಲು ಪ್ರಾರಂಭಿಸಿದಾಗ ಭಿನ್ನತೆಗಳು ಗೋಚರಿಸುತ್ತವೆ. ಕಾಲಾನಂತರದಲ್ಲಿ ಈ ಭಿನ್ನತೆಗಳ ಪರಿಣಾಮವಾಗಿ ಅವೇ ಉಪ ಪಂಗಡಗಳೆನಿಸುತ್ತವೆ. ಹೊರ ನೋಟಕ್ಕೆ ಈ ಉಪಪಂಗಡಗಳಲ್ಲಿ ಭಿನ್ನತೆಗಳಿದ್ದೂ ಅವು ಮೂಲತಃ ಕೆಲವು ಸಾಮಾನ್ಯ ಅಂಶಗಳನ್ನು ಒಳಗೊಂಡಿರುತ್ತವೆ. ಬೇಡ ಜನಾಂಗವು ಅದಕ್ಕೆ ಹೊರತಾದುದಲ್ಲ. ಹೀಗೆ ಬೇಡ ಜನಾಂಗದಲ್ಲಿ ಈ ಕೆಳಗಿನ ಉಪ ಪಂಗಡಗಳನ್ನು ಗುರುತಿಸಬಹುದು.

- ನಾಯಕ
- ಬೇಡ
- ವಾಲ್ಮೀಕಿ
- ತಳವಾರ
- ನಾಯಕ ಮಕ್ಕಳು
- ಪರಿವಾರ
- ನಾಯಕ ವಾಡಿ
- ಬೆರದ್ ವೇದನ್
- ಭೋಯಾ ರಾಮೋಶಿ
- ಮ್ಯಾಸ ನಾಯಕರು
- ಊರು ನಾಯಕರು

ಮೇಲ್ಕಾಣಿಸಿದ ಎಲ್ಲಾ ಉಪ ಪಂಗಡಗಳಿಗೆ ಆಯಾ ಹೆಸರು ಬರಲು ಔದ್ಯೋಗಿಕ ಹಾಗೂ ರಾಜಕೀಯ ಹಿನ್ನೆಲೆಗಳಿರುವುದನ್ನು ಗುರುತಿಸಬಹುದು.

ವಾಲ್ಮೀಕಿ : ರಾಮಾಯಣದ ಕಾವ್ಯದ ಕರ್ತೃ ಆದ (ವ್ಯಾಧನಾಗಿದ್ದ) ವಾಲ್ಮೀಕಿ ತಮ್ಮನ್ನು ಪ್ರಸಿದ್ಧ ಪೂರ್ವಕನೆಂದು ಭಾವಿಸಿದ ಒಂದು ಪಂಗಡ ತಮ್ಮನ್ನು ವಾಲ್ಮೀಕಿಗಳೆಂದು ಕರೆದುಕೊಂಡರು.

ತಳವಾರ : ಸೇವಾ ವರ್ಗವನ್ನು ಸೂಚಿಸುವ ಪದವಾಗಿದೆ, ತಳವಾರ ಎಂಬುದು ಮೂಲತಃ ತಲವಾರ ಎಂಬುದರಿಂದ ಬಂದುದು. ಅರಕ್ಷಕರು ಎಂಬ ಅರ್ಥದಲ್ಲಿ ಬಳಕೆಯಾಗುತ್ತಿತ್ತು. ಇದೇ ಅರ್ಥದಲ್ಲಿ ಹಳೆಗನ್ನಡದಲ್ಲಿಯ ತಾಳಾವು, ತಳಾರ ಎಂಬ ರೂಪದಲ್ಲಿ ಪ್ರಯೋಗಗೊಳ್ಳುತ್ತಿತ್ತು. ತಲವಾರ ಎಂದರೆ ಉತ್ಪನ್ನ ಅಥವಾ ಕರ ಎಂದರ್ಥವು ಉಂಟು ಹಗಲಿರುಳು ಗ್ರಾಮ ರಕ್ಷಣೆ ಕಾರ್ಯಕ್ಕಾಗಿ ನೇಮಿಸಲ್ಪಟ್ಟು, ಈ ಕಾಯಕವನ್ನು ಒಪ್ಪಿಕೊಂಡ ಸಂತತಿಯವರಿಗೆ ತಳವಾರ ಎಂದು ಕರೆಯುತ್ತಾರೆ.

ನಾಯಕ ಮಕ್ಕಳು: ರಾಜಕೀಯ ಬೆಳವಣಿಗೆಯ ಹಂತದಲ್ಲಿ ದೊರೆತ ನಾಯಕ ಸ್ಥಾನದಿಂದ ನಾಯಕರಾಗಿದ್ದ ವಂಶಸ್ಥರ ಕುಟುಂಬಕ್ಕೆ ನಾಯಕ ಮಕ್ಕಳು ಎಂದು ಕರೆಯಲ್ಪಟರು.

ಪರಿವಾರ: ಪಾಳೆಗಾರರ ಅಸ್ಥಾನದಲ್ಲಿ ಅಂತರಂಗ ಸೇವಕರಂತ್ತಿದ್ದ ಸಮೂಹದವರನ್ನ ಪರಿವಾರದವರೆಂದು ಎನ್ನಲಾಗುತ್ತದೆ.

ಬೇರದ್, ವೆದನ್: ಇವುಗಳ ಮೂಲರ್ಥ ಬಹುಶಃ ಬೇಟೆಯಾಡುವುದು ಎಂದು ಬಹುದಿನಗಳವರೆಗೆ ಬೇಟೆ ವೃತ್ತಿಯಲ್ಲಿ ಉಳಿದುಕೊಂಡಿವೆ

ಬೋಯ : ಬೋಯ ಅಥವಾ ಭೋವ ಎಂದರೆ ಮಿಣಿ ಮುಂತಾದ ಭಾರಗಳನ್ನು ಹೊರುವ ಸಮೂಹ ಎಂದರ್ಥ

ರಾಮೋಶೀ: ಇದು ಸಾಂಸ್ಕೃತಿಕ ಸ್ತರ ಸೂಚಿಸುವ ಪದವಾಗಿದೆ ಪ್ರಸಿದ್ದ ಕವಿ ವಾಲ್ಮೀಕಿ ರಚನೆಯ ರಾಮಾಯಾಣದ ಕಥಾನಾಯಕನಾದ ರಾಮನೇ ನಮ್ಮ ಮೂಲ ಪುರುಷ ಎಂದು ಭಾವಿಸುವ ವರ್ಗಕ್ಕೆ ರಾಮೋಶಿ ಎಂದು ಕರೆಯಲಾಗುತ್ತದೆ.

ಒಟ್ಟಾರೆ ಬೇಡ ಜನಾಂಗವು ಪೌರಣಿಕ ಹಾಗೂ ಚಾರಿತ್ರಿಕ ಹಿನ್ನಲೆಯಲ್ಲಿ ಗುರುತಿಸಿಕೊಂಡು ಅತ್ಯಂತ ಪ್ರಾಚೀನ ಜನಾಂಗಗಳಲ್ಲಿ ಒಂದಾಗಿದೆ. ಕರ್ನಾಟಕದಲ್ಲಿ ಅನಾದಿ ಕಾಲದಿಂದಲೂ ಬೇಡರು ಇದ್ದಾರೆಂಬುದು ತಿಳಿದುಬರುತ್ತದೆ. ಬೇಟೆಯಂತಹ ಸಾಹಸ ವೃತ್ತಿಯಲ್ಲಿ ಸಿದ್ದಹಸ್ತರಾದ ಬೇಡರ ಹಿನ್ನಲೆ ಮತ್ತು ಅವರ ಹುಟ್ಟಿನ ಹಿನ್ನಲೆ ಜನಾಂಗಿಕವಾಗಿ ಮತ್ತು ಚಾರಿತ್ರಿಕವಾಗಿ ತುಂಬಾ ಮಹತ್ವವನ್ನು ಪಡೆದು ಕೊಂಡಿದೆ ಎಂದು ಹೇಳಬಹುದು.

೩.೩. ನಾಯಕ ಜನಾಂಗದ ಬೆಳವಣಿಗೆ

ನಾಯಕ ಜನಾಂಗವನ್ನು ಬಹುಪ್ರಾಚೀನ ಕಾಲದಿಂದಲೂ ಗುರುತಿಸಿಕೊಂಡು ಬಂದಿದ್ದೇವೆ ನಾಯಕ ಜನಾಂಗದವರನ್ನು ನಾವು ಬುಡಕಟ್ಟು ಸಮುದಾಯದಿಂದಲೂ ಹಿಡಿದು, ಅಧುನಿಕ ಜಗತ್ತಿನವರೆಗೂ ಅವರ ಬೆಳವಣಿಗೆಯನ್ನು ಗುರುತಿಸಬಹುದು, ಬೇಟೆಗಾರನಾಗಿ, ಕೃಷಿಕನಾಗಿ, ಸೈನಿಕನಾಗಿ, ಆಡಳಿತಗಾರನಾಗಿ, ಆಧಿಕಾರಿಯಾಗಿ ಗುರುತಿಸಿಕೊಂಡು ಬಂದಿರುವುದನ್ನು ನಾವು ಇತಿಹಾಸದಿಂದ ತಿಳಿದುಬರುತ್ತದೆ.

ನಾಯಕ ಜನಾಂಗವು ಮೌರ್ಯರ ಕಾಲದಿಂದಲೂ ಆಧಿಕಾರಸ್ಥರಾಗಿ ಅಲ್ಲದಿದ್ದರೂ ತಮ್ಮ ಗುಂಪು, ಬಲ, ವೃತ್ತಿ, ಸ್ವಭಾವ ಇತ್ಯಾದಿಗಳಿಂದ ಚರಿತ್ರೆಯಲ್ಲಿ ದಾಖಲಾಗಿದ್ದಾರೆ "ಅಶೋಕನ ೧೩ನೇ ಬಂಡೇ ಶಾಸನದ ಪ್ರತಿಗಳಲ್ಲಿ ಬೇಡರನ್ನು ಪುರಿಂದ, ಪುಳಿಂದ ಎಂದು ಉಲ್ಲೇಖಿಸಲಾಗಿದೆ. ಇವನ ಕಾಲದಲ್ಲಿ ಮಧ್ಯಪ್ರಾಂತ್ಯದಲ್ಲಿ ಅಟವೀ ರಾಜ್ಯಗಳೆಂಬುವು ಇದ್ದವೆಂದು ತಿಳಿದುಬರುತ್ತದೆ."[೬]

ಶಾತವಾಹನರ ಕಾಲಕ್ಕೆ ಬೇಡರು ಅಧಿಕಾರ ವರ್ಗವಾಗಿರುವುದು ಕಂಡುಬರುತ್ತದೆ. ಇವರ ಕಾಲದಲ್ಲಿ ಬೋಜ/ಬೋಜಕ/ಬೋಜಿ ಎಂಬ ಉನ್ನತ ಹುದ್ದೆಗಳಿದ್ದವು. ಆ ಗೌರವಾನ್ವಿತವಾದ ಆಧಿಕಾರ ಸೂಚಕ ಪದಗಳೇ ತದ್ಭವವಾಗಿ ಬೇಡರ ಪಾಲಿಗೆ ಬೋವ/ ಬೋಯ/ ಬೋಯಿ ಎಂಬ ರೂಪಗಳಲ್ಲಿ ಬಳಕೆಯಲ್ಲಿ ಬಂದವು ಎಂಬ ಅಭಿಪ್ರಾಯವಿದೆ. "ಗುಪ್ತ ದೊರೆಗಳ ಕಾಲಕ್ಕೆ ದಕ್ಷಿಣದಲ್ಲಿ ಬೇಡರ ರಾಜ್ಯ ಹಾಗೂ ರಾಜರುಗಳಿದ್ದ ಬಗ್ಗೆ ತಿಳಿದುಬರುವುದು ಸಮುದ್ರಗುಪ್ತನ ದಕ್ಷಿಣದಲ್ಲಿ ಗೆದ್ದ ರಾಜರಲ್ಲಿ ಮಹಾಕಾಂತಾರದ ವ್ಯಾಘ್ರರಾಜನು ಒಬ್ಬನಾಗಿದ್ದನು, ಇವನು ಶಬರ ನಾಯಕ"[೭] ರಾಜರುಗಳ ಕಾಲದಲ್ಲಿ ತಳವಾರ ಎಂಬುದು ಒಂದು ಗೌರವಾನ್ವಿತ ಹುದ್ದೆಯಾಗಿತ್ತು. ಬೇಡರು ಕ್ರಿ.ಪೂ.೩ನೇ ಶತಮಾನದಿಂದಲೂ ತಳವಾರ ಹುದ್ದೆಯನ್ನು ಅನುಭವಿಸಿಕೊಂಡು ಬಂದಿದ್ದಾರೆ.

ಕದಂಬ ಮನೆತನ ಕನ್ನಡದ ಮೊದಲ ರಾಜಮನೆತನವಾಗಿದೆ. ಶಿವಸ್ಕಂದವರ್ಮನ ವಿರುದ್ಧ ಮಯೂರ ಶರ್ಮನಿಗೆ ಶ್ರೀಶೈಲ ಪರ್ವತ ಪ್ರದೇಶದಲ್ಲಿ ಬೇಡ ಸೈನಿಕರು ಸಹಾಯ ಮಾಡಿದರು. ಮತ್ತು ಮಯೂರ ಶರ್ಮನು ಅವರ ಸಹಾಯದಿಂದ ಕದಂಬ ರಾಜ್ಯವನ್ನು ಕಟ್ಟಿದನು. ಶ್ರೀಶೈಲ ಗುಡ್ಡಗಾಡು ಪ್ರದೇಶ ಬೇಡರ ನೆಲೆಗಳಲ್ಲಿ ಒಂದಾಗಿದೆ. ಬೇಡರು ಶ್ರೀಶೈಲ ಪ್ರದೇಶದಿಂದ ಕರ್ನಾಟಕದ ಕಡೆ ಬಂದವರು ಎಂಬ ಅಭಿಪ್ರಾಯವಿದೆ "ಬುಕಾನನ್‌ನು ಕದಂಬರು ಬೇಡರು ಎಂದು ಕರೆದಿರುವನು."[೮] ಕ್ಷಾತ್ರ ಪರಂಪರೆಯ ಲಕ್ಷಣಗಳನ್ನು ಹೊಂದಿದ್ದ ಬೇಡರನ್ನು ರಾಜರು ಯುದ್ದಸ್ತ್ರಗಳನ್ನಾಗಿ ಬಳಕೆ ಮಾಡಿಕೊಂಡರು. ದೈಹಿಕವಾಗಿ ಸದೃಡರಾಗಿದ್ದು, ಎಂತಹ ಸಂದರ್ಭದಲ್ಲು ನಿರ್ಭಯವಾಗಿ ಹೋರಾಡುವ ಶಕ್ತಿಯನ್ನು ಹೊಂದಿದ್ದ ಬೇಡರನ್ನು ರಾಜರು ಸೈನ್ಯಕ್ಕೆ ಸೇರಿಸಿಕೊಂಡರು, ಕಾಡಿನಲ್ಲಿದ್ದ ಇವರನ್ನು ಯುದ್ದ ಸಂದರ್ಭಗಳಲ್ಲಿ ಕರೆಯಿಸಿಕೊಂಡು ಯುದ್ದ ಭೂಮಿಗೆ ಕಳುಹಿಸಿ ಸುಲಭವಾಗಿ ಎದುರಾಳಿಗೆಳನ್ನು ಸುಲಭವಾಗಿ ಗೆಲ್ಲುತ್ತಿದ್ದರು. ಈ ಕಾರಣದಿಂದಾಗಿಯೇ ನಾಯಕ ಜನಾಂಗದಲ್ಲಿ ಬೇಟೆಯೇ ವೃತ್ತಿಯಾಗಿದ ಇವರು ಸೈನ್ಯದಲ್ಲೂ ಸೈನಿಕರಾಗಿ ಸೇವೆಸಲ್ಲಿಸತೊಡಗಿದರು. "ಮಹೇಂದ್ರ ಎಂಬುವನು(ಬಹುಶಃ ಪಲ್ಲವರ ದೊರೆ ಮೊದಲ ಮಹೇಂದ್ರವರ್ಮ) ಶಿಲಾದಿತ್ಯನೊಡನೆ ಹೋರಾಡುವಾಗ ಬೇಡರನ್ನು ಮಲರೆಪನ್ನು ತನ್ನ ಸಹಾಯಕ್ಕಾಗಿ ತೆಗೆದುಕೊಂಡು ಹೋದನೆಂದು ಶಾಸನವೊಂದು ತಿಳಿಸುತ್ತದೆ."[೯]

"ಗಂಗರ ರಾಜಧಾನಿಯಾದ ತಲಕಾಡಿನ ಸ್ಥಳನಾಮದ ಹಿನ್ನೆಲೆಯಲ್ಲಿ ತಲ ಮತ್ತು ಕಾಡು ಎಂಬ ಬೇಡ ಸಹೋದರ ಹೆಸರಿರುವುದನ್ನು ಒಂದು ಕೈಫಿಯತ್ತು ತಿಳಿಸುತ್ತದೆ."[೧೦] ಗಂಗರ ಕಾಲಕ್ಕೆ ಬೇಡಜನಾಂಗವು ರಾಜಕೀಯದಲ್ಲಿ ಹೆಸರಾಗಿತ್ತು. ಆಸ್ಥಾನದಲ್ಲಿ ಬೇಡ ಹೆಣ್ಣುಮಕ್ಕಳು ವಿವಿಧ ಕೆಲಸಗಳಲ್ಲಿ ತೊಡಗಿದ್ದರು. "ಗಂಗರ ೧ನೇ ಶಿವಮಾರನ ಕ್ರಿ.ಶ.೭೧೩ರ ಶಾಸನದಲ್ಲಿ ಕಿರಾತ ಹೆಣ್ಣು ನವಕಾಮನ ಆಸ್ಥಾನದಲ್ಲಿ ನರ್ತಕಿಯಾಗಿದ್ದಾಳೆಂದು ಉಲ್ಲೇಖವಾಗಿದೆ."[೧೧]

ಬಾದಾಮಿ ಚಾಲುಕ್ಯರ ಪ್ರಸಿದ್ಧ ದೊರೆ ಇಮ್ಮಡಿ ಪುಲಕೇಶಿಯು ನರ್ಮದಾ ನದಿಯವರೆಗೆ ದಂಡಯಾತ್ರೆಯನ್ನು ಕೈಗೊಂಡು ಉತ್ತರ ಪಥೇಶ್ವರನೆಂದು ಮೆರೆಯುತ್ತಿದ್ದ ಹರ್ಷವರ್ಧನನ್ನು ಸೋಲಿಸಿದನು. ಪುಲಕೇಶಿಯ ಸೈನ್ಯವನ್ನು ಕರ್ನಾಟಕ ಬಲಎಂದು ಕರೆಯಲಾಗುತ್ತಿತ್ತು. ಚಾಲುಕ್ಯ ಮತ್ತು ರಾಷ್ಟ್ರಕೂಟರ ಕಾಲದಲ್ಲಿ ಬೇಡ ಪಡೆಗಳು ಕರ್ನಾಟಕ ಪ್ರಸಿದ್ಧಿಯಾಗಿದ್ದವು. "ಕರ್ನಾಟಕ ಸೈನ್ಯವೆಂದರೆ ಬೇಡರ ಸೈನ್ಯವೆಂದೇ ಹೆಸರಾಗಿತ್ತು. ಏಕೆಂದರೆ ಕರ್ನಾಟಕದ ಸೈನ್ಯದಲ್ಲಿ ಬೇಡರೇ ಹೆಚ್ಚು ಸಂಖ್ಯೆಯಲ್ಲಿದ್ದರು ಬೇಡರು ರಾಷ್ಟ್ರಕೂಟರ ಕಾಲಕ್ಕೆ ಅಧಿಕಾರಿಗಳಾಗಿ ಅನೇಕ ಹುದ್ದೆಗಳನ್ನು ಗಿಟ್ಟಿಸಿಕೊಂಡರು. ನಾಡಗಾವುಂಡರಾಗಿ ಬೇಡರು ನೇಮಕಗೊಂಡಿರುವುದು ತಿಳಿದುಬರುತ್ತದೆ."[೧೨] ಬೇಡರು ಬಹು ಹಿಂದಿನಿಂದಲೂ ಬಹುಸಂಖ್ಯೆಯಲ್ಲಿ ಸೈನಿಕ ಶಸ್ತ್ರಧಾರಿಗಳು ಮತ್ತು ಆಯುಧ ಜೀವಿಗಳೂ ಆಗಿದ್ದರಿಂದ ರಾಷ್ಟ್ರಕೂಟ ಕಾಲದಲ್ಲಿ ನಾಯಕ ಎಂಬ ಹೆಸರು ಬಹುಪಾಲು ಅನ್ವಯಿಸುತ್ತಿದ್ದುದು ಬೇಡರಿಗೆ.

ಬೇಡರು ತಮ್ಮ-ಪ್ರದೇಶಗಳಲ್ಲಿ ಪ್ರಬಲರಾಗಿ ತಮ್ಮದೇ ಆದ ಗ್ರಾಮ ರಾಜ್ಯಗಳು, ಗ್ರಾಮ ರಾಜ್ಯಗಳನ್ನು ಸ್ಥಾಪಿಸಿಕೊಂಡರು, ಪ್ರಾಚೀನ ಕಾಲದಿಂದಲೂ ಈ ರೀತಿಯ ರಾಜ್ಯಗಳಿದ್ದುದನ್ನು ಸಾಹಿತ್ಯ ಕೃತಿಗಳ ಹಾಗೂ ಶಿಲಾಶಾಸನಗಳು ತಿಳಿಸುತ್ತವೆ. ಇಂತಹ ಬೇಡರ ಗಣರಾಜ್ಯಗಳಿಗೆ ಬೇಡವಟ್ಟುಗಳು ಎಂಬ ಹೆಸರಿದ್ದಿತ್ತು. ಅವುಗಳ ಬಲ ಅವುಗಳದೇ ಆದ ಬೇಡರ ಪಡೆಗಳಿರುತ್ತಿದ್ದವು. ಆ ಸೈನ್ಯಗಳಿಗೆ ಬೇಡರ ಘಟ್ಟಿ ಎಂಬ ಹೆಸರಿದ್ದಿತ್ತು. ಪರಾಧೀನರಾಗದೆ ಸ್ವತಂತ್ರವಾಗಿ ಜೀವಿಸುತ್ತಿದ್ದ ಬೇಡರ ಘಟ್ಟಿಗಳೊಡನೆ ತುರುಗೊಳ್ ಅಥವಾ ಗೋಗ್ರಹಣಕ್ಕೆ ಹೊರಟು ಹಳ್ಳಿಗಳ ಮೇಲೆ ದಾಳಿ ಮಾಡಿ ಮಾರಂತರನ್ನು ಕೊಂದು ಹಳ್ಳಿಯ ಗೋವುಗಳನ್ನು ಅಟ್ಟಿಕೊಂಡು ತೇರಳುತ್ತಿದ್ದರು. ಈ ಬಗ್ಗೆ ಕನ್ನಡ ನಾಡಿನಲ್ಲಿ ಸಾಕಷ್ಟು ಶಾಸನಗಳ ದೊರೆಯುತ್ತವೆ.

ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಕನ್ನಡಿಗರೆಂದರೆ ಸೈನಿಕರೆಂದು ಪ್ರಸಿದ್ಧಿಯಿದ್ದಿತ್ತು. ಕಾಲ್ದಳದಲ್ಲಿ ಬೇಡರ ಪಡೆಯು ಪ್ರಾಮುಖ್ಯತೆಯನ್ನು ಪಡೆದಿತ್ತು. ಈ ಪಡೆಯಿಂದ ಅನೇಕ ಗೋವುಗಳನ್ನು ದೊರೆಗಳ ಪಡೆಯತ್ತಿದ್ದರು ಪಶ್ಚಿಮ ಚಾಲುಕ್ಯರ ಕಾಲದಲ್ಲಿ ರಟ್ಟರನ್ನು ವಿರೋಧಿಗಳನ್ನು ಹತ್ತಿಕ್ಕಿದ್ದು ಬೇಡರ ಸಾಧನೆಯೇ ಸರಿ. ಬೇಡರು ಯುದ್ಧದಲ್ಲಿ ತಂದುಕೊಟ್ಟ ಜಯಕ್ಕಾಗಿ ದಾನ ದತ್ತಿಗಳನ್ನು ಪಡೆದಿರುವುದು ಹೆಮ್ಮೆಯ ಸಂಗತಿ ಬೇಡರ ಘಟ್ಟಿಗಳ ನಾಯಕರು ಗೋವುಗಳನ್ನು, ಸಂಪತ್ತನ್ನು, ಹಳ್ಳಿಗಳ ಮೇಲೆ ದಾಳಿ ಮಾಡಿ ಲೂಟಿ ಹೊಡೆಯುವುದು ಮುಂತಾದ ಕೃತ್ಯಗಳ ಜೊತೆಗೆ ಸುಂದರವಾದ ಸ್ತ್ರೀಯರನ್ನು ಅಪಹರಿಸಿ ಮದುವೆ ಮಾಡಿಕೊಳ್ಳುತ್ತಿರೆಂದು ಕಂಡುಬರುತ್ತದೆ.

ಕರ್ನಾಟಕ ಇತಿಹಾಸದಲ್ಲಿ ಕ್ರಿ.ಶ.೧೨ನೇ ಶತಮಾನ ಒಂದು ವಿಶಿಷ್ಠ ಕಾಲ ಸಾಂಪ್ರದಾಯಿಕ ಸಾಮಾಜಿಕ ಮತ್ತು ಧಾರ್ಮಿಕ ರಂಗಗಳಲ್ಲಿ ಅನೇಕ ಸುಧಾರಣೆಗಳ ಕಂಡುಬಂದವು. ಬಿಜ್ಜಳನ

ಕಾಲದಲ್ಲಿ ಬ್ರಾಹ್ಮಣ ನಾಯಕರು ವಹಿಸುತ್ತಿದ್ದ ಉನ್ನತ ಅಧಿಕಾರ ಸ್ಥಾನಗಳಲ್ಲೆಲ್ಲ ಬೇಡ ನಾಯಕರು ವಿರಾಜಿಸತೊಡಗಿದರು. ಅದಕ್ಕೆ ಅಂದಿನ ಬೇಡರಲ್ಲಿದ್ದ ಶೂರತನ ಮತ್ತು ಸಾಹಸಗಳೇ ಕಾರಣ. ಬಿಜ್ಜಳನು ಬೇಡರ ಸಾಹಸಗಳನ್ನು ಮೆಚ್ಚಿಕೊಂಡು ಅವರಿಗೆ ಉನ್ನತ ಹುದ್ದೆಗಳನ್ನು ನೀಡಿದನು. ಬೇಡರ ರಾಜಕೀಯ ಉನ್ನತಿಯನ್ನು ಮನಗಂಡ ಚನ್ನಬಸವಣ್ಣನವರು ತಮ್ಮ ಒಂದು ವಚನದಲ್ಲಿ ಕಿರಾತರು ಹೆಚ್ಚಿ ಪುರಾತನರು ಅಡಿಗಿದರು ಎಂದು ಆ ಕಾಲದ ರಾಜಕೀಯ ವಲಯಗಳಲ್ಲಾಗುತ್ತಿದ್ದ ಪರಿವರ್ತನೆಯನ್ನು ಸೂಚಿಸಿದ್ದಾರೆ.

ಹೊಯ್ಸಳವಂಶದ ಸ್ಥಾಪಕ ಸಳನು ಬೇಡನಾಗಿದ್ದನು ಎಂಬ ಅಭಿಪ್ರಾಯವಿದೆ. ಈ ಕುರಿತು ಹೆಚ್ಚಿನ ಸಂಶೋಧನೆಯ ಅಗತ್ಯವಿದೆ ಹೊಯ್ಸಳ ಪ್ರಸಿದ್ಧ ದೊರೆ ವಿಷ್ಣುವರ್ಧನನು ಬೇಡರನ್ನು ಸೈನ್ಯದಲ್ಲಿ ನೇಮಿಸಿಕೊಂಡನು ಅವನ ಸೈನ್ಯದಲ್ಲಿ ಬೇಡರ ಪಡೆಯೇ ಮುಖ್ಯವಾಗಿತ್ತು. ಇವನು ಕ್ರಿ.ಶ.೧೧೧೨ರಲ್ಲಿ ಕಿರಾತ ಮುಖ್ಯಸ್ಥರನ್ನು, ಶಕ್ತಿಶಾಲಿ ವೀರನ್ನು ತನ್ನ ಸಹಾಯಕ್ಕಾಗಿ ನೇಮಿಸಿಕೊಂಡಿದ್ದನು, ಇದೇ ಸಮಯದಲ್ಲಿ "ಹೊಯ್ಸಳರಿಗೆ ಮತ್ತು ಸೇವುಣರಿಗೂ ಯುದ್ಧವಾದಾಗ, ಬೇಡ ಸೈನಿಕರು ಪಾತ್ರ ನಿರ್ಣಯಕವಾಗಿತ್ತು."[೧೩] ಹೊಯ್ಸಳರ ಸೈನ್ಯದಲ್ಲಿ ಕಲಾಳು ಪಡೆಯು ಮುಖ್ಯವಾಗಿತ್ತು. "ಈ ಪಡೆಯು ಬೇಡರು, ಕಳ್ಳರು ಮೊದಲಾದ ಗಿರಿಕಂದರ ವಾಸಿಗಳಿಂದ ಕೂಡಿತ್ತು."[೧೪] ಬಾಣ ಪ್ರಯೋಗ ಚತುರರಾದ ಬೇಡರ ಪಡೆಯು ಕಾಲ್ದಳದ ಮುಖ್ಯಾಂಗವಾಗಿತ್ತು.

ಮೂರನೇ ಬಲ್ಲಾಳನ ಕಾಲದಲ್ಲಿ ದೆಹಲಿ ಸುಲ್ತಾನರು ದಕ್ಷಿಣ ಕಡೆ ರಾಜ್ಯವನ್ನು ವಿಸ್ತರಿಸುತ್ತಾ ಪ್ರಯತ್ನ ಮಾಡಿದರು. ಅಲಾವುದ್ದೀನ್ ಖಿಲ್ಜಿಯ ಸೇನಾ ದಂಡನಾಯಕ ಮಲ್ಲಿಕಾಫರನು ದಕ್ಷಿಣ ಭಾರತ ಮೇಲಿನ ದಂಡೆಯಾತ್ರೆಯ ನೇತೃತ್ವವನ್ನು ವಹಿಸಿದನು. ಆಗ ದಕ್ಷಿಣ ಭಾರತದ ಅರಸು ಮನೆತನಗಳಲ್ಲಿ ಹೊಂದಾಣಿಕೆ ಇರಲಿಲ್ಲ ಇದರ ಸಂಪೂರ್ಣ ಪ್ರಯೋಜನವನ್ನು ಮಲ್ಲಿಕಾಫರನು ಪಡೆದುಕೊಂಡನು. "ಮೂರನೇ ಬಲ್ಲಾಳನು ಮುಸ್ಲಿಂ ದಾಳಿಯನ್ನು ತಡೆಯಲು ಬೇಡರನ್ನು ಆಯಾಕಟ್ಟಿನ ಸ್ಥಳಗಳಲ್ಲಿ ನೇಮಿಸಿದನು. ಆದರೆ ಅವನ ಪ್ರಯತ್ನಗಳೆಲ್ಲಾ ವಿಫಲವಾದವು, ಹಾಗೆಯೇ ಮೂರನೇ ಬಲ್ಲಾಳನು ತನ್ನ ಕೋಟೆಯ ರಕ್ಷಣೆಗಾಗಿ ಕಿರಾತ ಪಡೆಯನ್ನು ಸ್ಥಾಪಿಸಿದನು."[೧೫]

"ವಿಜಯನಗರ ಸ್ಥಾಪನೆಯಾಗುವ ಮುನ್ನ ತೆಲುಗು ಸೀಮೆಯಲ್ಲಿ ಬೇಡರ ಸಂಸ್ಥಾನಗಳಿದ್ದವು."[೧೬] ಈ ಹಿಂದಿನಿಂದ ಅನುಭವಿಸಿಕೊಂಡು ಬಂದ ಸೈನಿಕ ವೃತ್ತಿಯನ್ನು ಮುಂದುವರೆಸಿದ್ದರು. ಮಲ್ಲಿಕಾಫರನ ದಾಳಿಗೆ ದಕ್ಷಿಣ ಭಾರತದಲ್ಲಿದ್ದ ಎಲ್ಲಾ ಅರಸರು ಅವನಿಗೆ ಶರಣಾಗಿ ಕಪ್ಪ ಕಾಣಿಕೆಯನ್ನು ನೀಡಿದರು. ಆದರೆ ತುಂಗಭದ್ರ ತೀರದಲ್ಲಿದ್ದ ಕುಮ್ಮಟದುರ್ಗ ಮಾತ್ರ ಮುಸ್ಲಿಂ ದೊರೆಗಳಿಗೆ ಸುಲಭವಾಗಿ ಶರಣಾಗಲಿಲ್ಲ. ಅಲ್ಲಿನ ಬೇಡ ಪಾಳೆಗಾರರು ಧೈರ್ಯ ಸಾಹಸ ಮುಸ್ಲಿಂರ ವಿರುದ್ಧ ನೆಡೆಸಿದ ಹೋರಾಟ ಅವರಲ್ಲಿದ್ದ ರಾಜ್ಯ ಕಟ್ಟುವ ಹುಮ್ಮಸ್ಸು ಯಾವ ಸಾಮ್ರಾಜ್ಯದೊಡೆಯನಿಗಿಂತ ಕಡಿಮೆಯೇನು

ಇರಲಿಲ್ಲ. "ಮುಮ್ಮಡಿ ಸಿಂಗನು ಕುಮ್ಮಟದುರ್ಗದ ಮೊದಲ ಪಾಳೆಗಾರ ಎಂಬುದನ್ನು ಕ್ರಿ.ಶ.೧೨೮೦ಮತ್ತು ೧೨೮೭ರ ಶಾಸನಗಳು ಸಮರ್ಥಿಸುತ್ತವೆ. ಇವನು ಉತ್ತರ ಯಾದವ ಮತ್ತು ದಕ್ಷಿಣದ ಹೊಯ್ಸಳರೊಡನೆ ಹೋರಾಡುವಷ್ಟು ಸಾಮರ್ಥ್ಯವನ್ನು ಹೊಂದಿದ್ದನು."[೧೭]

ಮುಮ್ಮಡಿ ಸಿಂಗನು ರಾಜನಾದ ನಂತರ ತನ್ನ ಬಂಧು ಬಳಗದವರನ್ನು ತನ್ನ ರಾಜ್ಯದ ಸುತ್ತಮುತ್ತ ಬಂದು ನೆಲೆಸುವಂತೆ ಮಾಡಿದನು. ಕುಮ್ಮಟದುರ್ಗ ರಾಜ್ಯ ಸ್ಥಾಪಿಸಿ ಬೇಡರನ್ನು ಒಂದೆಡೆ ತಂದಿಟ್ಟಿತು. ಮತ್ತು ಅವರ ಜೀವನವನ್ನು ಸುಧಾರಿಸುವಲ್ಲಿ ಮುಖ್ಯಪಾತ್ರವಹಿಸಿತು. ಈ ಮೊದಲು ಮುಮ್ಮಡಿ ಸಿಂಗನು ತನ್ನ ದಾಯಾದಿಗಳ ಚಟುವಟಿಕೆಗಳಿಂದ ಬೇಸತ್ತು ದೇವಗಿರಿಯ ರಾಮದೇವನ ಬಳಿ ಬಂದು ೫೮೯ ವರಹ ಸಂಬಳಕ್ಕೆ ನೇಮಕವಾದನು ಆಗ ಅವನ ದಾಯಾದಿಗಳು ಸಹ ಸಿಂಗನಾಯಕನ ಸಹಾಯದಿಂದ ರಾಮದೇವನ ಆಶ್ರಯದಲ್ಲಿ ಉಳಿದರು. ಅವರಿಗೆ ಕೆಲವು ಚಾಕರಿಗಳನ್ನು ಕೊಡಲಾಯಿತು. ಇದೇ ಸಂದರ್ಭದಲ್ಲಿ ಯಾರೂ ಎದುರಿಸಲಾಗದ ವ್ಯಾಘ್ರವೊಂದನ್ನು ಸಿಂಗನಾಯಕನು ಕೊಂದನು. ಇವನ ಧೈರ್ಯ ಸಾಹಸವನ್ನು ಮೆಚ್ಚಿ ರಾಮದೇವನು ಮುಮ್ಮಡಿ ಎಂಬ ಬಿರುದನ್ನ ಕೊಟ್ಟುಗೌರವಿಸಿದನು.

"ಮುಮ್ಮಡಿ ಸಿಂಗನ ಉತ್ತಾರಾಧಿಕಾರಿಯಾಗಿ ಬಂದ ಅವನ ಮಗ ಕಂಪಿಲರಾಯನು ಚಿಕ್ಕವನಿದ್ದನು. ಈ ಸಮಯದಲ್ಲಿ ರಾಜ್ಯದಲ್ಲಿ ಕ್ಷೋಭೆ ಹೊಯ್ಸಳ ವೀರಬಲ್ಲಾಳ ಗುತ್ತಿಯ ಚಾಮರಾಜ ಓರಂಗಲ್ಲಿನ ಪ್ರತಾಪರುದ್ರ ಮುಂತಾದ ಶತ್ರುಗಳು ಕಂಪಿಲರಾಯನ ದೇಶದ ಮೇಲೆ ದಾಳಿ ಮಾಡಿ ಕೆಲವು ಭಾಗಗಳನ್ನು ಗೆದ್ದುಕೊಂಡರು. ಹೀಗಾಗಿ ಕಂಪಿಲ ರಾಜ್ಯವು ಕುಸಿಯಿತು."[೧೮] ಇದೇ ಕಾಲದಲ್ಲಿ ಜಟ್ಟಂಗಿ ಪ್ರದೇಶಕ್ಕೆ ಬರಗಾಲವು ಅಪ್ಪಳಿಸಿತು, ರಾಜ್ಯದ ಸ್ಥಿತಿ ಶೋಚನೀಯವಾಯಿತು. ಆದರೆ ಇದೇ ಪರಿಸ್ಥಿತಿ ಮುಂದುವರೆಯಲಿಲ್ಲ. ಕೆಲವು ದಿನಗಳ ನಂತರ ಬರಗಾಲ ಕ್ಷೀಣಿಸಿತು, ಬೆಳೆಯ ಸಮೃದ್ಧವಾಗಿ ಸುಖವುಂಟಾಯಿತು. "ವೃದ್ಧಿಯಾದ ಪರಿವಾರಕ್ಕೂ ಕುರಿ, ಮೇಕೆ, ಗೋ ವೃಂದಗಳಿಗೆ ಸಾಕಷ್ಟು ವಸತಿಯನ್ನು ಹುಡುಕುತ್ತಾ ಕಂಪಿಲದೇವರಾಯನು ಅವನ ಪರಿವಾರದವರು ವಲಸೆ ಹೊರಟು ನಡುಮಲೆಯಲ್ಲಿ ಹಟ್ಟಿ ಹಾಕಿಕೊಂಡು ಜೀವಿಸುತ್ತಿದ್ದರು."[೧೯] ನಂತರ ಹೊಸಮಲೆ ಎಂಬ ಅರಣ್ಯಕ್ಕೆ ಹಟ್ಟಿಯನ್ನು ಹಾಕಿಕೊಂಡು ಶಬರ ವೃತ್ತಿಯನ್ನು ಆರಂಭಿಸಿದರು. ಇದು ತಾತ್ಕಲಿಕವಾಗಿ ಜೀವನೋಪಾಯಕ್ಕಾಗಿ ಕೈಗೊಂಡ ವೃತ್ತಿಯಾಗಿತ್ತು. ನಂತರದಲ್ಲಿ ಈ ಶಬರ ಗುಂಪನ್ನು ಬೇಡ ಪಡೆಯನ್ನಾಗಿ ಪರಿವರ್ತಿಸಿದನು. ಅವನ ಸಹಾಯದಿಂದ ರಾಜನಾಗಿ ಹೊಸ ಮಲೆದುರ್ಗ ಕೋಟೆಯನ್ನು ನಿರ್ಮಿಸಿದನು.

ಕಂಪಿಲರಾಯನ ಮಗ ಕುಮಾರ ರಾಮನು ತಂದೆಯಂತೆಯೇ ಸ್ವಾತಂತ್ರ್ಯಾಭಿಮಾನಿ, ಶೂರ, ಹೋರಾಟಗಾರನಾಗಿದ್ದನು. ಕಂಪಿಲರಾಯನಿಗೆ ಸಹಾಯಕನಾಗಿ ನಿಂತು ಕುಮಾರ ರಾಮನು

ಅನೇಕ ಯುದ್ಧಗಳನ್ನು ಗೆದ್ದನು. ಕುಮಾರರಾಮನ ಅಪೇಕ್ಷೆ ಮೇರೆಗೆ ಕುಮ್ಮಟ ದುರ್ಗವು ಒಂದು ಹೊಸ ರಾಜಧಾನಿಯಾಗಿ ಮಾರ್ಪಟ್ಟಿತು. ಹೊಸ ಮಲೆ ಪಟ್ಟಣದ ಪ್ರಜೆಗಳೆಲ್ಲರೂ ಹೊಸ ಕರ್ಮ್ಮಟದುರ್ಗಕ್ಕೆ ಬಂದು ನೆಲಸಿದರು ರಾಮನಾಥನ ಭಾವಮಲ್ಲ ಎಂಬುವನು ನಾನಾ ದೊರೆಗಳಿಗೆ ಕಳುಹಿಸಿ ಬೇಡರನ್ನು ಕರೆಯಿಸಿಕೊಂಡು ಬೇಡ ಪಡೆಗಳನ್ನು ಏರ್ಪಡಿಸಿದನು. ಈ ರೀತಿಯಾಗಿ ಬೊಟಿ ಬೊರ್ಮ ಮುದಿಗೊಂಡಲೋಬ, ಬೇಟೆಸಿಂಗ ಮೊದಲಾದ ಎಪ್ಪತ್ತು ಮಾನ್ಯರ ಅಧಿನದಲ್ಲಿ ಬೇಡಸೈನ್ಯವು ತುಕಡಿಗಳಾಗಿ ವಿಂಗಡಿಸಲ್ಪಟ್ಟಿತು. "ಪ್ರೋಲಯನಾಯಕನೆಂಬುವನು ಹಿಂದೂ ಧರ್ಮವನ್ನು ರಕ್ಷಿಸುವುದಕ್ಕಾಗಿ ಹೋರಾಡಿ ೧೩೩೦–೩೫ರಲ್ಲಿ ಮರಣ ಹೊಂದಿದನು. ನಂತರ ಅವನ ಮಗ ಕಂಪಾಯನಾಯಕ ಎಪ್ಪತ್ತೈದು ರಾಜರುಗಳ ಕೂಟದ ನಾಯಕನಾಗಿದ್ದನು. ಸುಲ್ತಾನನ ಸಾಮ್ರಾಜ್ಯವನ್ನು ನಿರ್ನಾಮ ಗೊಳಿಸುವ ಕಾರ್ಯಗತಿಯನ್ನು ಶ್ರೀಘ್ರಗೊಳಿಸಲು ದಕ್ಷಿಣದ ಹಿಂದೂ ರಾಜರ ಒಂದು ಒಕ್ಕೂಟವನ್ನು ಸ್ಥಾಪಿಸಲು ಅವನು ಪ್ರಯತ್ನಿಸಿದನು."[೨೦] "ಕ್ರಿ.ಶ. ೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗುವ ಮೊದಲು ಹರಿಹರ ಮತ್ತು ಬುಕ್ಕರು ಕುಮ್ಮಟದುರ್ಗದಲ್ಲಿ ಕಾವಲುಗಾರರಾಗಿದ್ದರು. ಅವರು ಕಂಪಿಲರಾಯನ ಭಾವ ಸಂಗಮನ ಮಕ್ಕಳಾಗಿದ್ದರು. ಹೀಗಾಗಿ ಕಂಪಿಲರಾಯನ ಕಡೆ ಅಳಿದುಳಿದ ಜನರು ವಿಜಯನಗರದ ಸ್ಥಾಪನೆಯಲ್ಲಿ ನಿರ್ಣಯಕ ಪಾತ್ರವನ್ನು ವಹಿಸಿದ್ದರು"[೨೧]

ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಮಧ್ಯಕಾಲೀನ ಭಾರತೀಯ ಚರಿತ್ರೆಯಲ್ಲಿ ಒಂದು ಮೈಲುಗಲ್ಲು. ಈ ಸಮಯದಲ್ಲಿ ದಕ್ಷಿಣ ಭಾರತ ಅನೇಕ ಹಿಂದೂ ರಾಜಮನೆತನಗಳು ಮುಸ್ಲಿಂರ ಅಧೀನವಾಗಿದ್ದವು, ಅಲ್ಲದೆ ಅವರ ದಾಳಿಯಿಂದ ಜನರು ಅನೇಕ ನೋವುಗಳನ್ನು ಅನುಭವಿಸಿದರು, ದೇವಾಲಯಗಳು ಆಳಾದವು, ಸಂಪತ್ತನ್ನು ದೋಚಲಾಯಿತು, ಅಲ್ಲಾವುದ್ದಿನ್ ಖಿಲ್ಜ ಮತ್ತು ಮಹಮ್ಮದ್ ಬಿನ್ ತುಘಲಕರ ವಿರುದ್ದ ಎಲ್ಲಿನ ಅರಸರು ಶರಣಾಗತಿ ಮತ್ತು ಕಪ್ಪಕಾಣಿಕೆ ನೀತಿಯನ್ನು ಅನುಸರಿಸಿದನು. ಮುಸ್ಲಿಂ ದಾಳಿಯನ್ನು ತಡೆಯುವ ಸಾಮರ್ಥ್ಯವಾಗಲಿ ಒಗ್ಗಟ್ಟಾಗಲಿ ಅವರಲ್ಲಿರಲಿಲ್ಲ. ಇಂತಹ ಕ್ಲಿಷ್ಟ ಸನ್ನಿವೇಶದಲ್ಲಿ ಕುಮ್ಮಟದುರ್ಗದ ಪಾಳೆಯಗಾರರು ದೆಹಲಿ ಸುಲ್ತಾನರನ್ನು ಕಡೆಗಣಿಸಿ ಸ್ವತಂತ್ರವಾಗಿ ಅಧಿಕಾರವನ್ನ ನೆಡೆಸಿದರಾದರೂ ಮುಸ್ಲಿಂ ದಾಳಿಕೋರರ ಹೊಡತಕ್ಕೆ ಸಿಕ್ಕು ತತ್ತರಿಸಬೇಕಾಯಿತು. ಇಡೀ ದಕ್ಷಿಣ ಭಾರತವೇ ಮುಸ್ಲಿಮರ ಹಿಡಿತಕೊಳಪಟ್ಟಿತು. ಹಿಂದೂಧರ್ಮ ಅವನತಿಯಲ್ಲಿತ್ತು ಆಧಿಕಾರಿಗಳು, ಜನರು, ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸುವಲ್ಲಿ ನಿರ್ಣಾಯಿಕ ಪಾತ್ರವಹಿಸಿದರು. ವಿದ್ಯಾರಣ್ಯರ ಸಹಾಯದೊಂದಿಗೆ ಹರಿಹರ ಮತ್ತು ಬುಕ್ಕರು ಕ್ರಿ.ಶ.೧೩೩೬ರಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಅಡಿಗಲ್ಲು ಹಾಕಿದರು.

ಕರ್ಮಟದುರ್ಗ ಹಾಳಾದ ಮೇಲೆ ಚದುರಿ ಹೋದ ನಾಯಕ ಜನಾಂಗದವರು ಮತ್ತೇ ವಿಜಯನಗರಕ್ಕೆ ಮರಳಿ ಬಂದರು. ಅಲ್ಲದೆ ಆಯಾಕಟ್ಟಿನ ಸ್ಥಳಗಳಲ್ಲಿ ಪಾಳೆಯಗಾರಿಕೆಯನ್ನು

ಸ್ಥಾಪಿಸಿಕೊಂಡು ವಿಜಯನಗರದ ರಕ್ಷಣಾ ಕಾರ್ಯದಲ್ಲಿ ನಿರತರಾದರು. "ವಿಜಯನಗರ ಅರಸರು ಬೇಡ ಜನಾಂಗಕ್ಕೆ ತಕ್ಕ ಸ್ಥಾನ ಮಾನಗಳನ್ನು ನೀಡಿ ರಾಜಕೀಯವಾಗಿ ಬೆಳೆಯಲು ಕಾರಣರಾದರು ಯೋಧ ವೃತ್ತಿಯಲ್ಲಿ ಪಳಗಿದ್ದವರು ಈ ನಾಯಕರು. ಅವರ ಮುಖ್ಯವೃತ್ತಿ ಯುದ್ಧ ಮಾಡುವುದಾಗಿತ್ತು."[೨೨] ಯೋಧವೃತ್ತಿಯು ವಂಶಪಾರಂಪರ್ಯವಾಗಿ ಬೇಡ ಜನಾಂಗದಲ್ಲಿ ಮುಂದುವರೆಯಲು ವಿಜಯನಗರ ಅರಸರು ಬೇಡರನ್ನು ಸೈನ್ಯದಲ್ಲಿ ಸೇರಿಸಿಕೊಂಡರು "ವಿಜಯನಗರ ಸೈನ್ಯದ ಬಹುಭಾಗವು ಈ ಬೇಡರ ಕಾಲಾಳುಗಳ ಪಡೆಯಿಂದ ಕೂಡಿದ್ದಿತು."[೨೩] ಅಲ್ಲದೆ ಸೈನ್ಯದ ಅನೇಕ ಹುದ್ದೆಗಳಲ್ಲಿ ಬೇಡರಿದ್ದರು.

ವಿಜಯನಗರ ಆಡಳಿತದಲ್ಲಿ ಮೈಸೂರು ಜಿಲ್ಲೆಯ ಬೇಡರ ಜಾತಿಯ ಅಧಿಕಾರಿಗಳು ಬಹಳಷ್ಟು ಮಂದಿ ಇದ್ದರು ಎಂಬುದಕ್ಕೆ ಶಿಲಾಶಾಸನ ಆಧಾರವಿದೆ. ಬೆಟ್ಟದಪುರ, ರಾವಂದೂರು, "ಕೊಳ್ಳೇಗಾಲ ಗಳಲ್ಲಿ ಬೇಡ ನಾಯಕರ ಪ್ರಾಚೀನ ಶಿಲಾಶಾಸನಗಳು ದೊರಕುತ್ತವೆ. ವಿಜಯನಗರದ ಸ್ಥಳೀಯ ಆಡಳಿತದಲ್ಲಿ ಬೇಡರು ಅಧಿಕಾರಿಗಳಿದ್ದರು."[೨೪]

ಬೇಡ ನಾಯಕರ ಗಣರಾಜ್ಯಗಳತ್ತಿಂದ್ದ ಬೇಡವಟ್ಟುಗಳ ಕಾಲಕ್ರಮೇಣ ಸಂಸ್ಥಾನಗಳಾಗಿ ರೂಪಗೊಂಡವು ಅವುಗಳ ಆಧಿಕಾರಿಗಳನ್ನು ಪಾಳೆಯಗಾರರೆಂದು ಕರೆಯಲಾಯಿತ್ತು. ಸ್ಥಳೀಯವಾಗಿ ಅಧಿಕಾರವನ್ನು ಹಿಡಿದುಕೊಂಡಿದ್ದ ಇವರು ದಖ್ಖನ್ ಪ್ರಸ್ಥಭೂಮಿಯಾದ್ಯಂತ ಹರಡಿರುವ ಬೆಟ್ಟ ಗುಡ್ಡಗಳ ಮೇಲೆ ದುರ್ಗಗಳನ್ನು ಕಟ್ಟಿಕೊಂಡು ನೆಲೆಸಿದ್ದರು. ಅವರು ಸಾಮಂತ ನಾಯಕರಾಗಿದ್ದು, ಸ್ಥಳೀಯ ಆಡಳಿತಗಾರರಾಗಿದ್ದರು. ವಿಜಯನಗರದ ಅರಸರ ಕಾಲದಲ್ಲಿ ಬಹಳಷ್ಟು ಮಂದಿ ಪಾಳೆಯಗಾರರು ಹುಟ್ಟಿಕೂಂಡರು. ಈ ಅರಸರು ವಿಸ್ತಾರವಾದ ಸಾಮ್ರಾಜ್ಯವನ್ನು ಕಟ್ಟಿ ಅದಕ್ಕೆ ಸೇರಿದ ನಾನಾ ಭಾಗಗಳು ಮೇಲೆ ತಾವೇ ನೇರವಾಗಿ ಆಳ್ವಿಕೆ ನೆಡೆಸುವುದು ಕಷ್ಟವೆಂದು ಕಂಡುಬಂದಾಗ ಅಯಾ ಪ್ರದೇಶಗಳ ಆಡಳಿತದ ಉಸ್ತುವಾರಿಯನ್ನು ನೋಡಿಕೊಳ್ಳಲು ಕಂದಾಯ ವಸೂಲಿ ಮಾಡಲು ಇವೇ ಮೊದಲಾದ ಉದ್ದೇಶಗಳಿಗಾಗಿ ಕೆಲವು ಬಲಿಷ್ಠ ಹಾಗೂ ಪ್ರಭಾವವುಳ್ಳ ಅಧಿಕಾರಿಗಳನ್ನು ನೇಮಿಸುತ್ತಿದ್ದರು. "ಈ ಸಾಮಂತ ಅಧಿಕಾರಿಗಳೇ ಕ್ರಮೇಣ ಪಾಳೆಯಗಾರರೆನಿಸಿಕೊಂಡರು."[೨೫] ವಿಜಯನಗರ ಸಾಮ್ರಾಜ್ಯದ ಗಟ್ಟಿಯಾದ ತಳಪಾಯವೆಂದರೆ ಈ ಪಾಳೆಯಗಾರರೇ ಆಗಿದ್ದರು.

ವಿಜಯನಗರದ ಅರಸರು ಪಾಳೆಯಗಾರಿಕೆ ಸ್ಥಾಪನೆಗೆ ಹಾಗೂ ಪಾಳೆಯಗಾರರಿಗೆ ಮುಕ್ತ ಅವಕಾಶ ಕಲ್ಪಿಸಿಕೊಟ್ಟಿದ್ದರಿಂದ ಅನೇಕ ಪಾಳೆಯ ಪಟ್ಟುಗಳ ಅಸ್ತಿತ್ವಕ್ಕೆ ಬಂದವು. ಪಾಳೆಯ ಪಟ್ಟನ್ನು ಸ್ಥಾಪಿಸಿದವರಲ್ಲಿ ಬಹುತೇಕ ಮಂದಿ ವಿಜಯನಗರ ಸಾಮ್ರಾಜ್ಯದಲ್ಲಿ ಒಂದಿಲ್ಲೊಂದು ಸೇವೆಯಲ್ಲಿದ್ದವರೇ ಆಗಿದ್ದರು. ಹರತಿ ತಿಪ್ಪರಾಜನು ವಿಜಯನಗರದ ಸಂಗಮವಂಶದ ಪ್ರಾರಂಭದ ದೊರೆಗಳಾದ ಹಕ್ಕಬುಕ್ಕರ ಸಮಕಾಲೀನನು ಅವನು ಸೈನ್ಯದಲ್ಲಿ ಪ್ರಮುಖ ದಳಪತಿಯಾಗಿದ್ದನು. ಇವನು ನಿಡಗಲ್ಲು ದುರ್ಗಾಧಿಪತಿ ಚಿಕ್ಕ ಬೊರ್ಮ ನಾಯಕನನ್ನು ಯುದ್ಧದಲ್ಲಿ ಶಿರಶ್ಛೇದನ ಮಾಡಿದನು. ಇಂತಹ

ಅಪ್ರತಿಮ ವೀರನ ಸಾಹಸ ಹೋರಾಟವನ್ನು ಮೆಚ್ಚಿ ಬುಕ್ಕರಾಯನು ವೇದಾವತಿ ತೀರದ ಭೂಭಾಗವನ್ನೆಲ್ಲ ಆತನಿಗೆ ಜಹಗೀರಾಗಿ ಕೊಟ್ಟಿದ್ದನು.

ಮಧ್ಯಕಾಲೀನ ಸಮಾಜ ವ್ಯವಸ್ಥೆಯಲ್ಲಿ ರಾಜಕೀಯವಾಗಿ ಮೇಲ್‌ಸ್ತರಕ್ಕೆ ಬಂದ ಬೇಡರನ್ನು ಬೇಡರಾಗಿ ನೋಡಿದರೆ ವಿನಃ ಅವರು ಬೇಡ ದೊರೆಗಳೆಂದು ಒಪ್ಪಿಕೊಳ್ಳುವ ಗುಣಗಳಕಡೆ ಮೇಲ್ವವರ್ಗದ ಜನ ಹೋಗಲಿಲ್ಲವೆನಿಸುತ್ತದೆ. ಬ್ರಾಹ್ಮಣ ಮತ್ತು ವೀರಶೈವ ಧರ್ಮದವರು ಕೆಲವು ಬೇಡ ದೊರೆಗಳಿಗೆ ಕ್ರಮವಾಗಿ ಜನಿವಾರ ಮತ್ತು ಲಿಂಗಧಾರಣೆ ಮಾಡಿಸಿ ಅವರ ಹತ್ತಿರ ಉಳಿದುಕೊಂಡರೆ ವಿನಃ ಬೇಡ ದೊರೆ ಬೇಡನಾಗಿ ಆಳ್ವಿಕೆ ನೆಡಸಲು ಪ್ರೋತ್ಸಾಹಿಸಲಿಲ್ಲವೆಂದು ವಿಜಯನಗರೋತ್ತರ ಕಾಲೀನ ಘಟನೆಗಳಲ್ಲಿ ಕಾಣಬಹುದು. ಎರಡನೇ ಹರಿಹರನ ಗ್ರಾಮ ಶಾಸನಗಳಲ್ಲಿ ಗ್ರಾಮ್ಯನಾಯಕನಹಳ್ಳಿ ಕೆಲವು ಪಾಳೆಯಗಾರ ಹೆಸರುಗಳು ಕಂಡುಬರುವುದರಿಂದ ಅಷ್ಟೊತ್ತಿಗೆ ಅಲ್ಲಿ ಪಾಳೆಯಗಾರಿಕೆ ಸ್ಥಾಪನೆಯಾಗಿತ್ತೆಂದು ಹೇಳಬಹದು.

ಪಾಳೆಯಗಾರರ ಮತ್ತು ವಿಜಯನಗರ ಅರಸರ ನಡುವೆ ಒಳ್ಳೆಯ ಸಂಬಂಧಗಳು ಮುಂದುವರೆದಿದ್ದವು. ಬೇಡರು ಈ ಕಾಲದಲ್ಲಿಯೇ ಕೆಲವು ಪ್ರದೇಶಗಳಲ್ಲಿ ರಾಜ್ಯವಾಳುತ್ತಿದುದ್ದು ಗೊತ್ತಾಗುತ್ತದೆ. ಹೊಳಲ್ಕೆರೆ (ತಾ) ದುಮ್ಮಿ (ರಾಮಗಿರಿ ಹೋಬಳಿ) ಯಲ್ಲಿ ಗಂಗೇಯ ನಾಯಕರ ಮಗ ಶ್ರೀರಂಗನಾಥ ನಾಯಕ ಎಂಬ ಬೇಡನು ಕ್ರಿ.ಶ.೧೪೦೦ ರಲ್ಲಿಯೇ ರಾಜ್ಯವಾಳುತ್ತಿದ್ದನು ಎಂದು ತಿಳಿದುಬರುತ್ತದೆ. "ಮೈಸೂರು ಒಡೆಯರ ಮನೆತನ ಸ್ಥಾಪಕರಾದ ಯದುರಾಯ ಮತ್ತು ಕೃಷ್ಣರಾಯರು ಸೋಲಿಸಿದ ಮಾರನಾಯಕನು ಬೇಡರನು ಇವನ ವಂಶಜರು ಈ ಭಾಗದಲ್ಲಿ ಪರಿವಾರದವರೆಂದು ಕರೆಸಿಕೊಳ್ಳುತ್ತಾರೆ."[೨೬] ಈ ಮಾರನಾಯಕನು ಕಾರುಗನಹಳ್ಳಿ ಪಾಳೆಯಗಾರನಾಗಿ ಶ್ರೀರಂಗ ಪಟ್ಟಣವನ್ನು ವಶಪಡಿಸಿಕೊಂಡು ಆ ಭಾಗದಲ್ಲಿ ಪ್ರಸಿದ್ದಿಗೆ ಬಂದಿದ್ದನು.

ಚಿತ್ರದುರ್ಗದ ಕಾಮಗೇತಿ ನಾಯಕನು ಕ್ರಿ.ಶ.೧೩೬೮ರಲ್ಲಿ ಗುಲ್ಬರ್ಗಾದ ಸುಲ್ತಾನರಿಂದ ಹರಿಹರನ ಕಗ್ಗೊಲೆಯಾಗುತ್ತಿದ್ದುದನ್ನು ತಪ್ಪಿಸಿದನು. ಗುಮ್ಮನಾಯಕನಹಳ್ಳಿ ಪಾಳೆಯಗಾರ ಕದಿರಪ್ಪ ನಾಯಕನು ವಿಜಯನಗರದ ಅಪ್ತ ಸೇವಕನಾಗಿದ್ದು, ವಿಜಯನಗರದ ದೊರೆಯಾದ ಇಮ್ಮಡಿ ಪ್ರೌಢದೇವರಾಯನ ಕಾಲದಲ್ಲಿ ಅನೇಕ ಪಾಳೆಯಪಟ್ಟುಗಳು ಹುಟ್ಟಿಕೊಂಡವು, ಕುಮಾರರಾಮನ ಮತ್ತು ಅವನ ಬೇಡ ಪಡೆಯ ಸಾಹಸಗಳನ್ನು ೩ನೇ ದೇವರಾಯನು ತಿಳಿದುಕೊಂಡಿದ್ದನು, ಹೀಗಾಗಿ ವಿಜಯನಗರ ಸೈನ್ಯದಲ್ಲಿ ಮತ್ತು ರಾಜ್ಯದ ಆಯಾಕಟ್ಟಿನ ಸ್ಥಳಗಳಲ್ಲಿ ಬೇಡರನ್ನು ನೇಮಕ ಮಾಡಿಕೊಂಡನು, ಇವನ ಸಹಾಯದಿಂದ ಕೆಲವು ಬಲಿಷ್ಠ ನಾಯಕರು ಸಂಸ್ಥಾನಗಳನ್ನು ಪ್ರಾರಂಭಿಸಿದರು. ಕ್ರಿ.ಶ.೧೪೩೬-೩೭ರಲ್ಲಿ ಪ್ರೌಢದೇವರಾಯನ ಸಹಾಯದಿಂದ ಕನಕಗಿರಿಯಲ್ಲಿ

ಪರಸ್ಪರ ಉಡಿಚನಾಯಕನು ಪಾಳೆಯಗಾರಿಕೆಯನ್ನು ಆರಂಭಿಸಿದು ಕನಕಗಿರಿ ಸಂಸ್ಥಾನವು ವಿಜಯನಗರ ಅರಸರ ರಕ್ಷಣೆಯಲ್ಲಿ ಮೊದಲು ಸ್ಥಾನ ಪಡೆಯಿತು. ಸಂಗಮರ ಕಾಲಕ್ಕೆ ಮುದುಗಲ್ಲ ಕೋಟೆಯ ಅಧಿಕಾರಿಯಾಗಿ ವರದಣ್ಣನಾಯಕ ಎಂಬುವನು ಸೇವೆಸಲ್ಲಿಸುತ್ತಿದ್ದನು.

ವಿಜಯನಗರದ ಬೆನ್ನೆಲುಬಾಗಿದ್ದ ಪಾಳೆಯಗಾರರು ಸಿಂಹಾಸನಕ್ಕೆ ಸಾಮಂತರಾಗಿದ್ದುಕೊಂಡು ಆಡಳಿತ ನೆಡೆಸಿ ಸಿಂಹಾಸನದ ಸಲುವಾಗಿ ಒಟ್ಟೆಗೊಡಿ ತಾಳಿಕೋಟೆ ಯುದ್ಧದಲ್ಲಿ ಧೈರ್ಯ-ಸಾಹಸಗಳನ್ನು ಕೋರಿ ಸರ್ವತ್ಯಾಗ ಮಾಡಿದರು. "ಈ ಯುದ್ಧದಲ್ಲಿ ೭೨ ವಂಶದ ನಾಯಕರೂ ಮತ್ತು ಅವರ ಅನುಯಾಯಿಗಳೂ ಕಪ್ಪಕ್ಕಿಡಾದರೆಂದು ಹೇಳಲಾಗಿದೆ."[೨೭] ಸೈನಿಕ ವೃತ್ತಿಗೆ ಹೆಚ್ಚು ಅಂಟಿಕೊಂಡಿದ್ದ ಬೇಡರು ಬೇರಾವ ವೃತ್ತಿಗಳ ಕಡೆ ಗಮಹರಿಸಲಿಲ್ಲ." ಕ್ರಿ.ಶ.೧೫೬೫ ಯುದ್ಧದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಬೇಡ ಸೈನಿಕರು ಹತರಾದರು ಸುಮಾರು ೪೦ ಸಾವಿರ ಪಡೆ ಹತವಾಯಿತೆಂದು ವಿದೇಶಿ ಪ್ರವಾಸಿ ಫಿರಾಸ್ತಾನ ಹೇಳಿದ್ದಾನೆ."[೨೮] ಸಂತೇಬೆನ್ನೂರು ಹನುಮಪ್ಪನಾಯಕನು ವಿಜಯನಗರ ಸೈನ್ಯದ ಸೇನಾನಿಯಾಗಿ "ಕ್ರಿ.ಶ.೧೫೬೫ರ ಯುದ್ದದಲ್ಲಿ ತನ್ನ ಪರಾಕ್ರಮವನ್ನು ಪ್ರದರ್ಶಿಸಿದನು. ಇವನ ಶೌರ್ಯ ಸಾಹಸವನ್ನು ಮೆಚ್ಚಿ ಪುರಸ್ಕಾರ ರೂಪವಾಗಿ ಉಚ್ಚ ಸ್ಥಾನಮಾನವನ್ನು ನೀಡಿ ಸಂತೇಬೆನ್ನೂರನ್ನು ನೀಡಲಾಯಿತು."[೨೯]

ವಿಜಯನಗರ ಅರಸರು ತಮ್ಮ ಸಾಮ್ರಾಜ್ಯ ರಕ್ಷಣೆಗಾಗಿ ಹೋರಾಡಿದ ಪಾಳೆಯಗಾರರ ಸೇವೆಯನ್ನ ಮನ್ನಿಸಿ ಅವರಿಗೆ ಕೆಲವು ಪ್ರದೇಶಗಳನ್ನು ಅಮರಮಾಗಣಿಯಾಗಿ ನೀಡಿದರು. ಕ್ರಿ.ಶ.೧೫೬೬ ರಲ್ಲಿ ತಿರುಮಲರಾಜನು ಪೆನಗೊಂಡದಲ್ಲಿದ್ದುಕೊಂಡು ಹಿರಿಯರ ನಾಯಕ ತನವನ್ನು ಹರತಿ ಮನೆತನದ ಅಂಬಣ್ಣನಾಯಕರ ಮಗ ಕೆಂಚಪ್ಪನಾಯಕನಿಗೆ ಅಮಾರಮಾಗಣಿಯಾಗಿ ದಯಪಾಲಿಸಿದನು.

ಒಟ್ಟಾರೆ ನಾಯಕ ಜನಾಂಗವು ಅಲೆಮಾರಿ ಜೀವನದಲ್ಲಿ ಬೇಟೆಯನ್ನೆ ವೃತ್ತಿಯಾಗಿ ಬೆಳಸಿಕೊಂಡು ಬಂದ ಇವರ ಈ ವೃತ್ತಿ ಮುಂದೆ ವರದಾನವಾಗಿ ಇವರ ಬೆಳವಣಿಗೆಗೆ ಕಾರಣವಾಗಿರುವುದನ್ನು ನಾವು ಗಮನಿಸಬಹುದು. ಪುರಾಣ ಇತಿಹಾಸಗಳಲ್ಲಿ ಕಂಡುಬರುವ ನಾಯಕ ಸಮುದಾಯವು ಕೇವಲ ಕೆಳವರ್ಗದ ಜನಾಂಗಿಯವಾಗಿದ್ದರೂ ಶೌರ್ಯ ಪ್ರರಾಕ್ರಮಕ್ಕೆ ಬೇಡರೇ ಸರಿಸಾಟಿ ಎನ್ನುವಂತೆ ಅವರ ಬೆಳವಣಿಗೆಯನ್ನ ಗಮನಿಸಿ ಹೇಳಬಹುದು. ಬೇಟೆಗಾರನಾಗಿ, ಸೈನಿಕನಾಗಿ. ಸಾಮಾಂತನಾಗಿ, ಪಾಳೆಯಗಾರನಾಗಿ, ವಿವಿಧ ಅಧಿಕಾರಿಯಾಗಿ ನಾಯಕರು ಬೆಳವಣಿಗೆ ಹೊಂದುತ್ತಾ ಬಂದು ವಿಜಯನಗರ ಸಾಮ್ರಾಜ್ಯದ ಪತನದ ನಂತರ ಸ್ವತಂತ್ರ್ಯ ಆಡಳಿತಗಾರರಾಗಿ ರಾಜ್ಯಭಾರ ನಡೆಸಿರುವುದನ್ನ ನಾವು ಇತಿಹಾಸದಿಂದ ತಿಳಿಯಬಹುದಾಗಿದು, ಹೀಗೆ ನಾಯಕ ಜನಾಂಗವು ಹಂತ ಹಂತವಾಗಿ ಬೆಳವಣಿಗೆ ಹೊಂದಿರುವವದನ್ನು ಕಾಣಬಹುದಾಗಿದೆ.

ಅಡಿಟಿಪ್ಪಣಿಗಳು

೧. ಮಂಜುನಾಥ ಬೇವಿನಕಟ್ಟಿ (ಸಂ), **ವ್ಯಾದ ಚರಿತೆ ಬೇಡ ಕುಲ ಮೂಲದ ಕಥನಗಳು**, ಪು.೧೯೨.

೨. ಅದೇ, ಪು.೩೫.

೩. ಅದೇ, ಪು.೩೬.

೪. ಶ್ರೀಸತ್ಯನ್ ಬಿ.ಎನ್.(ಸಂ), **ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್**, ೧೯೬೭, ಪು.೬೦.

೫. ಅದೇ, ಪು.೫೩.

೬. ಲಕ್ಷ್ಮಣ್ ತೆಲಗಾವಿ (ಸಂ), **ಹುಲ್ಲೂರು ಶ್ರೀನಿವಾಸ ಜೊಯಿಸರ ಐತಿಹಾಸಿಕ ಲೇಖನಗಳು**, ಪು.೨೪೮.

೭. ಅದೇ, ಪು.೨೪೮, ೨೪೯.

೮. ಅಯ್ಯರ್ ಎಲ್.ಕೆ.ಎ., **ದಿ ಮೈಸೂರು ಟ್ರೈಬ್ಸ್ ಆ್ಯಂಡ್ ಕ್ಯಾಸ್ಟ್ಸ್**, ಪು.೨೦೦.

೯. ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಪು.೨೯೬.

೧೦. ಕಲಬುರ್ಗಿ ಎಂ.ಎಂ.(ಸಂ), **ಕರ್ನಾಟಕ ಕೈಫಿಯತ್ತುಗಳು**, ಪು.೫೫.

೧೧. ವಿರೂಪಾಕ್ಷಿ ಪೂಜಾರಹಳ್ಳಿ, *ಕರ್ನಾಟಕದಲ್ಲಿ ಬೇಡನಾಯಕ ವೀರರ ಆರಾಧನೆಗಳು*(ಸಂ), ಹರ್ತಿಕೋಟೆ ವೀರೇಂದ್ರಸಿಂಹ, **ಘಟ್ಟ ಹೊಸಹಳ್ಳಿ ಗಟ್ಟಿಗ**, ಪು.೩೬.

೧೨. ಹರ್ತಿಕೋಟೆ ವೀರೇಂದ್ರಸಿಂಹ ಮತ್ತು ತೇಜಸ್ವೀಕಟ್ಟೆಮನಿ(ಸಂ), **ಘಟ್ಟ ಹೊಸಹಳ್ಳಿ ಗಟ್ಟಿಗ**, ಪು.೩೬.

೧೩. ಅದೇ, ಪು.೩೬.

೧೪. ಕೇಶವರಾವ್ ಎಂ.ವಿ., ಕೇಶವಭಟ್ಟ ಎಂ.(ಸಂ), **ಕರ್ನಾಟಕ ಇತಿಹಾಸ ದರ್ಶನ**, ಸಂಪುಟ ೮, ಪು.೯೧.

೧೫. ಮಹಾದೇವ ಸಿ., *ತಿರುಮಲಾದೇವಿಯ ಪಟ್ಟಣ ನಾಗಲಪುರ ಹೊಸಪೇಟೆ ಒಂದು ಪರಿಶೀಲನೆ*, **ಇತಿಹಾಸ ದರ್ಶನ ಸಂಪುಟ** ೧೦, ಪು.೧೩೬.

೧೬. ವೆಂಕಟರಂಗೋಕಟ್ಟಿ, **ಗೈಜೆಟಿಯರ್, ಮುಂಬೈ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು ಅಥವಾ ದಕ್ಷಿಣ ಮಹಾರಾಷ್ಟ್ರಗಳ ಸಹಿತ**, ಪು.೧೯೯.

೧೭. ಲಕ್ಷ್ಮಣ್ ತೆಲಗಾವಿ ಮತ್ತು ಶ್ರೀನಿವಾಸ್ ಎಂ.ವಿ., **ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನಾ ಲೇಖನಗಳು**, ಪು.೫೭೫.

೧೮. ಕಲಬುರ್ಗಿ ಎಂ.ಎಂ., **ಕರ್ನಾಟಕ ಕೈಪಿಯತ್ತುಗಳು**, ಪು.೪೬೬.

೧೯. ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ ಎಂ.ವಿ.(ಸಂ), **ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನಾ ಲೇಖನಗಳು**, ಪು.೪೬೭.

೨೦. ನರಸಿಂಹಮೂರ್ತಿ ಎ.ವಿ.(ಕ. ಅನು: ಪ್ರ, ಸಂ), **ದೆಹಲಿ ಸುಲ್ತಾನರ ಅಧಿಪತ್ಯ**, ಪು.೧೧೬–೧೧೭.

೨೧. ನೇಗಿನಾಳ ಎಂ.ಬಿ., *ಕರ್ನಾಟಕ ಸಾಹಿತ್ಯ ಕೃತಿಗಳಲ್ಲಿ ಬೇಡಜನಾಂಗ*, **ಘಟ್ಟಿ ಹೊಸಹಳ್ಳಿ**, ಪು.೫೦.

೨೨. ಷೇಕ್ ಅಲಿ (ಸಂ), **ಕರ್ನಾಟಕ ಚರಿತ್ರೆ : ಸಂಪುಟ ೩**, ೧೯೯೭, ಪು.೨೪೬

೨೩. ಹರ್ತಿಕೋಟೆ ವೀರೇಂದ್ರಸಿಂಹ, *ನಾಯಕ ಜನಾಂಗದ ಪರಂಪರೆ* (ಸಂ), ಹರ್ತಿಕೋಟೆ ವೀರೇಂದ್ರಸಿಂಹ, **ವಾಲ್ಮೀಕಿ ಕಿರಣ**, ಪು.೨೯.

೨೪. ವೀಣಾ ಎಂ.ಪಿ., **ಮನೆ ಸಮಾಜ ಮತ್ತು ಸಂಸ್ಕೃತಿ**, ಪು.೪.

೨೫. ಮೀರಾಸಾಬಿಹಳ್ಳಿ ಶಿವಣ್ಣ, *ನಾಯಕ ಜನಾಂಗ ಒಂದು ನೋಟ* (ಸಂ), ಹರ್ತಿಕೋಟೆ ವೀರೇಂದ್ರಸಿಂಹ, **ವಾಲ್ಮೀಕಿ ಜ್ಯೋತಿ**, ೧೯೮೯, ಪು.೬೧.

೨೬. ಮಹೇಶ್ ತಿಪ್ಪಶೆಟ್ಟಿ (ಅನು), **ಮೈಸೂರು ಚಾಮುಂಡೇಶ್ವರಿ ದೇವಸ್ಥಾನ ಒಂದು ಸಾಮಾಜಿಕ ಅಧ್ಯಯನ**, ಪು.೪೬

೨೭. ವೀರನಾಯಕ ಎಚ್.ವಿ., **ಕ್ಷಾತ್ರಾಂಶ ಪ್ರಭೊದ**, ಪು.೧೪.

೨೮. ವಿರೂಪಾಕ್ಷಿ ಪ್ರಜಾರಹಳ್ಳಿ, *ಕರ್ನಾಟಕದಲ್ಲಿ ಬೇಡ ನಾಯಕ ವೀರರ ಆರಾಧನಾ ಕ್ಷೇತ್ರಗಳು*, ಹರ್ತಿಕೋಟೆ ವೀರೇಂದ್ರಸಿಂಹ, **ಘಟ್ಟಿ ಹೊಸಹಳ್ಳಿಗಟ್ಟಗ**, ಪು.೩೭.

೨೯. ಕೇಶವರಾವ್ ಎಂ.ವಿ., ಕೇಶವಭಟ್ಟ ಎಂ.(ಸಂ), **ಪೂರ್ವೋಕ್ತ**, ಪು.ಸಂ.೪೭೭.

ಅಧ್ಯಾಯ ನಾಲ್ಕು

ಶಾಸನಗಳಲ್ಲಿ ಚಿತ್ರದುರ್ಗ ನಾಯಕರು

ಅಧ್ಯಾಯ ನಾಲ್ಕು

ಶಾಸನಗಳಲ್ಲಿ ಚಿತ್ರದುರ್ಗ ನಾಯಕರು

ಕರ್ನಾಟಕ ರಾಜ್ಯದ ಜಿಲ್ಲಾ ಕೇಂದ್ರವಾದ ಚಿತ್ರದುರ್ಗ ಹಿಂದೆ ನಾನಾ ಹೆಸರುಗಳಿಂದ ಕರೆಯಲ್ಪಡುತ್ತಿತ್ತು. ಕದಂಬರ ಕಾಲದಲ್ಲಿ ಸೂಳ್ಗಲ್ಲು ನಾಡು ಎಂದೂ. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಚಿಮ್ಮತ್ತನಕಲ್ಲು ಎಂದೂ ಬೆಮ್ಮಚ್ಚನೂರು, ಚಿಮ್ಮತ್ತನೂರು ಎಂದೂ, ಅನಂತರ ಊರಿನ ಪಶ್ಚಿಮದಲ್ಲಿರುವ ಧವಳಪ್ಪನ ಗುಡ್ಡವು ಬಿಚ್ಚಿದ ಛತ್ರಿಯ ಆಕಾರದಲ್ಲಿರುವುದರಿಂದ ಇದಕ್ಕೆ ಶಿತಲದುರ್ಗ, ಛತ್ರಕಲ್‌ದುರ್ಗ ಎಂದೂ ಜನಪದ ಕಾವ್ಯಗಳಲ್ಲಿ ಚಿಂತರಕಲ್‌ದುರಗ, ಚಿತ್ರಕಲ್‌ದುರುಗ, ಚಿತ್ರಕಲ್ಲು, ಚಿಂತರಕಲ್ಲು, ಸಿಂತರಕಲ್ಲು ಎಂದು ಪ್ರಯೋಗಗಳನ್ನು ಕಾಣಬಹುದು. ಮೊದಲು ಕಲ್ ಎಂದೂ ಆಮೇಲೆ ದುರ್ಗವೆಂದೂ ಬದಲಾವಣೆ ಹೊಂದಿ ಚಿತ್ರಕಲ್ ದುರ್ಗವಾಗಿ, ನಂತರದಲ್ಲಿ ಚಿತ್ರದುರ್ಗವಾಗಿದೆ. ಮುಂದೆ "ಹೈದರಾಲಿ ಇದನ್ನು ಫರೂಕಾಬಾದ್ ಎಂದು ಮರುನಾಮಕರಣ ಮಾಡಿದ್ದನು. ಆದರೆ ಈ ಹೆಸರು ಹೆಚ್ಚು ಕಾಲ ನಿಲ್ಲದೆ ಹಿಂದೆ ಇದ್ದ ಚಿತ್ರಕಲ್‌ದುರ್ಗ ಆಗಿ. ನಂತರದಲ್ಲಿ ಇದು ಚಿತ್ರದುರ್ಗವಾಗಿರುವುದನ್ನು ಕಾಣಬಹುದು."[೧]

ಚಿತ್ರದುರ್ಗವನ್ನು ರಾಜಧಾನಿಯಾಗಿ ಮಾಡಿಕೊಂಡು ಚಿತ್ರದುರ್ಗದ ನಾಯಕರು ಕ್ರಿ.ಶ.೧೬ನೇ ಶತಮಾನದ ಮಧ್ಯಕಾಲದಿಂದ ಕ್ರಿ.ಶ.೧೮ನೇ ಶತಮಾನದ ಉತ್ತಾರಾರ್ಧದವರೆಗೆ ಈ ಜಿಲ್ಲೆಯಲ್ಲಿ ಸುಮಾರು ಇನ್ನೂರಹನ್ನೊಂದು ವರುಷಗಳ ಕಾಲ ಆಳ್ವಿಕೆ ನೆಡೆಸಿದರು ಇವರು ಕರ್ನಾಟಕ ಇತಿಹಾಸದಲ್ಲಿ ಚಿತ್ರದುರ್ಗಕ್ಕೆ ಒಂದು ವಿಶಿಷ್ಠವಾದ ಸ್ಥಾನವನ್ನು ತಂದು ಕೊಟ್ಟರು. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ಸಂಸ್ಥಾನಗಳಲ್ಲಿ ಚಿತ್ರದುರ್ಗ ತುಂಬಾ ಪ್ರಮುಖವಾದದ್ದು. ಈ ಪ್ರದೇಶವನ್ನು ಕೇಂದ್ರವಾಗಿ ಮಾಡಿಕೊಂಡು ಆಳ್ವಿಕೆ ನೆಡೆಸಿದ ಇವರು ಚಿತ್ರದುರ್ಗದ ನಾಯಕರು ಚಿತ್ರದುರ್ಗದ ಪಾಳೆಗಾರರು ಎಂದು ಖ್ಯಾತರಾಗಿದ್ದಾರೆ. ಚಿತ್ರದುರ್ಗವನ್ನು ಗಂಡುಮೆಟ್ಟದ ನಾಡು ಎಂದೂ ಚಿತ್ರದುರ್ಗ ಕೋಟೆಯ ಏಳುಸುತ್ತಿನ ಕೋಟೆ ಎಂದು ಪ್ರಸಿದ್ದಿ ಪಡೆಯುವುದಕ್ಕೆ ಕಾರಣರಾದವರು ಈ ಚಿತ್ರದುರ್ಗದ ನಾಯಕರು.

ಕರ್ನಾಟಕ ಪಾಳೆಯಗಾರರಲ್ಲಿ ಪ್ರಸಿದ್ಧರಾದ ಚಿತ್ರದುರ್ಗದ ಪಾಳೆಯಗಾರರು ವಾಲ್ಮೀಕಿ ಮತಸ್ಥರೂ, ಕಾಮಗೇತಿ ವಂಶಜರೂ ಆಗಿದ್ದು. ಕಸ್ತೂರಿ ಎಂಬ ಅಭಿಧಾನವನ್ನು ಶ್ರೀಮನ್ಮಹಾನಾಯಕಾಚಾರ್ಯ ಎಂಬ ಬಿರುದನ್ನು ಧರಿಸಿಕೊಂಡಿದ್ದರು. ಈ ಮನೆತನದಲ್ಲಿ ಮುಖ್ಯರೆನಿಸಿದ ಹದಿನಾಲ್ಕು ಜನರು ಚಿತ್ರದುರ್ಗವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಅಳ್ವಿಕೆ ನೆಡೆಸಿದವರು "ಇತಿಹಾಸದಲ್ಲಿ 'ಮದಕರಿನಾಯಕರು'ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದಾರೆ."[೨]

೪.೧. ಚಿತ್ರದುರ್ಗ ನಾಯಕರ ರಾಜಕೀಯ ಹಿನ್ನೆಲೆ

ವಿಜಯನಗರದ ಸಾಮಂತರಾಗಿ ಚಿತ್ರದುರ್ಗ ಪ್ರದೇಶದಲ್ಲಿ ಆಳ್ವಿಕೆಯನ್ನು ಆರಂಭಿಸಿದ ಕಾಮಗೇತಿಕುಲದ ನಾಯಕ ಅರಸರು ೧೪ ಮಂದಿ ಇವರಲ್ಲಿ ಮೊದಲಿಗರೆಂದರೆ ಚಿತ್ರನಾಯಕ. ಯಾವುದೇ ದಾಖಲೆಗಳು ನಮಗೆ ಲಭ್ಯವಾಗದ ಕಾರಣ "ಮತ್ತಿ ತಿಮ್ಮಣ್ಣನಾಯಕ (೧೫೬೮–೧೫೮೯) ನೇ ಮೊದಲಿಗನೆಂದು ಹೇಳಲಾಗಿದೆ. ಈತನ ತರುವಾಯ ಚಿತ್ರದುರ್ಗ ಸಿಂಹಾಸನವನ್ನು ಪರಿಗ್ರಹಿಸಿದವರೆಂದರೆ ಒಂದನೇ ಓಬಣ್ಣನಾಯಕ (ಓಬಣ್ಣನಾಯಕ/ ಠಾಣ್ಯದ ಓಬಳನಾಯಕ/ ಅಣ್ಣಗಾರೊ ಓಬ್ಬಣ್ಣ/ ಒಂದನೇ ಮದಕರಿನಾಯಕ/ ಗಡ್ಡದ ಮದಕರಿನಾಯಕ) (೧೫೮೯–೧೬೦೩) ಒಂದನೇ ಕಸ್ತೂರಿ ರಂಗಪ್ಪನಾಯಕ (೧೬೦೩–೧೬೫೨), ಇಮ್ಮಡಿ ಮದಕರಿನಾಯಕ (೧೬೫೨–೧೬೭೪) ಇಮ್ಮಡಿ ಓಬಣ್ಣನಾಯಕ (೧೬೭೪) ಕಸ್ತೂರಿ ಚಿಕ್ಕಣ್ಣನಾಯಕ (೧೬೭೫–೧೬೮೬), ಮುಮ್ಮಡಿ ಮದಕರಿನಾಯಕ (೧೬೮೬–೧೬೮೮), ಬಿಚ್ಚುಗತ್ತಿ ಭರಮಣನಾಯಕ ೧೬೮೯–೧೭೫೪) ಮತ್ತು ರಾಜಾವೀರ ಮದಕರಿನಾಯಕ (ಚಿಕ್ಕಮದಕರಿನಾಯಕ) (೧೭೫೪–೧೭೭೯)"[೩] ಚಿತ್ರದುರ್ಗ ನಾಯಕರು ಆಳ್ವಿಕೆಯ ಅವಧಿಯನ್ನು ಕ್ರಿ.ಶ.೧೫೬೮ ರಿಂದ ೧೭೭೯ ವರೆಗೂ ಗುರುತಿಸಲಾಗಿದು. ಇವರು ೨೧೧ ವರ್ಷಗಳ ಕಾಲ ಚಿತ್ರದುರ್ಗವನ್ನು ಕೇಂದ್ರವಾಗಿ ಇಟ್ಟುಕೊಂಡು ಆಳ್ವಿಕೆ ನಡೆಸಿದ್ದಾರೆ. ವರ್ಷಗಳನ್ನ ಈ ಕೆಳಗಿನಂತೆ ಗಮನಿಸಬಹುದು.

ಮತ್ತಿ ತಿಮ್ಮಣ ನಾಯಕ(ಕ್ರಿ.ಶ. ೧೫೬೮–೧೫೮೯)	–	೨೧ವರ್ಷ
ಒಂದನೇ ಓಬಣ್ಣನಾಯಕ(ಕ್ರಿ.ಶ.೧೫೮೯–೧೬೦೩)	–	೧೫ ವರ್ಷ
ಒಂದನೇ ಕಸ್ತೂರಿ ರಂಗಪ್ಪನಾಯಕ(ಕ್ರಿ.ಶ.೧೬೦೩–೧೬೬೨)	–	೪೯ ವರ್ಷ
ಇಮ್ಮಡಿ ಮದಕರಿನಾಯಕ(ಕ್ರಿ.ಶ.೧೬೫೨–೧೬೭೫)	–	೨೨ ವರ್ಷ
ಇಮ್ಮಡಿ ಓಬಣ್ಣನಾಯಕ(ಕ್ರಿ.ಶ.೧೬೭೫)	–	–
ಕಸ್ತೂರಿ ಚಿಕ್ಕಣ್ಣ ನಾಯಕ(ಕ್ರಿ.ಶ.೧೬೭೫–೧೬೮೬)	–	೧೨ ವರ್ಷ

ಮುಮ್ಮಡಿ ಮದಕರಿನಾಯಕ(ಕ್ರಿ.ಶ.೧೬೮೬–೧೬೮೮) – ೩ ವರ್ಷ

ಬಿಚ್ಚುಗತ್ತಿ ಭರಮಣ್ಣನಾಯಕ(ಕ್ರಿ.ಶ.೧೬೮೯–೧೭೨೧) – ೩೨ ವರ್ಷ

ಹಿರೇ ಮದಕರಿನಾಯಕ(ಕ್ರಿ.ಶ.೧೭೨೧–೧೭೪೯) – ೨೭ ವರ್ಷ

ಇಮ್ಮಡಿ ಕಸ್ತೂರಿ ರಂಗಪ್ಪನಾಯಕ(ಕ್ರಿ.ಶ.೧೭೪೯–೧೭೫೪) – ೬ ವರ್ಷ

ರಾಜಾ ವೀರ ಮದಕರಿನಾಯಕ(ಕ್ರಿ.ಶ.೧೭೫೪–೧೭೭೯) – ೨೪ ವರ್ಷ

ಐತಿಹ್ಯದ ಪ್ರಕಾರ ಈ ಮನೆತನದ ಮೂಲ ಪುರುಷ ಚಿತ್ರನಾಯಕ ಎಂಬುದಾಗಿ ತಿಳಿಯುತ್ತದೆ, ದೆಹಲಿ ಸುಲ್ತಾನನ ಬಳಿ ವಜೀರನಾಗಿದ್ದನೆಂತಲೂ ಆನೆ ಪಳಗಿಸಿದ ವೀರನಾದ್ದರಿಂದ ಮದಕರಿನಾಯಕ ಎಂಬ ಬಿರುದು ಪಡೆದಿದ್ದನೆಂತಲೂ, ಇವನ ವಂಶಸ್ಥರೆಲ್ಲರೂ ಮದಕರಿ ನಾಯಕರೆಂಬ ಅಭಿಧಾನವನ್ನು ಪಡೆದಿರುವುದಕ್ಕೆ ಇದೇ ಕಾರಣವೆಂತಲೂ ಹೇಳಲಾಗುತ್ತದೆ. ಆದರೆ "ಈ ವಂಶದ ಮೊದಲನೆಯ ದೊರೆ ಮತ್ತಿ ತಿಮ್ಮಣ್ಣ ನಾಯಕನ ಕಾಲದಿಂದ ಶಾಸನಗಳು ದೊರಕುವುದರಿಂದ ಚಿತ್ರದುರ್ಗದ ಖಚಿತ ಇತಿಹಾಸ ರಚನಾಕಾರ್ಯ ಇವನ ಕಾಲದಿಂದ ಪ್ರಾರಂಬಿಸಬೇಕಾಗುತ್ತದೆ."[೪]

ಮತ್ತಿ ತಿಮ್ಮಣ್ಣನಾಯಕ (ಕ್ರಿ.ಶ.೧೫೬೮–೧೫೮೯)

ಚಿತ್ರನಾಯಕನನ್ನು ಚಿತ್ರದುರ್ಗದ ನಾಯಕರ ಮೂಲಪುರುಷನೆಂದು ಐತಿಹ್ಯಗಳು ಚಿತ್ರಿಸಿದರೂ ಕೂಡ ಈ ವಂಶದ ಮೊದಲನೆಯ ದೊರೆ ಮತ್ತಿ ತಿಮ್ಮಣ್ಣನಾಯಕನಾಗಿದ್ದಾನೆ. ಏಕೆಂದರೆ ಈತನ ಕಾಲದಿಂದ ಶಾಸನಗಳು ದೊರಕುವುದರಿಂದ ಚಿತ್ರದುರ್ಗದ ಖಚಿತ ಇತಿಹಾಸ ರಚನಾಕಾರ್ಯವನ್ನು ಇವನ ಕಾಲದಿಂದ ಪ್ರಾರಂಭಿಸಬೇಕಾಗುತ್ತದೆ. "ವಿಜಯನಗರದ ರಾಮರಾಯ ಎರದಿಮನ ಕಾರ್ಯಕರ್ತನಾಗಿ ಹಿರಿಯೂರಿನಲ್ಲಿ ಆಳ್ವಿಕೆ ನೆಡೆಸುತ್ತಿದ್ದ ವಿಚಾರವನ್ನ ಹಿರಿಯೂರಿನ ಹಳೆಯೂರಿನಲ್ಲಿ ದೊರೆತಿರುವ ಶಾಸನ ತಿಳಿಸುತ್ತದೆ."[೫] ಕ್ರಿ.ಶ.೧೫೬೩ರಲ್ಲಿ ತಿಮ್ಮಣ್ಣನಾಯಕನಿಗೆ ವಿಜಯನಗರದ ಸದಾಶಿವರಾಯನ ಆಳ್ವಿಕೆಯಲ್ಲಿ ಅಳಿಯ ರಾಮರಾಯನ ಸಹೋದರ ತಿರುಮಲರಾಜದೇವನು ಮಹಾಅರಸನು ಹೊಳಲ್ಕೆರೆ ಸೀಮೆಯಯನ್ನು ಅಮರಮಾಗಣಿಯಾಗಿ ನೀಡಿದನು. ಮುಂದೆ ಈ ಪ್ರದೇಶವನ್ನು "ಮದಕರಿನಾಯಕ ತನ್ನ ಮೈದುನ ಗುಲ್ಲಿಯಪ್ಪನಾಯಕನಿಗೆ ನೀಡಿದ್ದನ್ನು ಹೊಳಲ್ಕೆರೆ ಶಾಸನ"[೬] ಸ್ಪಷ್ಟಪಡಿಸುತ್ತದೆ.

ಹೊಳಲ್ಕೆರೆಯ ಅಮರನಾಯಕತನ ತಿಮ್ಮಣ್ಣನಾಯಕನಿಗೆ ಪ್ರಾಪ್ತವಾದ ಮೇಲೆ ಆತನು ಹೊಳಲ್ಕೆರೆಯಲ್ಲಿ ಗೋಪಾಲ ದೇವರ ಗುಡಿಯನ್ನ ಕಟ್ಟಿಸುವ ಕ್ರಿ.ಶ.೧೫೭೧ ರಲ್ಲಿ ರಂಗಪಟ್ಟಣವನ್ನ ನಿರ್ಮಿಸಿ ನಂತರ ಅಲ್ಲಿ ವಾಸ ಮಾಡುತ್ತಿದ್ದ ತರಿಕೇರೆಯ ಪಾಳೆಗಾರನಾದ ಹನುಮ್ಮಪ್ಪನಾಯಕನು

ಅವನೊಂದಿಗೆ ಯುದ್ಧಮಾಡಿ ಗೆಲುವನ್ನು ಸಾಧಿಸಿ ನಂತರ ಸಂಸಾರ ಸಮೇತನಾಗಿ ಚಿತ್ರದುರ್ಗಕ್ಕೆ ಬಂದು ನೆಲಸಿದನು. ನಂತರ ಮೇಲುದುರ್ಗದಲ್ಲಿ ಅರಮನೆಯನ್ನು ಅವರ ಸುತ್ತಲು ಕೋಟೆಯನ್ನು ಕಟ್ಟಿಸಿದನು. ನಂತರದಲ್ಲಿ ವಿಜಯನಗರದ ಅರಸರು ತಿಮ್ಮಣ್ಣನಾಯಕನಿಗೆ ಚಿತ್ರದುರ್ಗ ಅರಸುತನವನ್ನು ಕೊಟ್ಟರು. ತದನಂತರ ಚಿತ್ರದುರ್ಗವನ್ನು ರಾಜಧಾನಿಯನ್ನಾಗಿ ಮಾಡಿ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡು ಆಳ್ವಿಕೆ ನಡೆಸಿದೆ.

ಕ್ರಿ.ಶ.೧೪೮೩ರಲ್ಲಿ ತಿಮ್ಮಣ್ಣ ನಾಯಕನು ಅಭಿವೃದ್ದಿಯನ್ನು ಕಂಡು ಅಗದವರ ಚಾಡಿ ಮಾತನ್ನ ಕೇಳಿ ವಿಜಯನಗರದ ದೊರೆಯು ಸಾಳವ ನಾರಸಿಂಹನನ್ನ ತಿಮ್ಮಣ್ಣ ನಾಯಕನನ್ನು ಸೆರೆ ಹಿಡಿದುತರಲು ಚಿತ್ರದುರ್ಗಕ್ಕೆ ಕಳುಹಿಸುವನು ವಿಜಯನಗರದ ಸೈನ್ಯ ಕಾನಾಪುರದ ಬಳಿ ಬಂದು ಬೀಡು ಬಿಟ್ಟಾಗ, ಒಂದು ರಾತ್ರಿ ತಿಮ್ಮಣ್ಣನಾಯಕನು ಅವರ ಪಾಳೆಯದೊಳಕ್ಕೆ ನುಸುಳಿ ಬಂದು ನರಸಿಂಗರಯನ ಖಾಸಾಕುದುರೆಯನ್ನು ಅಪಹರಿಸಿ ಹೋದನೆಂದೂ ಅವನು ಈ ಸಾಹಸವನ್ನು ಮಾಡುವಾಗ ತನ್ನ ಮುಂಗೈ ಮಣಿಕಟ್ಟನ್ನು ಕತ್ತರಿಸಿಕೊಳ್ಳ ಬೇಕಾಯಿತೆಂದು ಹೇಳುವ ರೋಚಕ ವೃತ್ತಾಂತವಿದೆ ನಂತರದಲ್ಲಿ ನರಸಿಂಗರಾಯ ಮತ್ತು ತಿಮ್ಮಣ್ಣನಾಯಕರಿಗೆ ಯುದ್ದವಾದರೂ. ಚಿತ್ರದುರ್ಗ ನರಸಿಂಗರಾಯನ ವಶವಾಗಲಿಲ್ಲ. ನರಸಿಂಗರಾಯನ ಮುತ್ತಿಗೆ ಇನ್ನು ಇರುವಾಗಲೇ ಕ್ರಿ.ಶ.೧೪೮೭ ರಲ್ಲಿ ವಿಜಯನಗರದ ದೊರೆಗಳ ಕಲ್ಬುರ್ಗಿಯನ್ನು ವಶಪಡಿಸಿಕೊಳ್ಳಬೇಕೆಂದು ಸಾಳುವ ನರಸಿಂಹ ರಾಯನಿಗೆ ಅಪ್ಪಣೆ ಮಾಡಿದ್ದರಿಂದ ಅವನು ಚಿತ್ರದುರ್ಗವನ್ನು ಬಿಟ್ಟು ಸೇನಾ ಸಮೇತನಾಗಿ ಕಲ್ಬುರ್ಗಿಗೆ ಹೋಗಿ ಯುದ್ದವನ್ನು ಆರಂಭಿಸಿದನು. ಆದರೆ "ಆರು ತಿಂಗಳಾದರೂ ಯಶಸ್ಸು ಸಿಗದಿದ್ದಾಗ ವಿಜಯನಗರದ ಆನೆಗೊಂದಿಯ ರಾಯರು ತಿಮ್ಮಣ್ಣನಾಯಕರಿಗೆ ಕಲ್ಬುರ್ಗಿಯನ್ನು ವಶಪಡಿಸಿ ಕೊಡಬೇಕೆಂದು ಕೇಳಿಕೊಂಡಾಗ, ತನ್ನ ಸಾಹಸಕ್ಕೆ ಇದೊಂದು ಸವಾಲೆಂದು ತಿಳಿದು ಸಹಾಯ ಮಾಡಲು ಒಪ್ಪಿಕೊಂಡನು."[೭]

ಕ್ರಿ.ಶ ೧೪೮೩ ರಲ್ಲಿ ತಿಮ್ಮಣ್ಣನಾಯಕನು ತನ್ನ ಸಹೋದರನಾದ ಅಣ್ಣಗಾರ ಓಬ್ಬಳಣ್ಣ ಮತ್ತು ಎರಡು ಸಾವಿರ ಖಾಸಾ ಸೇನೆಯನ್ನು ತೆಗೆದುಕೊಂಡು ಹೋಗಿದ ದಿನದಲ್ಲೇ ಕಲ್ಬುರ್ಗಿಯ ಕೋಟೆಯನ್ನು ವಶಪಡಿಸಿಕೊಂಡನು. ತಿಮ್ಮಣನಾಯಕನ ಅಸಾಮನ್ಯ ಪರಾಕ್ರಮವನ್ನ ಹೊಗಳಿ "ವಿಜಯನಗರದ ದೊರೆಯು ಹಲವಾರು ಉಡುಗೊರಗಳನ್ನು ಕೊಟ್ಟು ಈತನಿಗೆ 'ಹಗಲು ಕಗ್ಗೆಲೆ ಮಾನ್ಯ' ಎಂಬ ಬಿರುದನ್ನು ನೀಡಿ ಗೌರವಿಸಿ ಚಿತ್ರದುರ್ಗ ಕಳಹಿಸಿಕೊಟ್ಟನು."[೮]

ಹೀಗೆ ತಿಮ್ಮಣ್ಣನಾಯಕನು ಅತಿ ಪರಾಕ್ರಮದಿಂದ ಚಿತ್ರದುರ್ಗವನ್ನು ಆಳುತ್ತಿರಲು ಮತ್ತೊಮ್ಮೆ ಈತನ ಏಳಿಗೆಯನ್ನು ಸಹಿಸಲಾರದೆ ಕೆಲವು ದುರ್ಜನನರ ಅಸೂಯೆಯ ಚಾಡಿ ಮಾತುಗಳನ್ನ ಕೇಳಿ ವಿಜಯನಗರದ ದೊರೆ ತನಗೆ ಸಹಾಯ ಮಾಡಿದ ತಿಮ್ಮಣ್ಣನಾಯಕನನ್ನು ಕರೆಯಿಸಿ ಸೆರೆಯಲ್ಲಿಟ್ಟನು.

ಈತನೊಡನೆ ಇವನ ಸಹೋದರ ಅಣ್ಣಗಾರ ಓಬಳನಾಯಕ ಹಾಗೂ ದಾದನಾಯಕರಿಗೆ ಚಿತ್ರದುರ್ಗ ಏಳಿಗೆಯಾಗಬೇಕೆನ್ನುವ ನನ್ನ ಕನಸಿನ ಸಾಮ್ರಾಜ್ಯದ ಆಸೆಯನ್ನು ತಿಳಿಸಿ ಸೆರೆಮನೆಯಿಂದ ತಪ್ಪಿಸಿಕೊಂಡು ದುರ್ಗಕ್ಕೆ ಹೋಗುವಂತೆ ಪ್ರಚೋದಿಸಿದನು. ನಂತರ ಅವರು ಅಲ್ಲಿಂದ ತಲೆಮರೆಸಿಕೊಂಡು ಚಿತ್ರದುರ್ಗವನ್ನು ಸೇರಿದ್ದರು ರಾಜಾಜ್ಞೆಯನ್ನು ಮೀರಾಬಾರದೆಂದು ಪರಾಕ್ರಮಿಯಾದ ತಿಮ್ಮಣ್ಣ ನಾಯಕನು ಸೆರೆಮನೆಯಲ್ಲಿಯೇ ಮರಣ ಹೊಂದಿದನು. ತಿಮ್ಮಣ್ಣನಾಯಕನು ಚಿತ್ರದುರ್ಗವನ್ನು ಆಳುತ್ತಿರುವಾಗ ಇಲ್ಲಿ ಕೋಟೆ-ಕೊತ್ತಲಗಳನ್ನು ಬಲಪಡಿಸಿದನು. ಇದರಿಂದ ಇವನ ನಂತರ ಬಂದ ಅರಸರಿಗೆ ಇಲ್ಲಿ ನೆಲೆಸಿ ಆಳ್ವಿಕೆ ನಡೆಸಲು ಅನುಕೂಲವಾಯಿತು. ಹೀಗೆ ತಿಮ್ಮಣ್ಣನಾಯಕನು ಚಿತ್ರದುರ್ಗ ಸಂಸ್ಥಾನಕ್ಕೆ ಭದ್ರವಾದ ಬುನಾದಿಯನ್ನು ಹಾಕಿಕೊಟ್ಟಿದ್ದರಿಂದ ಇವನನ್ನು ಈ ಚಿತ್ರದುರ್ಗದ ನಾಯಕರ ಮೂಲ ಪುರುಷ ಎಂದು ಕರೆಯವುದು ಔಚಿತ್ಯವೆನಿಸುತ್ತದೆ.

ಓಬಣ್ಣ (೧ನೇ ಮದಕರಿ) ಕ್ರಿ.ಶ. ೧೫೮೮–೧೬೦೨)

ಈತನನ್ನು ಠಾಣ್ಯದ ಓಬಳನಾಯಕನೆಂತಲೂ, ಅಣ್ಣಗಾರ ಓಬಣ್ಣನೆಂತಲೂ, ಗಡ್ಡದ ಮದಕರಿನಾಯಕ ಎಂಬ ಹೆಸರು ಈತನಿಗೆ ಆರೋಪಿಸಲ್ಪಟ್ಟುದು. ಈತನಿಗೆ "ಪ್ರೇಮದಿಂದ 'ಮದಕರಿ' ಯೆಂದು ಹೆಸರಿಟ್ಟರೆಂಬ ಐತಿಹ್ಯವಿರುವುದರಿಂದ ಈತ ಒಂದನೇ ಮದಕರಿನಾಯಕನೆಂದೂ ಗುರುತಿಸಲ್ಪಡುತ್ತಾರೆ."[೯] ತಿಮ್ಮಣ್ಣನಾಯಕ ನಂತರ ಓಬಣ್ಣನಾಯಕ ಅರಸನಾಗುತ್ತಾನೆ. ಇತಿಹಾಸಕಾರರು ಇವನನ್ನು ೧ನೇ ಮದಕರಿನಾಯಕ ಎಂತಲೂ ಕರೆಯುತ್ತಾರೆ. ಇವನ ಕಾಲದಲ್ಲಿ ಚಿತ್ರದುರ್ಗ ಸಂಸ್ಥಾನ ಸ್ವತಂತ್ರವಾಯಿತೆನ್ನಬಹುದು. ವಿಜಯನಗರದ ಸಾರ್ವಭೌಮರ ಆಳ್ವಿಕೆಯಪತನದ ನಂತರ ಅವರ ಅಧೀನ ಅರಸರು ತಮ್ಮ-ತಮ್ಮ ಪ್ರಾಂತ್ಯಗಳಿಗೆ ಸ್ವತಂತ್ರರಾದ ಅರಸರಾದರು ಈ ಕಾಲದಲ್ಲಿಯೇ ಓಬಣ್ಣನಾಯಕನು ಚಿತ್ರದುರ್ಗ ಸಂಸ್ಥಾನದ ಸಾರ್ವಭೌಮನಾದನು. ಓಬಣ್ಣನಾಯಕನು ಕನಕಗಿರಿ ರಂಗಪ್ಪನಾಯಕನ ಮಗಳನ್ನು ಮದುವೆಯಾಗಿದ್ದನು. ಈತನು ತಂದೆಯಂತೆ ಅನೇಕ ಜನಹಿತ ಕಾರ್ಯಗಳನ್ನು ಶಾಸನಗಳಿಂದ ತಿಳಿಯಬಹುದು. "ಚಿಕ್ಕಣ್ಣನೆಂಬುವವನು ಓಬಣ್ಣಹಳ್ಳಿಯನ್ನು ನಿರ್ಮಿಸಿ ಈ ಹಳ್ಳಿಯಲ್ಲಿ ಹನುಮಂತ ದೇವರನ್ನು ಪ್ರತಿಷ್ಠಾಪನೆ ಮಾಡಿಸಿದ ವಿಚಾರವನ್ನು ಓಬಣ್ಣನ ಹಳ್ಳಿಯ ಶಿಲಾಶಾಸನ"[೧೦] ತಿಳಿಸುತ್ತದೆ.

"ಓಬಣ್ಣ (೧ನೇ ಮದಕರಿ) ನಾಯಕನು ಕ್ರಿ.ಶ. ೧೫೬೧ ರಲ್ಲಿ ಜಂಪಳನಾಯ್ಕನ ಕೋಟೆಯಲ್ಲಿ ಹನುಮಂತ ದೇವರ ಗುಡಿಯನ್ನು ಕಟ್ಟಿಸಿದ ವಿವರ ಶಾಸನವೊಂದರಿಂದ ತಿಳಿದು ಬರುತ್ತದೆ."[೧೧] ಓಬಣ್ಣನಾಯಕರು ತನ್ನ ತಂಗಿಯಾದ ಹೊನ್ನವ್ವೆಯನ್ನ ಉಚ್ಚಂಗಿದುರ್ಗದ ಬಳುವಳಿಯೊಂದಿಗೆ ಹರಪ್ಪನಹಳ್ಳಿಯ ದಾದಾನಾಯಕನಿಗೆ ಕೊಟ್ಟು ವಿವಾಹ ಮಾಡುತ್ತಾನೆ. ಮುಂದೆ ಈ ದಾದಾನಾಯಕನು ಹರಪ್ಪನಹಳ್ಳಿ ನಾಯಕರ ಮೂಲ ಪುರುಷನೆನಿಸಿ ಇತಿಹಾಸದಲ್ಲಿ ಖ್ಯಾತನಾಗಿದ್ದಾನೆ. ಈ ವೈವಾಹಿಕ

ಸಂಬಂಧದಿಂದ ಚಿತ್ರದುರ್ಗ ನಾಯಕರ ವರ್ಚಸ್ಸು ಬೆಳೆಯುತ್ತಾ ಬಂತೆಂದು ಊಹಿಸಬಹುದು. ಕ್ರಿ.ಶ ೧೬೦೨ ರಲ್ಲಿ ಓಬಣ್ಣನಾಯಕನು ಮರಣ ಹೊಂದಿದನು. ಇವನ ನಂತರ ಈತನ ಮಗನಾದ ೧ನೇ ಕಸ್ತೂರಿ ರಂಗಪ್ಪನಾಯಕರು ಚಿತ್ರದುರ್ಗದ ದೊರೆಯಾದನು.

೧ನೇ ಕಸ್ತೂರಿ ರಂಗಪ್ಪನಾಯಕ(ಕ್ರಿ.ಶ.೧೬೦೩-೧೬೫೨)

೧ನೇ ಕಸ್ತೂರಿ ರಂಗಪ್ಪನಾಯಕನ ಕಾಲ ಸುತ್ತಮುತ್ತಲ ನಾಯಕರೊಂದಿಗೆ ಘರ್ಷಣೆಯಿಂದ ತುಂಬಿಹೋಗಿತ್ತು. ತರೀಕೆರೆಯ ಹನುಮಪ್ಪನಾಯಕನು ಚಿತ್ರದುರ್ಗ ಪ್ರಾಂತ್ಯದ ಮೇಲೆ ದಾಳಿ ಮಾಡಿ ಚಿತ್ರದುರ್ಗ ರಾಜ್ಯದ ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡು ಕಡೆಗೆ ಚಿತ್ರದುರ್ಗವನ್ನು ಸಹ ಮುತ್ತಬೇಕೆಂಬ ಸನ್ನಾಹದಲ್ಲಿರಲು ಕಸ್ತೂರಿ ರಂಗಪ್ಪನಾಯಕ ಕಂದವಾಡಿ ಗುಡ್ಡದ ಬಳಿ ತರೀಕೆರೆಯ ಹನುಮಪ್ಪನಾಯಕನನ್ನು ಚತುರತೆಯಿಂದ ಸೋಲಿಸಿ ಸೆರೆಹಿಡಿದು ನಂತರದಲ್ಲಿ ಬಿಟ್ಟುಬಿಟ್ಟನು. ಮುಂದೆ ಹರಪ್ಪನಹಳ್ಳಿಯರೊಂದಿಗೆ ಕ್ರಿ.ಶ.೧೬೩೬ರಲ್ಲಿ ನೆಡೆದ ಯುದ್ಧದಲ್ಲಿ ಕಸ್ತೂರಿ ರಂಗಪ್ಪನಾಯಕನೇ ವಿಜಯಯಾದನು. ಕ್ರಿ.ಶ.೧೬೩೮ರ ಸುಮಾರಿನಲ್ಲಿ ಸೀರೈದ ರಂಗಪ್ಪನಾಯಕ ಹಿರಿಯೂರಿನ ಮುತ್ತಿಗೆ ಹಾಕಿದಾಗ ಹಿರಿಯೂರಿನ ಕೆಂಚಣ್ಣನಾಯಕನು ಕಸ್ತೂರಿ ರಂಗಪ್ಪನಾಯಕನ ಸಹಾಯವನ್ನು ಬೇಡಲಾಗಿ ಅವನು ಸೀರೈದ ರಂಗಪ್ಪ ನಾಯಕನೊಂದಿಗೆ ಹೋರಾಡಿ ಗೆದ್ದನು. ಅಲ್ಲಿಂದ ಮುಂದೆ ಕಸ್ತೂರಿ ರಂಗಪ್ಪನಾಯಕನು ತನ್ನನ್ನು ಚಿತ್ರದುರ್ಗದ ಅರಸನೆಂಬ ರೀತಿಯಲ್ಲಿ ಸಂಬೋಧಿಸಿಕೊಂಡು ಪತ್ರಗಳನ್ನು ಬರೆಸಿರುವುದನ್ನು ಕಾಣಬಹುದು. ತನ್ನ ಆಳ್ವಿಕೆಯಲ್ಲಿ ಬಸವಾಪಟ್ಟಣದ ಪಾಳೆಯಗಾರರೊಂದಿಗೆ ಕಾಳಗ ನೆಡೆಸಿ ಮಾಯಕೊಂಡ, ಸಂತೇಬೆನ್ನೂರು, ಹೊಳಲ್ಕೆರೆ, ಅಣಜಿ, ಜಗಲೂರು, ಮತ್ತಿತರ ಪ್ರಾಂತ್ಯಗಳನ್ನು ಚಿತ್ರದುರ್ಗ ರಾಜ್ಯಕ್ಕೆ ಸೇರಿಸಿಕೊಂಡನು. ಇವನ ಕಾಲಕ್ಕೆ "ಚಿತ್ರದುರ್ಗ ರಾಜ್ಯ ವಾರ್ಷಿಕ ಉತ್ಪನ್ನ ೬೫ ಸಾವಿರ ವರಹಗಳನ್ನು ಮಟ್ಟಿತ್ತು. ಚಿತ್ರದುರ್ಗ ಸಂಸ್ಥಾನವನ್ನು ವಿಶಾಲವಾಗಿ ರೂಪಿಸಿದ ಕಸ್ತೂರಿ ರಂಗಪ್ಪನಾಯಕನು ಕ್ರಿ.ಶ.೧೬೫೨ ರಲ್ಲಿ ಮರಣ ಹೊಂದುತ್ತಾನೆ."[೨]

ಇಮ್ಮಡಿ ಮದಕರಿನಾಯಕ(ಕ್ರಿ.ಶ. ೧೬೫೨-೧೬೭೫)

೧ನೇ ಕಸ್ತೂರಿ ರಂಗಪ್ಪನಾಯಕನ ಮರಣಾನಂತರ ಅವನ ಮಕ್ಕಳಲ್ಲಿ ಹಿರಿಯನಾಗಿದ್ದ ಲಿಂಗಣ್ಣನಾಯಕ ಬಾಲಕನಾಗಿದ್ದರಿಂದ, ಕಸ್ತೂರಿ ರಂಗಪ್ಪನಾಯಕನ ತಮ್ಮನಾದ ಇಮ್ಮಡಿ ಮದಕರಿನಾಯಕನು ಚಿತ್ರದುರ್ಗದ ಅರಸನಾದನು ಇವನಿಗೆ ಕ್ರಿ.ಶ.೧೬೫೩ ರಲ್ಲಿ ಸಂಪಿಗೆ ಸಿದ್ದೇಶ್ವರನ ಗುಡಿಯಲ್ಲಿ ಪಟ್ಟಕಟ್ಟಲಾಯಿತು. ಇವನ ಪಟ್ಟಕ್ಕೆ ಬರುವ ಹೊತ್ತಿಗೆ ದುರ್ಗದ ಏಳಿಗೆಯನ್ನು ಸಹಿಸದವರ ಸಂಖ್ಯೆಯೂ ಬೆಳೆಯತೊಡಗಿತ್ತು. ಕ್ರಿ.ಶ.೧೬೫೪ರಲ್ಲಿ ತರೀಕೆರೆಯ ಸರ್ಜಾ ಹನುಮಪ್ಪನಾಯಕನು ದೇವಪುರದ ಕೋಟೆಗೆ ಮುತ್ತಿಗೆ ಹಾಕಿದಾಗ ಇಮ್ಮಡಿ ಮದಕರಿ ನಾಯಕನು ತನ್ನ ಸೈನ್ಯದೊಡನೆ ಶತ್ರುಸೈನ್ಯದ ಮೇಲೆ ದಾಳಿ ಮಾಡಿ ಅವರನ್ನು ಸೋಲಿಸಿ ಗುಡೇಕೋಟೆ, ನನ್ನಪಾಳ, ಐಮಂಗಲ,

ಹಿರಿಯೂರಿನ ಕೋಟೆಯನ್ನು ವಶಪಡಿಸಿಕೊಂಡನು. ಇವನ ಕುಲಕ್ಕೆ ಚಿತ್ರದುರ್ಗದ ಸಂಸ್ಥಾನವು ಒಂದು ಲಕ್ಷ ವರಹದ ಆದಾಯ ಸೀಮಿತವಾಗಿತ್ತು. ಈ ಸೀಮೆಯನ್ನು ಇಮ್ಮಡಿ ಮದಕರಿನಾಯಕನು ನಾಲ್ಕು ಭಾಗಗಳಾಗಿ ವಿಭಾಗಿಸಿ ಅವುಗಳ ಉಸ್ತುವಾರಿಗೆ ನಾಲ್ಕುಜನ ಅಧಿಕಾರಿಗಳನ್ನು ನೇಮಕ ಮಾಡಿದನು. ಇವನ ಕಾಲದಲ್ಲಿ ಚಿತ್ರದುರ್ಗ ರಾಜ್ಯ ಮತ್ತಷ್ಟು ವಿಸ್ತಾರತೆಯನ್ನು ಪಡೆಯಿತು. ಇಮ್ಮಡಿ ಮದಕರಿನಾಯಕನು ಕ್ರಿ.ಶ.೧೬೭೪ರಲ್ಲಿ ನಿಧನನಾದನು. ಇವನಿಗೆ ಮಕ್ಕಳಿಲ್ಲವಾದ್ದರಿಂದ ಇವನ ಮರಣನಂತರ ಇವನ ಸಾಕು ಮಗನಾದ ಓಬಣ್ಣನಾಯಕನಿಗೆ ಪಟ್ಟವಾಯಿತು.

ಚಿತ್ರದುರ್ಗವು ಓಬಣ್ಣನಾಯಕನ ಆಳ್ವಿಕೆಗೆ ಒಳಪಟ್ಟನಂತರ ರಾಜ್ಯದಲ್ಲಿ ಆಂತರಿಕ ಅಶಾಂತಿ ಪ್ರಾರಂಭವಾಗಿ ದಳವಾಯಿಗಳು ರಾಜನ ವಿರುದ್ಧವೇ ದಂಗೆ ಎದ್ದು ರಾಜ್ಯದಲ್ಲಿ ಅರಾಜಕತೆಯನ್ನು ಉಂಟುಮಾಡಿ ನಂತರದಲ್ಲಿ ದಳವಾಯಿಗಳು ಮತ್ತಿತರೂ ಸೇರಿಕೊಂಡು ಅರಸನಾಗಿದ್ದ ಓಬಣ್ಣನಾಯಕನನ್ನು ಕೊಂದು ಹಾಕಿದರು. ತದನಂತರ ದಳವಾಯಿಗಳೇ ಇಮ್ಮಡಿ ಮದಕರಿನಾಯಕನ ಅಣ್ಣನಾದ ಸರ್ಜಾರಾಯನ ಎರಡನೇ ಮಗನಾದ ಚಿಕ್ಕಣ್ಣನಾಯಕನನ್ನು ಕ್ರಿ.ಶ.೧೬೭೬ರಲ್ಲಿ ನೇಮಿಸಿದರು.

ಇಮ್ಮಡಿ ಓಬಣ್ಣನಾಯಕ(ಕ್ರಿ.ಶ.೧೬೭೬)

ಓಬಣ್ಣನಾಯಕನು ಅಲ್ಪಾವಧಿಯ ಆಳ್ವಿಕೆ ನಡೆಸುವಷ್ಟರಲ್ಲಿಯೇ ದಳವಾಯಿಗಳು, ಗುರಿಕಾರರು ಮೊದಲಾದವರು ಪಟ್ಟಿಗಾಣಿಕೆ (ಪಟ್ಟಿದ ಸಂಬಳ) ಕೊಡಲಿಲ್ಲವೆಂಬ ಕಾರಣವನ್ನು ಮುಂದೊಡ್ಡಿ ಕೋಟೆಯಲ್ಲಿ ಚಿಕ್ಕಬಾಗಿಲಿನ ಬಳಿ ಈತನ ತಲೆ ಹೊಡೆದರು ಇವನೊಡನೆ ಕಾಟನಾಯಕನ ಮಗ ಲಿಂಗಣ್ಣ ಎಂಬುವನು ಸಹಾ ತಲೆ ಹೊಡಸಿಕೊಂಡ. ದುರ್ಗದಲ್ಲಿ ಉಂಟಾದ ನಾಯಕತ್ವದ ಸಂದರ್ಭವನ್ನು ನಿಭಾಯಿಸಲು ದುರ್ಗದ ದಳವಾಯಿಗಳಾದ ದಾಸಣ್ಣ ಮತ್ತು ರಂಗಪ್ಪ ಅವರುಗಳು ಬಿಳಿಚೋಡಿಗೆ ಹೋಗಿ, ದಳವಾಯಿಗಳ ಅವಾಂತರದಲ್ಲಿ ಜೀವ ಭಯದಿಂದ ಕಣಕುಪ್ಪೆಗೆ ಓಡಿ ಹೋಗಿದ್ದ ಕಸ್ತೂರಿ ರಂಗಪ್ಪನಾಯಕ ಹಿರಿಯ ಮಗ ಸರ್ಜಾರಾಯನ ಹಿರಿಯ ಪುತ್ರ ಚಿಕ್ಕಣ್ಣನಾಯಕನನ್ನು ಅಲ್ಲಿಗೆ ಕರೆಯಿಸಿಕೊಂಡು ನಂಬಿಕೆಕೊಟ್ಟು ಆತನ ಮನವೊಲಿಸಿ, "ದುರ್ಗಕ್ಕೆ ಕರೆತಂದು ಅವನಿಗೆ ಕ್ರಿ.ಶ.೧೬೭೬ರಲ್ಲಿ ಪಟ್ಟಗಟ್ಟಿದರು."[೧೩]

ಕಸ್ತೂರಿ ಚಿಕ್ಕಣ್ಣನಾಯಕ(ಕ್ರಿ.ಶ.೧೬೭೬-೧೬೮೬)

ರಾಜಕೀಯ ದೃಷ್ಟಿಯಿಂದ ಚಿಕ್ಕಣ್ಣನಾಯಕನು ಹಿಂದಿನ ಅರಸರಿಗಿಂತಲೂ ಹೆಚ್ಚು ಕಾಳಗಗಳಲ್ಲಿ ತೊಡಗಬೇಕಾಯಿತು. ಈತನು ಅಧಿಕಾರಕ್ಕೆ ಬಂದನಂತರ ರಾಜ್ಯದಲ್ಲಿ ಉಂಟಾಗಿದ್ದ ಆಂತರಿಕ ಅಶಾಂತಿಯನ್ನು ಪರಿಹರಿಸುವುದರ ಜೊತೆಗೆ ಸುತ್ತಮುತ್ತಲಿನವರ ರಾಜಕೀಯ ವೈಷಮ್ಯ ಅಸೂಯೆಗಳ ಕಾರಣದಿಂದಾಗಿ ಹೆಚ್ಚಿನ ಸಂಖ್ಯೆಯ ಕಾಳಗಗಳನ್ನ ಎದುರಿಸಬೇಕಾಯಿತು. ಕ್ರಿ.ಶ.೧೬೭೬ರಲ್ಲಿ

ನಿಡುಗಲ್ಲಿನವರು ಸಾಣೇಕೆರೆಯನ್ನು ಮತ್ತಿದಾಗ ಅವರೊಂದಿಗೆ ಒಪ್ಪಂದ ಮಾಡಿಕೊಂಡು ಅವರಿಂದ ಸಾಣೇಕೆರೆಯನ್ನು ಬಿಡಿಸಿಕೊಂಡನು ತರುವಾಯಿ ಹರಪ್ಪನಹಳ್ಳಿಯವರು ಅಣಜಿ ಕೋಟೆಯನ್ನು ಆಕ್ರಮಿಸಿದರು. ಆಗ ಚಿಕ್ಕಣನಾಯಕ ಹರಪ್ಪನ ಹಳ್ಳಿಯರೊಂದಿಗೆ ಹೋರಾಡಿ ಅಣಜಿ ಕೋಟೆಯನ್ನು ಮರಳಿ ಪಡೆದನು. ನಂತರದಲ್ಲಿ ಬಿಜಾಪುರದ ರಣಾದುಲ್ಲಾಖಾನನ ಸೈನ್ಯವು ಚಿತ್ರದುರ್ಗದ ಮೇಲೆ ಆಕ್ರಮಣ ಮಾಡಲು ಪ್ರಯತ್ನಿಸಿದಾಗ ಅವರನ್ನ ಸೋಲಿಸಿ ಹಿಮ್ಮೆಟ್ಟಿಸಿದನು. ಹೀಗೆ ತನ್ನ ಬುದ್ಧಿವಂತಿಕೆ, ಶಾಂತಿ, ಪರಾಕ್ರಮಗಳಿಂದ ವೈರಿಗಳನ್ನು ನಿಗ್ರಹಿಸಿದನು.

ಚಿಕ್ಕಣ್ಣನಾಯಕನ ಕಾಲ ಚಿತ್ರದುರ್ಗದ ಇತಿಹಾಸದಲ್ಲೇ ಧಾರ್ಮಿಕ ದೃಷ್ಟಿಯಿಂದ ಮುಖ್ಯವಾದುದು. ಇವನು ವೀರಶೈವನಾಗಿ ಮತಾಂತರ ಗೊಂಡಿನಲ್ಲದೆ ಉಗ್ರಾಚನ್ನವೀರ ದೇವರೆಂಬ ಜಂಗಮರನ್ನು ಗುರುವಾಗಿ ಸ್ವೀಕರಿಸಿದನು. ಚಿಕ್ಕಣ್ಣನಾಯಕರೊಂದಿಗೆ ನಾಯಕನಹಟ್ಟಿಯ ಮಲ್ಲವ್ವ ನಾಗತಿ ಮತ್ತಿತರ ನಾಗತಿಯರೂ ರಾಜಪರಿವಾರದವರೂ ವೀರಶೈವರಾದರು. ಚಿಕ್ಕಣ್ಣನಾಯಕರು ಲಾಲಕೋಟೆ ಬಾಗಿಲ ಬಳಿಯಲ್ಲಿ ವೀರಶೈವ ಮಠವನ್ನು ಕಟ್ಟಿಸಿದನು. ಆದರೆ ಕೆಲಕಾಲದಲ್ಲಿಯೇ ಈತನ ವೀರಶೈವ ಧರ್ಮವನ್ನು ತೇಜಿಸಿದನು. ಈ ಕಾಲದಲ್ಲಿಯೇ ಚಿತ್ರದುರ್ಗ ಪಾಳೆಯಗಾರರು ಮೂಲ ಗುರುಗಳೆನಿಸಿದ ಕೊಡಲೀ ಶೃಂಗೇರಿ ಜಗದ್ಗುರು ಮಠದೊಂದಿಗೆ ಸಂಪರ್ಕ ಏರ್ಪಟ್ಟಿತ್ತು. "ಚಿಕ್ಕಣ್ಣನಾಯಕನು ಚಿತ್ರದುರ್ಗಕ್ಕೆ ಸೇರಿದ ಬಾಗೂರು ಸೀಮೆಯೊಳಗಿನ ಮಾರಬಗಟ್ಟೆ ಗ್ರಾಮವನ್ನು ಶೃಂಗೇರಿ ಮಠದ ಶ್ರೀ ಶಂಕರ ಭಾರತೀ ಸ್ವಾಮಿಗಳಿಗೆ ವಹಿಸಿಕೊಟ್ಟು ತನ್ನ ಸ್ವಾಮಿನಿಷ್ಠೆಯನ್ನು ವ್ಯಕ್ತಪಡಿಸಿದ ವಿಚಾರ ಕೂಡ್ಲೀ ಶೃಂಗೇರಿ ಮಠದಲ್ಲಿನ ಶಾಸನದಿಂದ ತಿಳಿಯುತ್ತದೆ."೧೪ ಮಕ್ಕಳಿಲ್ಲದ ಚಿಕ್ಕಣ್ಣನಾಯಕನು ಕ್ರಿ.ಶ.೧೬೮೬ರಲ್ಲಿ ಮರಣ ಹೊಂದಿದ್ದನು.

ಚಿಕ್ಕಣ್ಣನಾಯಕನ ನಂತರ ಈತನ ಅಣ್ಣನಾದ ಲಿಂಗಣ್ಣ (ಮುಮ್ಮಡಿ ಮದಕರಿ) ನಾಯಕನು ಚಿತ್ರದುರ್ಗದ ಅರಸನಾದನು. ಇವನು ದುರ್ಬಲನಾದುದ್ದರಿಂದ ದಳವಾಯಿಗಳು ಮತ್ತೆ ಎದ್ದರು ದಳವಾಯಿಗಳಲ್ಲಿ ಬಲಿಷ್ಠನಾದ ಪಂಚಮರ ಮದ್ದಣ್ಣನು–ತನ್ನ ಸಹೋದರರ ಬೆಂಬಲದಿಂದ ಲಿಂಗಣ್ಣನಾಯಕನನ್ನು ಕೊಲ್ಲಿಸಿ ತನ್ನ ಕೈ ಗೊಂಬೆಯಾಗಿದ್ದ ದೊಣ್ಣೆ ರಂಗಪ್ಪನಾಯಕನನ್ನು ರಾಜನನ್ನಾಗಿ ಮಾಡಿದನು. ಆದರೆ ಸಿಂಹಾಸನದ ನಿಜವಾದ ಹಕ್ಕುದಾರನಾಗಿದ್ದವನು ಬಿಚ್ಚುಗತ್ತಿ ಭರಮಣ್ಣನಾಯಕ. ಇವನು ದಳವಾಯಿ ಮದ್ದಣ್ಣನ ಉಪಟಳದಿಂದ ಕೆಲವು ಕಾಲ ಬಿಳಿಚೋಡು ಗ್ರಾಮದಲ್ಲಿ ತಲೆಮರೆಸಿಕೊಂಡಿದ್ದು, ನಂತರದಲ್ಲಿ ಚಿತ್ರದುರ್ಗ ದಳವಾಯಿಗಳಲ್ಲಿ ರಾಜನಿಷ್ಠವಂತನಾಗಿದ್ದ ದಳವಾಯಿ ಭರಮಪ್ಪನ ಸಹಾಯದಿಂದ ಶತೃಗಳನ್ನು ಪರಿಹರಿಸಿ ಕ್ರಿ.ಶ.೧೬೮೯ ರಲ್ಲಿ ಚಿತ್ರದುರ್ಗ ಸಂಸ್ಥಾನದ ಅರಸನಾದನು.

ಮುಮ್ಮಡಿ ಮದಕರಿನಾಯಕ (ಲಿಂಗಣ್ಣನಾಯಕ) (ಕ್ರಿ.ಶ.೧೯೮೬-೧೬೮೮)

ಈ ನಾಯಕನು ಚಿಕ್ಕಣ್ಣನಾಯಕನ ಅಣ್ಣ: ಲಿಂಗಣ್ಣನಾಯಕನೆಂತಲೂ ಕರೆಯಲ್ಪಟ್ಟಿದ್ದಾನೆ. ಈತನು ದುರ್ಗದ ದಳವಾಯಿಗಳ ವಿರೋಧದಿಂದಾಗಿ ದೀರ್ಘಕಾಲ ಆಡಳಿತ ನೆಡೆಸಲಿಲ್ಲ. ಈ ಅರಸನು ಪಟ್ಟಕ್ಕೆ ಬಂದ ಎರಡು ವರ್ಷಗಳ ತರುವಾಯ ದಳವಾಯಿಗಳಲ್ಲಿ ಪ್ರಾಬಲ್ಯಕ್ಕೆ ಬಂದ ಪಂಚಮರ ಮದ್ದಣ್ಣನು ಕ್ರಿ.ಶ.೧೬೮೮ ರಲ್ಲಿ ಅರಸನ ವಿರುದ್ಧ ತಿರುಗಿಬಿದ್ದನಲ್ಲದೆ. ಇತರ ದಳವಾಯಿಗಳು ಗುರಿಕಾರರು ಮೊದಲಾದವರನ್ನು ಈ ನಾಯಕನನ್ನ ಹತ್ತಿಕ್ಕುವ ಕಾರ್ಯದಲ್ಲಿ ಸಹಕರಿಸಿರುವಂತೆ ಒಡಂಬಡಿಸುವ ಲಿಂಗಣ್ಣನಾಯಕನು ದೇವರ ಮನೆಗೆ ಹೋಗಿದ್ದ ಸಂದರ್ಭವನ್ನು ಸಾಧಿಸಿ ಮುದ್ದಣ್ಣನು ಅವನನ್ನು ಹಿಡಿದು ಮೇಲುದುರ್ಗಕ್ಕೆ ಕರೆತಂದು ಮೂಗುಕೊಯ್ಯಿಸಿ ಹುಣಸೇಮರದ ಗಿರಿಯಣ್ಣನೆಂಬುವನ ಮನೆಯಲ್ಲಿ ಬಂಧಿಯಾಗಿಸಿದ. ಈ ನಾಯಕನನ್ನು "ಗಿರಿಯಲ್ಲಾನ ಮನೆಯಲ್ಲಿ ಉರುಲು ಹಾಕಿಸಿ ಕೊಲ್ಲಿಸಲಾಯಿತೆಂತಲೂ ವ್ಯಕ್ತ ಪಡುತ್ತದೆ ಒಟ್ಟಿನಲ್ಲಿ ದಳವಾಯಿ ಮುದ್ದಣನು ದುರ್ಗದ ಸರ್ವಾಧಿಕಾರಿಯೆನಿಸಿದ್ದ."[೧೫]

ಬಿಚ್ಚುಗತಿ ಭರಮಣ್ಣನಾಯಕ (ಕ್ರಿ.ಶ.೧೬೮೯-೧೭೨೧)

ರಾಜಕೀಯವಾಗಿ ಬಿಚ್ಚುಗತ್ತಿ ಭರಮಣ್ಣನಾಯಕನ ಕಾಲ ಮಹತ್ವದ್ದು ಏಕೆಂದರೆ ಮೊಗಲರು ಈ ಅವಧಿಯಲ್ಲಿ ಬಿಜಾಪುರವನ್ನು ತಮ್ಮ ಅಧೀನ ಮಾಡಿಕೊಂಡು ಶಿರಾದವರೆಗೂ ತಮ್ಮ ಪ್ರಭಾವ ಬೀರಿದರು ಚಿತ್ರದುರ್ಗ ಸಂಸ್ಥಾನದ ಬೂದಿಹಾಳು ಮತ್ತು ಬಸವಾಪಟ್ಟಣಗಳ ಅವರ ವಶವಾದವು. ಚಿತ್ರದುರ್ಗವೂ ಸೇರಿದಂತೆ ಹಲವಾರು ಸಂಸ್ಥಾನಗಳ ಮೊಘಲರಿಗೆ ಕಪ್ಪಕಾಣಿಕೆ ಕೊಡಬೇಕಾಯಿತು. ಇತ್ತ ದುರ್ಗವು ಸುತ್ತಮುತ್ತಲಿನ ಪಾಳೆಯಟ್ಟುಗಳೊಡನೆ ಸೆಣಸಬೇಕಾಯಿತು. ಹರಪ್ಪನಹಳ್ಳಿ, ರಾಯದುರ್ಗ ಮತ್ತು ಬಿಜಾಪೂರದ ಸುಲ್ತಾನರೊಡನೆ ನೆಡೆದ ಕಾಳಗಗಳಲ್ಲಿ ಭರಮಣ್ಣನಾಯಕ ಯಶಸ್ವಿಯಾದನು ಚಿತ್ರದುರ್ಗ ರಾಜ್ಯವನ್ನು ತನ್ನ ಪರಾಕ್ರಮ ಕಾರ್ಯದಿಂದ ಬಲಪಡಿಸಿದನು.

ಕ್ರಿ.ಶ.೧೯೯೮ರಲ್ಲಿ ಭರಮಣ್ಣನಾಯಕನು ಗಾಡೇಕೋಟೆಯವರಿಗೆ ಸೇರಿದ ನಾಗಸಮುದ್ರವನ್ನು ಮುತ್ತಿಗೆಹಾಕಿ ತೆಗೆದುಕೊಂಡನಲ್ಲದೆ, ಆ ನಾಯಕರ ಕುಟುಂಬದ ಬಂಗಾರವ್ವನಾಗತಿಯನ್ನು ವಿವಾಹವಾದ ಕ್ರಿ.ಶ.೧೯೯ ರಲ್ಲಿ ಇಂದೂರಾಯನು ರಾಯದುರ್ಗದವರೂ ನಾಯಕನಹಟ್ಟಿ ಕೋಟೆಯನ್ನು ಮುಕ್ತಿದಾಗ ಭರಮಣ್ಣ ಹಾವನೂರು ಗುಡೇಕೋಟೆ, ನಿಡುಗಲ್ಲು, ರತ್ನಗಿರಿ, ಒರಿಮಲೆ ಮತ್ತು ಸಿರಾದವರನ್ನು ಹಾಗೂ ಹಟ್ಟಿ ಮಲ್ಲಪ್ಪನಾಯಕನನ್ನು ಜತೆಯಲ್ಲಿ ಕರೆದೊಯ್ದು ನನ್ನಿವಾಳದ (ಚಳ್ಳಕೆರೆ ತಾಲೂಕು) ಬಳಿ ಇಳಿದು. ಶತ್ರುಗಳನ್ನು ಎದುರಿಸಿ. ಈ ಕಾಳಗವು ಮೂರು ದಿವಸಗಳ ಕಾಲ ಘೋರವಾಗಿ ನಡೆಯಿತೆಂದೂ ದುರ್ಗದವರ ದಂಡಿನಲ್ಲಿ ಅಡಿಗೆ ಮಾಡುವುದಕ್ಕೆ ಸಹಾಯದ

ಅವಕಾಶವಿಲ್ಲದ್ದರಿಂದ ದುರ್ಗದಿಂದ ರೊಟ್ಟಿಗಳನ್ನು ಮಾಡಿಸಿ ಹೇರುಗಳ ಮುಖಾಂತರ ರಾಣಿಯೇ ರಾವುತರಿಗೆಲ್ಲಾ ರೊಟ್ಟಿತೆಂದೂ ಅವರೆಲ್ಲರೂ ಕುದುರೆಗಳ ಮೇಲೆ ಕುಳಿತೇ ರೊಟ್ಟಿಗಳನ್ನು ತಿಂದು ಯುದ್ಧ ಮಾಡಿದರೆಂದೂ ವರ್ಣಿಸಲ್ಪಟ್ಟಿದೆ. ಕಾಳಗದ ಭೀಕರತೆಗೆ ಈ ಸಂದರ್ಭವೇ ಸಾಕ್ಷಿ ಎನ್ನಬಹುದು. ಈ ಯುದ್ಧದಲ್ಲಿ ದುರ್ಗದ ಮತ್ತು ಸಿರಾದ ಫಡದುಲ್ಲಾಖಾನನ ಸೈನ್ಯವು ಶತ್ರುಗಳನ್ನು ಹಟ್ಟಿಯಿಂದ ಹೊಡೆದೋಡಿಸಿತಲ್ಲದೆ, ದುರ್ಗದ ಸೇನೆಯ ಕೊಟ್ಟೂರುವರೆಗೂ ಅವರನ್ನು ಓಡಿಸಿಕೊಂಡು ಹೋಗಿ ಅಲ್ಲಿಯೂ ಕಾಳಗವಾಡಿ ಸೋಲಿಸಿತು. "ಕ್ರಿ.ಶ.೧೭೦೬ ರಲ್ಲಿ ರಾಯದುರ್ಗದವರ ವಶದಲ್ಲಿದ್ದ ಕೋಟೆಯನ್ನು ಕಾಳಗದಲ್ಲಿ ಗೆಲ್ಲಲಾಯಿತು."[೧೬]

ಹೀಗೆ ಭರಮಣ್ಣನಾಯಕನ ಕಾಲದಲ್ಲಿ ಚಿತ್ರದುರ್ಗದ ಸಂಸ್ಥಾನಕ್ಕೆ ಒಂದು ಬಗೆಯ ರಾಜಕೀಯ ಸ್ಥಿರತೆ ಮತ್ತು ಘನತೆ ಬಂದಿತೆಂದರೆ ತಪ್ಪಗಲಾರದು. ಇವನು ದೊರೆಯಾಗುವ ಪೂರ್ವದಲ್ಲಿ ದುರ್ಗದಲ್ಲಿ ಅರಾಜಕತೆ ದೌರ್ಜನ್ಯಗಳು ತಾಂಡವವಾಡುತ್ತಿದ್ದವು. ಅದರೆ ಇವನು ಆಡಳಿತವನ್ನು ಕೈಗೆ ತೆಗೆದಕೊಳ್ಳುತ್ತಲೇ ಅವೆಲ್ಲ ಹೋದವು. ಹರಪ್ಪನಹಳ್ಳಿ ರಾಯದುರ್ಗ, ತರಿಕೇರೆ, ಗುಡೇಕೋಟೆ ಮೊದಲಾದ ಸುತ್ತಮುತ್ತಲ ಕೆಲವು ಸಂಸ್ಥಾನಿಕರು ಏನಾದರೊಂದು ಕಾರಣಕ್ಕೆ ಘರ್ಷಣೆ ಪ್ರಸಂಗಗಳನ್ನು ತರುತ್ತಿದ್ದರೂ. ಅವನ್ನು ಭರಮಣ್ಣ ನಾಯಕ ಯಶಸ್ವಿಯಾಗಿ ಎದುರಿಸಿ ಜಯಶೀಲನಾದನು. ಇದಷ್ಟೇ ಅಲ್ಲದೆ ಮರಾಠರು ಸೀಹ್ಯದ ಮೊಗಲ್ ಸುಭೇದಾರರು, ಇವನ ಪ್ರಾಬಲ್ಯವನ್ನು ಅರಿತು ಸಹಕರಿಸುತ್ತಾ ಬಂದರು ಕೆಲವರು ಮುಸಲ್ಯಾನ್ ಅಧಿಪತಿಗಳೊಂದಿಗೆ ಪೂರ್ಣಯುದ್ಧ ಮಾಡಲು ಸಾಧ್ಯವಾಗದಿದ್ದಾಗ ಅನಿವಾರ್ಯವಾಗಿ ಕಪ್ಪಕಾಣಿಕೆಗಳನ್ನು ನೀಡಿ ಅಥವಾ ಒಪ್ಪಂದಗಳನ್ನು ಮಾಡಿ ಕೊಂಡರೂ ಚಿತ್ರದುರ್ಗಕ್ಕೆ ಧಕ್ಕೆ ಏನೂ ಆಗಲಿಲ್ಲ. ಇವನ ಹಾಗೂ ಇವನ ಮಕ್ಕಳ ಪರಾಕ್ರಮ ಶತ್ರುಗಳ ಭಯಕ್ಕೆ ಕಾರಣವಾಗಿತ್ತು. ಅನೇಕರು ಇವನ ಸಹಾಯವನ್ನು ಬಯಸುವಂತಾದುದು ಇವನ ಶಕ್ತಿ ಸಾಮರ್ಥ್ಯಗಳಿಗೆ ಸಾಕ್ಷಿಯಾಯಿತು. ಬಚ್ಚುಗತ್ತಿ ಭರಮಣ್ಣನಾಯಕನು ಕ್ರಿ.ಶ.೧೭೨೧ ರಲ್ಲಿ ಮರಣ ಹೊಂದಲು ಇವನ ಮಗನಾದ ಹಿರಿಯ ಮದಕರಿನಾಯಕನು ಚಿತ್ರದುರ್ಗದ ಅರಸನಾದ.

ಹಿರಿಯ ಮದಕರಿನಾಯಕ (ಕ್ರಿ.ಶ.೧೭೨೧-೧೭೪೯)

ಕ್ರಿ.ಶ.೧೭೨೧ರಲ್ಲಿ ಅಧಿಕಾರಕ್ಕೆ ಬಂದ ಹಿರಿಯ ಮದಕರಿನಾಯಕನು ತನ್ನ ತಂದೆಯಂತೆಯೇ ಶೂರನಾದ ವ್ಯಕ್ತಿಯಾಗಿದ್ದನು. ಇವನ ಕಾಲದಲ್ಲಿ ನೆಡೆದ ಘಟನೆಗಳು ದಕ್ಷಿಣ ಭಾರತದ ರಾಜಕೀಯ ದೃಷ್ಠಿಯಿಂದ ಮಹತ್ವವಾದುವುಗಳೆನಿಸಿವೆ. ಇವನ ಅಡಳಿತಾವಧಿಯಲ್ಲಿ ಕೆಳದಿ ಸಂಸ್ಥಾನದವರು ಇತರ ಸಂಸ್ಥಾನಗಳ ಅರಸರ ಸಹಾಯದಿಂದ ಚಿತ್ರದುರ್ಗ ಸಂಸ್ಥಾನವನ್ನು ಹಾಳುಗೆಡವಲು ಪ್ರಯತ್ನಿಸಿದರು.ಕ್ರಿ.ಶ.೧೭೪೧ರಲ್ಲಿ ಕೆಳದಿಯ ಬಸಪ್ಪನಾಯಕನ ಸೂಚನೆಯಂತೆ ಹರಪ್ಪನಹಳ್ಳಿ, ಆನೆಗೊಂದಿ, ಸವಣೂರು, ಮತ್ತು ರಾಯದುರ್ಗದ ಪಾಳೆಯಗಾರರು ರಾಮಗಿರಿ ಕೋಟೆಯನ್ನ

ಆಕ್ರಮಿಸಿದರು ನಂತರ ಹಿರೇ ಮದಕೇರಿನಾಯಕನು ಅವರೊಡನೆ ಶೌರ್ಯದಿಂದ ಹೋರಾಡಿ ಆ ಕೋಟೆಯನ್ನು ಪುನರಾಕ್ರಮಿಸಿಕೊಂಡನು.

ಕ್ರಿ.ಶ.೧೭೪೮ರಲ್ಲಿ ಹಿರೇ ಮದಕರಿನಾಯಕ ತನ್ನ ರಾಜಕೀಯ ಮಿತ್ರನಾದ ಮರಾಠರೊಂದಿಗೆ ಅಣಜಿ ಬಳಿಹೋಗಿದ್ದಾಗ, ಬಿದನೂರು, ಸವಣೂರು, ಹರಪ್ಪನಹಳ್ಳಿ ರಾಯದುರ್ಗದವರೆಲ್ಲ ಸೇರಿ ಎರಡನೇಯ ಬಾರಿಗೆ ಚಿತ್ರದುರ್ಗ ಸಂಸ್ಥಾನದ ಮೇಲೆ ದಾಳಿ ನೆಡಿಸಿ ಮಾಯಕೊಂಡ ಕೋಟೆಯನ್ನು ಮುತ್ತಿದರು. ಆಗ ಹಿರಿಯ ಮದಕರಿನಾಯಕನು ಅಲ್ಲಿಗೆ ಹೋಗಿ ಬಲಿಷ್ಠವಾಗಿದ್ದ ವೈರಿಗಳ ಸೈನ್ಯವನ್ನು ಎದುರಿಸಿದಾಗ ಭೀಕರವಾದ ಹೋರಾಟ ನೆಡೆಯಿತು. ಈ ಕಾಳಗದಲ್ಲಿ ಹಿರಿಯ ಮದಕರಿನಾಯಕನು ಹರಪ್ಪನಹಳ್ಳಿ ಸೋಮಶೇಖರನಾಯಕನಿಂದ ಗಾಯಗೊಂಡ ಅಲ್ಲಿಯೇ ಮೃತನಾದನು. ಅದರೆ ಶತೃಗಳಿಂದ ಮಾಯಕೊಂಡವನ್ನು ಚಿತ್ರದುರ್ಗದ ಸೈನ್ಯದಿಂದ ಗೆಲ್ಲಲ್ಲು ಸಾಧ್ಯವಾಗಲಿಲ್ಲ. ನಂತರ ಚಿತ್ರದುರ್ಗದ ಸಂಸ್ಥಾನದ ಅರಸನಾಗಿ ಹಿರಿಯ ಮದಕರಿನಾಯಕನ ಮಗ ಇಮ್ಮಡಿ ಕಸ್ತೂರಿ ರಂಗಪ್ಪನಾಯಕನು ಪಟ್ಟಾಭಿಷಕ್ತನಾದನು. ಹಿರಿಯ ಮದಕರಿನಾಯಕನು ತನ್ನ ಆಳ್ವಿಕೆಯಲ್ಲಿ ಗುಡಿಕೋಟೆ ರಾಯದುರ್ಗದ ಪಾಳೆಯಗಾರರನ್ನು ಸೋಲಿಸಿ, ಬಳ್ಳಾರಿ, ರಾಯದುರ್ಗ, ಶಿವಮೊಗ್ಗ ಜಿಲ್ಲೆಗಳನ್ನೊಳಗೊಂಡಂತೆ ಒಟ್ಟು ಅರವತ್ತು ಸೀಮೆಗಳ ಮೇಲೆ ಅಧಿಪತ್ಯ ಸ್ಥಾಪಿಸಿದನು. ಚಿತ್ರದುರ್ಗ ಸಾಮ್ರಾಜ್ಯ ಸುಮಾರು ಇನ್ನೂರು ಚದರ ಮೈಲಿಗಳಷ್ಟು ಭೂಮಿ ಇವನ ಒಡೆತನದಲ್ಲಿದ್ದಿತ್ತು. "ಚಿತ್ರದುರ್ಗದ ವಾರ್ಷಿಕ ಆದಾಯ ಒಂಬತ್ತು ಲಕ್ಷದ ನಲವತ್ತು ಸಾವಿರ ವಾರಹಗಳಷ್ಟಿತ್ತು. ಇವನ ಕಾಲದಲ್ಲಿಯೇ ಚಿತ್ರದುರ್ಗ ಸಂಸ್ಥಾನ ಬಹಳಷ್ಟು ವಿಶಾಲವಾಗಿ ರೂಪಗೊಂಡಿತ್ತು."[೧೭]

ಇಮ್ಮಡಿ ಕಸ್ತೂರಿ ರಂಗಪ್ಪನಾಯಕ(ಕ್ರಿ.ಶ.೧೭೪೯–೧೭೫೪)

ಹಿರೇ ಮದಕರಿನಾಯಕನ ಮಗನಾದ ಈತನು ತನ್ನ ತಂದೆ ಹೋರಾಟವವನ್ನು ಮುಂದುವರೆಸಿದ ಗುತ್ತಿಯ ಸಿದ್ಧೋಜಿರಾಯನ ಮಗ ಮುರಾರಿರಾವ್ ಅಡವಾಗಿಯ ಸುಬೇದಾದ ಹಿದಾಯಾತ್ ಮೋತಿಖಾನರನ್ನ ಕರೆಯಿಸಿ ಒಂದು ಲಕ್ಷ ವರಹಗಳನ್ನು ಕೊಡುವುದರೊಡನೆ ಶತ್ರುಗಳು ಹಾಕಿದ ಮಾಯಕೊಂಡದ ಮೇಲಿನ ಮುತ್ತಿಗೆಯನ್ನ ಎಬ್ಬಿಸಲು ವ್ಯವಸ್ಥೆ ಮಾಡಿದ್ದರಿಂದ ಕ್ರಿ.ಶ.೧೭೪೯ರಲ್ಲಿ ಮಾಯಕೊಂಡ ಕೋಟೆಯ ಶತ್ರುಗಳಿಂದ ಬಿಡುಗಡೆ ಹೊಂದಿತು. ಅದೇ ವರುಷದಲ್ಲೆ ಸಂತೇಬೆನ್ನೂರಿನ ಮುತ್ತಿಗೆಯಲ್ಲಿ ಕಸ್ತೂರಿ ರಂಗಪ್ಪನಾಯಕನು ಮರಾರಿರಾವ್ ಮತ್ತು ಖಾನರೊಡನೆ ಸೇರಿದರೂ ಅವರೀರ್ವರು ನಂಬಿಕೆದ್ರೋಹ ಮಾಡಿದ್ದನ್ನುಕಂಡು ಆ ಮುತ್ತಿಗೆಯನ್ನು ಮುಂದುವರಿಸದೆ ದುರ್ಗಕ್ಕೆ ಹಿಂದುರುಗಿದ.

ಕಸ್ತೂರಿ ರಂಗಪ್ಪನಾಯಕನು ಆನೆಗೊಂದಿ ರಾಯದುರ್ಗ ಮೊದಲಾದ ಸಂಸ್ಥಾನಿಕರೊಡನೆಯೂ ಹೋರಾಡಬೇಕಾಯಿತು. ಕ್ರಿ.ಶ.೧೭೫೦ರಲ್ಲಿ ಸಿರಾದ ಸುಬೇದಾರ ನಿಂದ ಸೀರಾಸೀಮೆಯ

ನಾಡತಳವಾರಿಕೆಯನ್ನೂ ಎರಡು ಗ್ರಾಮಗಳನ್ನು ಈ ನಾಯಕನು ಪಡೆದ ಅಲ್ಲದೆ ಬೂದಿಹಾಳು ಸೀಮೆಯ ಮೇಲೆ ದಂಡನ್ನು ಕಳುಹಿಸಿ ಹುಳಿಯಾರ, ಯಣ್ಣೆಗೆರೆ, ಹೆಗ್ಗೆರೆ ಮತ್ತು ಯಳನಾಡು ಗ್ರಾಮಗಳನ್ನು ವಶಪಡಿಸಿಕೊಳ್ಳಲಾಯಿತು. ಅಲ್ಲದೆ ಕ್ರಿ.ಶ.೧೭೫೧ ರಲ್ಲಿ ಬೂದಿಹಾಳನ್ನೇ ತೆಗೆದುಕೊಂಡು ಅದಕ್ಕೆ ಗಿರಿಜಾನಗರವೆಂದು ಮರುನಾಮಕರಣ ಮಾಡಲಾಯಿತು. ವರುಷವೊಂದಕ್ಕೆ ಸಿರಾದವರಿಗೆ ಒಂದುಸಾವಿರ ವರಹ ಪೊಗದಿ ಕೊಡುವ ಒಪ್ಪಂದದೊಡನೆ ತೇಕಲವಟ್ಟಿಗ್ರಾಮವನ್ನು ಕ್ರಯಕ್ಕೆ ತೆಗೆದು ಕೊಳ್ಳಲಾಯಿತು. ಇದೇ ವರುಷದಲ್ಲಿ ಹೊನ್ನೂರು ಮತ್ತು ಹದಡಿಗಳೂ ದುರ್ಗದವರ ವಶವಾದವು.

ಕರ್ನಾಟಕದ ಹಲವಾರು ರಾಜ್ಯಗಳು ಮೊಗಲರಿಗೂ ಮರಾಠರಿಗೂ ಪೊಗದಿಯನ್ನು ಕೊಡುವ ಪರಿಪಾಠ ಬೆಳೆದು ಬಂದಿದ್ದು, ಮರಾಠ ಪೇಶ್ವೆಗಳು ಚಿತ್ರದುರ್ಗದವರಿಂದಲೂ ಚೌತವನ್ನು ಸಂಗ್ರಹಿಸುತ್ತಿದ್ದರು. ಕಸ್ತೂರಿ ರಂಗಪ್ಪನಾಯಕನೂ ಮರಾಠರಿಗೆ ಆಗಾಗ್ಗೆ ಚೌತವನ್ನು ಕೊಡಬೇಕಾಯಿತು. ಕ್ರಿ.ಶ.೧೭೫೩ ರ ಫೆಬ್ರವರಿಯಲ್ಲಿ ಪೇಶ್ವೆ ನಾನಸಾಹೇಬನು ವಡ್ಡನಹಳ್ಳಿಗೂ ಕ್ರಿ.ಶ.೧೭೫೪ರ ಮಾರ್ಚ್ ತಿಂಗಳಲ್ಲಿ ಅಣಜಿಗೂ ಮುತ್ತಿಗೆ ಹಾಕಿದಾಗ ನಾಯಕರು ಕಾಣಿಕೆ ಹಣವನ್ನು ನಿಗದಿಪಡಿಸಿದ್ದರಿಂದ ಅವನು ಮತ್ತಿಗೆಯನ್ನು ತೆಗೆದುಹೋದ, ಸಂತಾನಹೀನನೂ ಸಾಯುವ ವೇಳೆಗೆ ಅನಾರೋಗ್ಯಪೀಡಿತನೂ ಆದ ಕಸ್ತೂರಿ ರಂಗಪ್ಪ ನಾಯಕನು ತನ್ನ ಆರುವರುಷಗಳ ಆಳ್ವಿಕೆಯಲ್ಲಿ ಇಂತಹ ರಾಜಕೀಯ ಸಾಧನೆಗಳನ್ನು ಮಾಡುವುದರೊಡನೆ ಕ್ರಿ.ಶ.೧೭೫೪ರಲ್ಲಿ ಮರಣ ಹೊಂದಿದ.

ಚಿತ್ರದುರ್ಗ ಚರಿತ್ರೆಯಲ್ಲಿ ರಾಜಕೀಯವಾಗಿ ಸ್ಥಾನ ಪಡೆದಿರುವ ಗಾಡಿಲ ಓಬವ್ವನಾಗತೀ ತನ್ನ ರಂಗಪ್ಪನಾಯಕನು ದೈವಾಧೀನನಾದ ಕಾರಣ ಹೊಸದೊರೆಯನ್ನು ದುರ್ಗದ ಸಿಂಹಾಸನಕ್ಕೆ ತರುವವರೆಗೆ ಆಡಳಿತವನ್ನು ತಾನೇ ನೋಡಿಕೊಳ್ಳ ತೊಡಗಿದಳು ಮುದಿ ಬರಮಪ್ಪ ಮತ್ತು ಗುರುಸಿದ್ದಪ್ಪ ಎಂಬೀರ್ವರ ತಲೆಯನ್ನು ಹೊಡೆಸಿದಳು. ತನ್ನ ಎರಡು ವರುಷಗಳ ಸರ್ವಾಧಿಕಾರತ್ವದಲ್ಲಿ ಈ ನಾಗತೆಯ ವರ್ತನೆಯು ಹಲವು ವಿಧದ ಶಂಕೆಗೆ ಅವಕಾಶ ನೀಡಿದೆ. ದಾಖಲೆಯು ತಿಳಿಸುವಂತೆ ಓಬವ್ವನಾಗತಿಗೆ ನರಸಪ್ಪನಾಯಕ ಮತ್ತು ನೀಲಪ್ಪನಾಯಕ ಎಂಬೀರ್ವರು ಸಹೋದರರು. ನರಸಪ್ಪನನ್ನು ದುರ್ಗಕ್ಕೆ ಅರಸನನ್ನಾಗಿ ಮಾಡಬೇಕೆಂದು ಹಾಗೂ ಮಗ ಮೈದುನ ಜಂಪಣ್ಣನಾಯಕ ಇವರುಗಳನ್ನ ವಿಷಹಾಕಿಸಿ ಕೊಲ್ಲಿಸಬೇಕೆಂದು ಆಲೋಚಿಸಿ ಈ ನಾಗತಿಯ ದಳವಾಯಿ ಮೊದಲಾದವರ ಮನೋಗತವನ್ನು ತಿಳಿಯಲೆತ್ನಿಸಿದಳು ಆಕೆಯ ಮಾತಿಗೆ ಸಮ್ಮತಿಸದ ದಳವಾಯಿಗಳು ನರಸಪ್ಪ ನಾಯಕನನ್ನ ಕೊಂದು ಹಾಕಿದರು.

ಕಸ್ತೂರಿ ರಂಗಪ್ಪನಾಯಕನ ಕಾಲದಲ್ಲಿಬೂದಿಹಾಳು ಪ್ರದೇಶ ಚಿತ್ರದುರ್ಗದ ಅಧೀನಕ್ಕೆ ಒಳಪಟ್ಟಿತು. ನಂತರ ಹದಡಿ, ಹೊನ್ನೂರು ಕೋಟೆಗಳನ್ನು ಗೆದ್ದನು. ಶಿರಾ ಪ್ರಾಂತ್ಯದೊಂದಿಗೆ ರಂಗಪ್ಪನಾಯಕನು

ಸ್ನೇಹ ಸಂಬಂಧ ಇಟ್ಟುಕೊಂಡಿದ್ದನು. ಈತನ ರಾಯದುರ್ಗ ಸೀಮೆಯ ಕರೆಕಲ್ಲು ತಿಮ್ಮಲಾಪುರ ಕೋಟೆಗೆ ಮಹಾದೇವನ ಕೋಟೆ ಎಂದೂ ಬೂದಿಹಾಳು ಕೋಟೆಗೆ ಗಿರಿಜಾನಗರವೆಂದೂ ಮರು ನಾಮಕರಣ ಮಾಡಿದನು. ಹಿರೇ ಮದಕರಿನಾಯಕನ ನಂತರ ಈತನಿಗೆ ಮಕ್ಕಳಿಲ್ಲವಾದ್ದರಿಂದ ಜಾನಕಲ್ಲು ದುರ್ಗದಲ್ಲಿದ್ದ ಮೊದಲು ಭರಮಪ್ಪನಾಯಕನ ಮಗ ಮದಕರಿನಾಯಕನು ಚಿತ್ರದುರ್ಗದ ಗದ್ದಿಗೆಗೆ ಹಕ್ಕುದಾರನಾದನು ಇವನನ್ನೇ ರಾಜಾ ಮದಕರಿನಾಯಕನೆಂದು ಕರೆಯಲಾಗಿದೆ.

ರಾಜಾ ಮದಕರಿನಾಯಕ(ಕ್ರಿ.ಶ.೧೭೫೪-೧೭೭೯)

ಕ್ರಿ.ಶ.೧೭೫೪ರಲ್ಲಿ ಅಧಿಕಾರಕ್ಕೆ ಬಂದ ರಾಜಾಮದಕರಿನಾಯಕನು ಸುಮಾರು ೨೫ ವರ್ಷಗಳ ಕಾಲ ಆಳ್ವಿಕೆ ನೆಡೆಸಿ ದಕ್ಷಿಣ ಭಾರತದ ಇತಿಹಾಸದಲ್ಲಿ ಚಿತ್ರದುರ್ಗ ರಾಜ್ಯದ ಹೆಸರನ್ನು ಚಿರಸ್ಥಾಯಿ ಗೊಳಿಸುವಲ್ಲಿ ಕಾರಣಕರ್ತನಾಗಿದ್ದಾನೆ. ಇವನನ್ನು ಕಡೆಯ ಮದಕರಿನಾಯಕ ಚಿಕ್ಕಮದಕರಿನಾಯಕ. ರಾಜಾಮದಕರಿನಾಯಕ ಎಂತಲೂ ಕರೆಯಲಾಗಿದೆ. ಈತನು ಅಧಿಕಾರಕ್ಕೆ ಕೇವಲ ೧೨ ವರ್ಷದ ಬಾಲಕನಾದ್ದರಿಂದ ಕೆಲವು ವೈರಿಗಳು ಇದೇ ಸರಿಯಾದ ಸಮಯವೆಂದು ಭಾವಿಸಿ, ಚಿತ್ರದುರ್ಗದ ಮೇಲೆ ದಾಳಿ ಮಾಡಲು ಪ್ರಯತ್ನಿಸಿದರೂ ಚಿತ್ರದುರ್ಗದ ಸೈನ್ಯ ಬಲಿಷ್ಠವಾಗಿದ್ದರಿಂದ ಅವರ ಪ್ರಯತ್ನ ವಿಫಲವಾಯಿತು. ತರಿಕೆರೆಯವರೂ. ಓರಿಮಲೆಯವರೂ. ಹರಪ್ಪನಹಳ್ಳಿಯವರೂ ಸಹ ದುರ್ಗದ ಸರಹದ್ದಿನ ಮೇಲೆ ದಾಳಿ ಮಾಡಿದಾಗ ಅವರನ್ನು ಹಿಮ್ಮೆಟ್ಟಿಸಲಾಯಿತು.

ರಾಜಾ ಮದಕರಿನಾಯಕನು ಆಳ್ವಿಕೆ ನೆಡೆಸುವಾಗ ಪೂನಾದ ಮರಾಠರು ಮತ್ತು ಶ್ರೀರಂಗಪಟ್ಟಣದ ಹೈದರಾಲಿ ಮುಂತಾದವರು ಚಿತ್ರದುರ್ಗ ಸಂಸ್ಥಾನದ ಮೇಲೆ ಕಣ್ಣೀಟ್ಟಿದ್ದರು. ಅವರ ಉದ್ದೇಶವಾದರೂ ಪರಾಕ್ರಮಿಯಾಗಿದ್ದ ರಾಜಾ ಮದಕರಿನಾಯಕನ ಸಹಾಯವನ್ನು ಪಡೆದು ತಮ್ಮ ರಾಜ್ಯಗಳನ್ನು ವಿಸ್ತರಿಸಿಕೊಳ್ಳಬೇಕೆಂಬುದಾಗಿತ್ತು. ಹೈದಾರಾಲಿಯು ರಾಜಾ ಮದಕರಿನಾಯಕನ ಸಹಾಯದಿಂದ ಬಂಕಾಪುರ. ನಿಜಗಲ್ಲು. ಬಿದನೂರು ಪ್ರಾಂತ್ಯಗಳನ್ನು ಗೆದ್ದು, ಮರಾಠರ ವಿರುದ್ದ ಕಾರ್ಯಚಾರಣೆ ಕೈಗೊಂಡನು. ಆದರೆ ಹೈದರಾಲಿಗೆ ಮದಕರಿನಾಯಕನ ಬಗ್ಗೆ ದ್ವೇಷ ಇಲ್ಲದಿರಲಿಲ್ಲ. ಬಹಿರಂಗದಲ್ಲಿ ರಾಜಾ ಮದಕರಿನಾಯಕನ ಬಗ್ಗೆ ಪ್ರೀತಿ ವಿಶ್ವಾಸ ತೋರಿದರೂ. ಅಂತರಂಗದಲ್ಲಿ ಅವನ ನಾಶವನ್ನು ಬಯಸುತ್ತಿದ್ದನು. ಮದಕರಿನಾಯಕನೂ ಚಾಣಾಕ್ಷ ವ್ಯಕ್ತಿಯಾಗಿದ್ದನು. ಅವನು ಹೈದರಾಲಿಯ ಮನೋಭಾವವನ್ನು ಅರಿತುಕೊಂಡಿದ್ದರಿಂದ ಅಂತರಂಗದಲ್ಲಿಯೇ ಮರಾಠರ ಸಂಖ್ಯೆವನ್ನು ಬೆಳೆಸಿ ಹೈದರಾಲಿಯಿಂದ ತನಗೆ ಒದಗಬಹುದಾದ ಆಪತ್ತಿಗೆ ಅಪೂರ್ವ ತಯಾರಿ ಮಾಡಿಕೊಂಡಿದ್ದನು.

ಮೊದಲಿಗೆ ದಕ್ಷಿಣದ ಕಡೆಗೆ ಬಂದ ಮರಾಠರ ಮಾಧವರಾಯನು ಮದಕರಿನಾಯಕ ಸಹಾಯವನ್ನು ಕೋರಲು ಅವನಿಗೆ ನೆರವು ನೀಡಿ ಆತನ ವಿಶ್ವಾಸ ಸಂಪಾದಿಸಬಹುದೆಂದು ಕೆಲವೊಂದು ಕರಾರಿನ ಮೇಲೆ ಹೈದರಾಲಿಗೆ ಸೇರಿದ ಕೆಲವು ಕೋಟೆಗಳನ್ನು ಗೆದ್ದುಕೊಂಡನು.

ಇನ್ನೊಂದು ಬಾರಿ ಮರಾಠರು ಭಾರೀ ದುಡಿನೊಂದಿಗೆ ಬಂದು ಮದಕರಿನಾಯಕನ ಸಹಾಯವನ್ನು ಬೇಡಲು, ಆನೆವಟ್ಟಿಯನ್ನು ಅವರಿಗೆ ವಶಮಾಡಿಕೊಟ್ಟನು. ಈ ಯುದ್ದದಲ್ಲಿ ಹೈದರಾಲಿಯ ಸೈನ್ಯ ಸೋತು ಶ್ರೀರಂಗಪಟ್ಟಣಕ್ಕೆ ವಾಪಸ್ಸಾಯಿತು. ಈ ಘಟನೆಯಿಂದ ಹೈದರಾಲಿಗೆ ರಾಜಾ ಮದಕರಿನಾಯಕನ ಮೇಲೆ ದ್ವೇಷವುಂಟಾಗಿ. ಹೇಗಾದರೂ ಮಾಡಿ ಆತನನ್ನು ಗೆಲ್ಲಬೇಕೆಂದು ಪಣತೊಟ್ಟು ಮುತ್ತಿಗೆ ಪ್ರಯತ್ನಗಳನ್ನು ಆರಂಭಿಸಿದನು.

ಕ್ರಿ.ಶ.೧೭೭೬ ರಲ್ಲಿ ಹೈದರಾಲಿ ತನಗೆ ದ್ರೋಹ ಬಗೆದ ರಾಜಾಮದಕರಿನಾಯಕನ ಮೇಲೆ ದಂಡೆತ್ತಿ ಬಂದನು. ಚಿತ್ರದುರ್ಗವನ್ನು ಸಂಸ್ಥಾನವನ್ನು ವಶಪಡಿಸಿಕೊಳ್ಳಬೇಕೆಂದು ಅವನು ಹಲವು ಭಾರಿ ಮುತ್ತಿಗೆಯ ಪ್ರಯತ್ನಗಳನ್ನು ಕೈಗೊಂಡಿನು ಆದರೆ ಚಿತ್ರದುರ್ಗದ ಬಲಿಷ್ಠವಾಗಿದ್ದ ದಂಡಿನಿಂದಾಗಿ ಯಶಸ್ಸು ದೊರೆಯಲಿಲ್ಲ. ನಂತರ ತಮ್ಮ ಗೂಢಚಾರರ ಸಹಾಯದಿಂದ ಚಿತ್ರದುರ್ಗದ ಕೋಟೆಯ ಆಕ್ರಮಿಸಲು ರಹಸ್ಯವಾದ ಮಾರ್ಗಗಳನ್ನು ತಿಳಿದು. ಹೈದರಾಲಿ ತನ್ನ ಸೈನಿಕರನ್ನು ಕಳುಹಿಸಿದಾಗ ಓಬವ್ವಳು ತನ್ನ ಸಾಹಸದಿಂದ ಅವರನ್ನು ಸಂಹರಿಸಿ ಚಿತ್ರದುರ್ಗದ ಕೋಟೆಯನ್ನು ರಕ್ಷಿಸಿ ಓನಕೆ ಓಬವ್ವಳೆಂದು ಪ್ರಖ್ಯಾತಿಯನ್ನು ಪಡೆದದ್ದು ಇದೇ ಸಮಯದಲ್ಲಿ. ಹೈದರಾಲಿಯು ಲಕ್ಷಾಂತರ ಪೌಜಿನೊಂದಿಗೆ ಬಂದರೂ ಕೂಡಾ ಮದಕರಿನಾಯಕನನ್ನು ಗೆಲ್ಲಲು ಸಾಧ್ಯಾವಾಗಲಿಲ್ಲ. ಕ್ರಿ.ಶ.೧೭೭೯ ಮತ್ತೊಂದು ಬಾರಿ ಮುತ್ತಿಗೆ ಹಾಕಿ ಶೌರ್ಯದಿಂದಲ್ಲದಿದ್ದರೂ ಮೋಸದಿಂದ ಕೋಟೆಯಲ್ಲಿದ್ದ ಮುಸ್ಲಿಂ ಯೋಧರನ್ನ ತನ್ನ ಪರ ಮಾಡಿಕೊಂಡು ಇವರ ಸಹಾಯ ಪಡೆದು ಹರಪ್ಪನಹಳ್ಳಿ ಓರಿಮಲೆ ಮತ್ತು ರಾಯದುರ್ಗದ ಪಾಳೆಯಗಾರರ ಸಹಾಯದಿಂದ ಚಿತ್ರದುರ್ಗದ ಮೇಲೆ ದಾಳಿ ಮಾಡಿ ಚಿತ್ರದುರ್ಗ ಸೈನ್ಯವನ್ನು ಧೂಳಿಪಟ ಮಾಡುವುದರ ಮೂಲಕ ಚಿತ್ರದುರ್ಗದಲ್ಲಿ ತನ್ನ ಪ್ರಭುತ್ವವನ್ನು ನೆಲೆಸುವಂತೆ ಮಾಡಿದನು.

ಚಿತ್ರದುರ್ಗದ ವಿರುದ್ದ ಹೈದರ್ ಆಲಿಯು ಒಟ್ಟು ನಾಲ್ಕು ಬಾರಿ ಯುದ್ದವನ್ನು ಹೂಡಿದ ಚಿತ್ರದುರ್ಗ ವಂಶಾವಳಿಗಳಲ್ಲಿಯೂ ಈ ದಂಗೆಗೆ ಸೂಚನೆ ದೊರಕುತ್ತದೆ. ಕ್ರಿ.ಶ.೧೭೬೨ರಲ್ಲಿ ಹೈದರ್ ಆಲಿಯು ಮೊದಲಬಾರಿಗೆ ಚಿತ್ರದುರ್ಗದ ವಿರುದ್ದ ದಂಡೆತ್ತಿ ಬಂದು ದುರ್ಗದ ರಾಜ್ಯಕ್ಕೆ ಸೇರಿದ ಧರ್ಮಪುರ. ಪರಶುರಾಂಪುರ, ವೇಣುಕಲ್ಲು, ಯಕ್ಕನೂರು, ದೊಡ್ಡೇರಿ ತಳಕ್ಕು, ಗೌರಸಮುದ್ರ, ನಾಯಕನಹಟ್ಟಿ ಹಿರಿಯೂರು. ಹೊಸದುರ್ಗ. ಜಾನಕಲ್ಲು, ನಾಯಕನದುರ್ಗ, ಹೊಳಲ್ಕೆರೆ, ರಾಮಗಿರಿ, ರಂಗಯ್ಯೆನದುರ್ಗ, ಬಾಗೂರು–ಹೀಗೆ ಪ್ರಮುಖ ಗಡಿ ದುರ್ಗಗಳನ್ನು ಕೊಡುವುರೊಡನೆ ಸಂಧಾನ ಮಾಡಿಕೊಂಡ. ಗಡಿಗಳು ಮತ್ತೆ ದುರ್ಗದವರಿಗೆ ದೊರೆಕವು "ಹೈದರ್‌ಅಲಿಯು ಕ್ರಿ.ಶ.೧೭೭೪ರ ಮಾರ್ಚ್‌ನಲ್ಲಿ ಎರಡನೆಯ ಕ್ರಿ.ಶ.೧೭೭೭ ರ ಜೂನ್ ನಲ್ಲಿ ಮೂರನೇಯ ಹಾಗೂ ಕ್ರಿ.ಶ.೧೭೭೯ ರ ಫೆಬ್ರವರಿಯಲ್ಲಿ ಕೊನೆಯಬಾರಿಗೆ ದುರ್ಗದ ಕದನ ಕುರಿತ ಚಿತ್ರದುರ್ಗದ ಬಖೈರು ವಿವರ ನೀಡುತ್ತದೆ."[೧೮]

ರಾಜ ಮದಕರಿನಾಯಕನನ್ನು ಬಂದಿಯನ್ನಾಗಿ ಮಾಡಿ, ಶ್ರೀರಂಗಪಟ್ಟಣಕ್ಕೆ ಸಾಗಿಸಿ ಅಲ್ಲಿ ಗೃಹಬಂಧನಲ್ಲಿಟ್ಟನು. ಚಿತ್ರದುರ್ಗದ ಖಜಾನೆಯಲ್ಲಿದ್ದ ಅಪಾರ ಸಂಪತ್ತನ್ನು ತನ್ನೊಂದಿಗೆ ಸಾಗಿಸಿಕೊಂಡು ಹೋಗಿದಲ್ಲದೆ ೨೦ ಸಾವಿರ ಯುವಕ ನಾಯಕರನ್ನು ಜೊತೆಯಲ್ಲಿ ಕರೆದೊಯ್ದು ಅವರನ್ನು ಚೇಲಪಡೆಯನ್ನು ಆರಂಭಿಸಿದನು.ರಾಜಾಮದಕರಿನಾಯಕನ ಜೊತೆಯಲ್ಲಿ ಬಂಧಿತರಾಗಿದ್ದ ಇತರ ಪ್ರಮುಖರೆಂದರೆ ದೊರೆಯ ತಮ್ಮನಾದ ಪ್ರಧಾನಿಯಾಗಿದ್ದ ಪರುಶುರಾಮಪ್ಪ ನಾಯಕ ದೊರೆಯ ಏಕೈಕ ಪುತ್ರ ಚಿಕ್ಕಬಾಲಕ ಕುಮಾರ ಭರಮಪ್ಪನಾಯಕ ಹಾಗೂ ದೊರೆಯ ತಮ್ಮನಾದ ಪರುಶುರಾಮಪ್ಪನಾಯಕರನ್ನು ಕಬ್ಬಾಳುದುರ್ಗ ಎಂಬ ದುರ್ಗಮವಾದ ಬೆಟ್ಟದ ಸ್ಥಳದಲ್ಲಿ ಸೆರೆಯಿಡಲಾಯಿತು. ಆ ಸಮಯದಲ್ಲಿ ಅವರಿಬ್ಬರನ್ನು ಮದ್ದೂರು ಮತ್ತು ಚನ್ನಪಟ್ಟಣಗಳ ಮಧ್ಯೆ ಇರುವ ಭೈರಾಪಟ್ಟಣದಲ್ಲಿ ಆಲದಮರವೊಂದಕ್ಕೆ ಗಲ್ಲಿಗೆ ಹಾಕಿಸಿದನು. ಇತ್ತ ಶ್ರೀರಂಗಪಟ್ಟಣದ ಸೆರೆಯಲ್ಲಿ ದೊರೆಯೂ ಸಹ ಅನ್ನದಲ್ಲಿ ವಿಷ ಹಾಕಲ್ಪಟ್ಟು ಅಸಹಜ ಮರಣಕ್ಕೆ ತುತ್ತದನು. "ಹೈದರಾಲಿಯಿಂದ ದೊರೆ ಮದಕರಿನಾಯಕ ಮತ್ತು ಅವನ ನೇರ ಸಂತತಿಯ ಆಳ್ವಿಕೆಯು ಕೊನೆಯಾಯಿತು."[೧೯]

ಇದರೊಂದಿಗೆ ಮತ್ತಿ ತಿಮ್ಮಣ್ಣನಾಯಕನಿಂದ ಸ್ಥಾಪಿತವಾದ ಚಿತ್ರದುರ್ಗ ಸಾಮ್ರಾಜ್ಯ ಸುಮಾರು ಎರಡು ಶತಮಾನಗಳಿಗೂ ಹೆಚ್ಚು ಕಾಲ ಅಸ್ತಿತ್ವದಲ್ಲಿತ್ತು ಕಾಮಗೇತಿ ಅರಸರ ಆಳ್ವಿಕೆ ರಾಜಾ ಮದಕರಿನಾಯಕನ ಪತನದೊಂದಿಗೆ ಅಂತ್ಯಕಂಡಿತು. "ರಾಜಾ ಮದಕರಿನಾಯಕನ ಮರಣಾನಂತರ ಅವನ ಜೊತೆಯಲ್ಲೇ ಬಂಧಿಯಾಗಿದ್ದ ಆತನ ದಯಾದಿ ಸಂಬಂಧದ ಅಣ್ಣನಾದ ದೊಡ್ಡ ಮದಕರಿನಾಯಕನು ಚಿತ್ರದುರ್ಗ ಸಂಸ್ಥಾನವನ್ನು ಮರಳಿ ಪಡೆಯಲು ಪ್ರಯತ್ನಿಸಿದ್ದು ಕೂಡಾ ಒಂದು ರೋಚಕ ಅಧ್ಯಾಯವಾಗಿವೆ."[೨೦]

೪.೨. ಚಿತ್ರದುರ್ಗ ನಾಯಕರ ವಂಶಾವಳಿ

ಚಿತ್ರದುರ್ಗದ ನಾಯಕರ ವಂಶಾವಳಿಯನ್ನು ಕುರಿತು ಇತಿಹಾಸಕಾರರು ಬರೆದಿರುವಲ್ಲಿ ಹಲವಾರು ಗೊಂದಲಗಳಿವೆ ಈ ನಾಯಕ ವಂಶದಲ್ಲಿ ಮದಕರಿನಾಯಕ ಎಂಬ ಹೆಸರಿನ ಐದಾರು ವ್ಯಕ್ತಿಗಳು ಬರುವುದರಿಂದ ಇವರ. ವಂಶಾವಳಿ ರಚನೆಯಲ್ಲಿ ಹಲವು ಸಂದೇಶಹವುಂಟಾಗುತ್ತದೆ. ಜನರ ಮಾತಿನಲ್ಲಿ ಮದಕರಿನಾಯಕ ಎಂದು ಕರೆಯುವ ಹೆಸರು ಶಾಸನಗಳಲ್ಲಿ ಮದಕರಿನಾಯಕ ಮದಕೆರಿನಾಯಕ ಮೆದಕೇರಿನಾಯಕ ಎಂಬಂಥ ರೂಪಗಳ ಸಿಗುವುದನ್ನು ಕಾಣಬಹುದು. ಈ ನಾಯಕರ ಶಾಸನಗಳನ್ನು ಅಭ್ಯಸಿಸುವಾಗ ಹಲವಾರು ಗೊಂದಲಗಳು ನಮ್ಮನ್ನು ಆವರಿಸುತ್ತವೆ. "ಬಿ.ಎಲ್.ರೈಸರು ಚಿಕ್ಕಕೋಗಿಲೂರು ಶಾಸನದಲ್ಲಿ ಉಲ್ಲೇಖವಾಗುವ ಹಿರಿಯ ತಿಮ್ಮಣ್ಣನಾಯಕನನ್ನು ಚಿತ್ರದುರ್ಗದ ಸಂಸ್ಥಾನದ ಅರಸ ಎಂದು ಹೇಳುತ್ತಾರೆ."[೨೧] ಈ ಶಾಸನದ ಕಾಲವನ್ನು ಸುಮಾರು ಕ್ರಿ.ಶ.೧೬೭೭ಳ ಇರಬಹುದೆಂದು ಗುರುತಿಸುತ್ತಾರೆ. ಆದರೆ ಈ ಶಾಸನವನ್ನು ಹೊರತು ಪಡಿಸಿ ಬೇರೆ

ಯಾವ ಶಾಸನದಲ್ಲೂ ಇವನ ಪ್ರಸ್ತಾಪವಾಗುವುದಿಲ್ಲ. ಈ ಶಾಸನದಲ್ಲಿ ಕಾಲದ ಉಲ್ಲೇಖವಿರದ ಕಾರಣ ಹಿರಿಯ ತಿಮ್ಮಣ್ಣ ನಾಯಕ ಚಿತ್ರದುರ್ಗ ಸಂಸ್ಥಾನದ ಮೊದಲ ದೊರೆ ಮತ್ತು ತಿಮ್ಮಣ್ಣನನ್ನು ಹಿರಿಯ ತಿಮ್ಮಣ್ಣನಾಯಕ ಎಂದು ಕರೆದಿರುವ ಸಾಧ್ಯತೆಯಿದೆ.

ಚಿತ್ರದುರ್ಗ ಸಾಮ್ರಾಜ್ಯದ ಎರಡನೇ ದೊರೆಯಾದ ಓಬಣ್ಣನಾಯಕನನ್ನು ಬಿ.ರಾಜಶೇಖರಪ್ಪ ನವರು, "೧ನೇ ಮದಕರಿನಾಯಕ ಎಂದೂ ಇವರಿಬ್ಬರೂ ಬೇರೆ- ಬೇರೆ ಅಲ್ಲ ಒಬ್ಬನೇ ಆಗಿದ್ದಾನೆ ಎಂದು ಹೇಳುತ್ತಾರೆ."[೨೨] ಆದರೆ "ಕಡಲೆಗುದ್ದು ಗ್ರಾಮದ ಶಾಸನ"[೨೩] "ಕ್ಯಾಸಾಂಪುರದ ತಾಮ್ರಶಾಸನ"[೨೪] ಹಾಗೂ "ರೊಟ್ಟಿಹಳ್ಳಿಯ ಶಾಸನ"[೨೫] ಮುಂತಾದ ಶಾಸನಗಳಲ್ಲಿ ಕಾಮಗೇತಿ ಓಬಣ್ಣನಾಯಕನ ಮಗ ಮದಕರ ನಾಯಕ ಎಂಬುದಾಗಿ ಚಿತ್ರಿತವಾಗಿದೆ. ಈ ಶಾಸನಗಳು ರಚಿತವಾಗಿವೆ ಎನ್ನುವ ಕಾಲದಗೊಂದಲ ಇದಕ್ಕೆ ಕಾರಣವಿರಬೇಕು ಎನಿಸುತ್ತದೆ. ಇತಿಹಾಸದ ಪುಟಗಳಲ್ಲಿ ಧೈರ್ಯಶೌರ್ಯಗಳಿಗೆ ಹೆಸರಾದ ಚಿತ್ರದುರ್ಗದ ಸಮ್ರಾಜ್ಯವನ್ನು ಎರಡು ಸಂತತಿಯವರು ಆಳ್ವಿಕಯ ಮೊದಲನೆಯದು ಮತ್ತಿ ಸಂತತಿ ಈ ಸಂತತಿಯವರು ಚಿತ್ರದುರ್ಗ ಸಂಸ್ಥಾನವನ್ನು ಆಳ್ವಿಕೆ ಮಾಡಿದ್ದಾರೆ. ಮೊದಲನೆಯ ಮತ್ತಿಸಂತತಿ ಈ ಸಂತತಿಯವರು ಚಿತ್ರದುರ್ಗ ಸಂಸ್ಥಾನವನ್ನು ಮೊದಲನೆಯ ದೊರೆಯಾದ ಮತ್ತಿ ತಿಮ್ಮಣ್ಣನಾಯಕನಿಂದ ಆರಂಭಗೊಂಡು ಲಿಂಗಣ್ಣ ನಾಯಕನವರಿಗೆ ಆಳ್ವಿಕೆ ನಡೆಸಿದರೆ. ನಂತರದಲ್ಲಿ ಬಿಳಿಚೋಡು ಸಂತತಿಯವರು ಅಂದರೆ ಬಿಚ್ಚುಗತ್ತಿ ಭರಮ್ಮಣನಾಯಕ ನಿಂದ ಮೊದಲ್ಗೊಂಡು ಕೊನೆಯ ರಾಜಾ ಮದಕರಿನಾಯಕನವರೆಗೆ ಆಳ್ವಿಕೆ ನೆಡೆಸಿರುವುದನ್ನು ಕಾಣಬಹುದು. ಈ ಎರಡೂ ಸಂತತಿಯ ಕಾಮಗೇತಿ ಅರಸರು ಸುಮಾರು ಇನ್ನೂರುಕ್ಕೂ ಹೆಚ್ಚು ವರ್ಷಗಳ ಕಾಲ ಚಿತ್ರದುರ್ಗವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದರು ಎಂಬುದು ಸ್ಪಷ್ಟ.

ಚಿತ್ರದುರ್ಗದ ನಾಯಕರ ಪುನಾರಚಿತ ವಂಶಾವಳಿ

ಮತ್ತಿಸಂತತಿ

ಕಾಮಗೇತಿ ಹನುಮನಾಯಕ

ಮತ್ತಿ ತಿಮ್ಮಣ್ಣ ನಾಯಕ   ಓಬ್ಬಣ್ಣನಾಯಕ

ಓಬಣ್ಣ (೧ನೇ ಮದಕರಿ) ನಾಯಕ

೧ನೇ ಕಸ್ತೂರಿ ರಂಗಪ್ಪನಾಯಕ

ಇಮ್ಮಡಿ ಮದಕರಿನಾಯಕ   ಸರ್ಜಾನಾಯಕ

ಓಬಣ್ಣನಾಯಕ   ಲಿಂಗಣ್ಣ(ಮುಮ್ಮಡಿಮದಕರಿ)ನಾಯಕ   ಚಿಕ್ಕಣ್ಣ ನಾಯಕ

ಬಿಳಿಚೋಡು ಸಂತತಿ

|

ಬಿಚ್ಚುಗತ್ತಿ ಭರಮಣ್ಣನಾಯಕ

|

ಹಿರೇ ಮದಕರಿ ನಾಯಕ

|

ಇಮ್ಮಡಿ ಕಸ್ತೂರಿ ರಂಗಪ್ಪನಾಯಕ — ರಾಜಾಮದಕರಿನಾಯಕ

೪.೩. ಚಿತ್ರದುರ್ಗ ನಾಯಕರ ಶಾಸನಗಳು

ಭಾರತ ಇತಿಹಾಸದಲ್ಲಿಯೇ ಶತ್ರುಗಳ ದಾಳಿಯನ್ನು ಯಶಸ್ವಿಯಾಗಿ ಎದುರಿಸಿದ ಹಾಗೂ ಯುದ್ಧ ತಂತ್ರಗಳ ದೃಷ್ಠಿಯಿಂದ ಕಟ್ಟಲ್ಪಟ್ಟ ಬಲಿಷ್ಠ ದುರ್ಗವೆಂದರೆ ಅದು ಚಿತ್ರದುರ್ಗ ಎಂದು ಹೇಳಬಹುದಾಗಿದೆ. ಇಂತಹ ಐತಿಹಾಸಿಕ ದುರ್ಗವನ್ನು ಅನೇಕ ರಾಜ ಮನೆತನಗಳು ಆಳ್ವಿಕೆ ನೆಡೆಸಿದ್ದು ಮೌರ್ಯರಿಂದಲೂ ಇಲ್ಲಿ ಆಳ್ವಿಕೆ ನೆಡೆದಿದೆ ಎಂಬುದನ್ನು ಶಾಸನಗಳಿಂದ ಗುರುತಿಸಲಾಗಿದು. ಇಂತಹ ಅರಸು ಮನೆತನಗಳ ಆಳ್ವಿಕೆಯಲ್ಲಿ ಚಿತ್ರದುರ್ಗದಲ್ಲಿ ಹೆಚ್ಚು ಪ್ರಭುತ್ವಶಾಲಿಯಾಗಿ ಗುರಿತಿಸಿ ಕೋಂಡವರೆಂದರೆ ಅದು ಚಿತ್ರದುರ್ಗದ ಪಾಳೆಯಗಾರರು ಎಂದು ಹೇಳಬಹುದು.

ಇಂತಹ ಇತಿಹಾಸ ಪ್ರಸಿದ್ದವಾದ ದುರ್ಗವು ಒಂದು ಜಿಲ್ಲೆಯಾಗಿದ್ದು. ಈ ಜಿಲ್ಲೆಯಲ್ಲಿ ಆರು ತಾಲೂಕುಗಳನ್ನೊಗೊಂಡಿದ್ದು ಅವುಗಳೆಂದರೆ. ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಮೊಳಕಾಲ್ಮೂರು, ಹೊಸದುರ್ಗ, ಹೊಳಲ್ಕೆರೆ ಈ ಪ್ರದೇಶದಲ್ಲಿ ಚಿತ್ರದುರ್ಗದ ನಾಯಕರ ಆಳ್ವಿಕೆಗೆ ಸಂಬಂಧಿಸಿದಂತೆ ಶಾಸನಗಳ ದೊರಕಿವೆ. ಈ ಆರು ತಾಲೂಕುಗಳಿಂದ ಒಟ್ಟು ೩೮ ಶಾಸನಗಳು ಚಿತ್ರದುರ್ಗ ನಾಯಕರಿಗೆ ಸಂಬಂಧಿಸಿದಂತೆ ಶಾಸನಗಳಾಗಿದ್ದು. ಈ ನಾಯಕರಿಗೆ ಸಂಬಂಧಿಸಿದ ಶಾಸನಗಳು ಹೆಚ್ಚಾಗಿ ಚಿತ್ರದುರ್ಗ ಜಿಲ್ಲೆಯಲ್ಲಿಯೆ ಕಂಡುಬಂದಿವೆ. ಈ ಶಾಸನಗಳ ಆಧಾರದಿಂದ ಚಿತ್ರದುರ್ಗದಲ್ಲಿ ಈ ನಾಯಕರ ಪ್ರಾಬಲ್ಯ ಅವರ ಆಡಳಿತ, ಸಾಧನೆಗಳನ್ನು ಗಮನಿಸಬಹುದಾಗಿದ್ದು. ದೊರೆತ ಶಾಸನಗಳಲ್ಲಿ ಚಿತ್ರದುರ್ಗ ತಾಲೂಕಿನಲ್ಲಿ ೧೪ ಶಾಸನಗಳು, ಹೊಳಲಕೆರೆ ತಾಲೂಕಿನಲ್ಲಿ ೧೧ ಶಾಸನಗಳು ಹಿರಿಯೂರು ತಾಲೂಕಿನಲ್ಲಿ ೧೦ ಶಾಸನಗಳ ಚಳ್ಳಕೆರೆ ತಾಲೂಕಿನಲ್ಲಿ ೨ ಶಾಸನ ಹಾಗೂ ಹೊಸದುರ್ಗ ತಾಲೂಕಿನಲ್ಲಿ ೧ ಶಾಸನ ಚಿತ್ರದುರ್ಗ ನಾಯಕರಿಗೆ ಸಂಬಂಧಿಸಿದ್ದಾಗಿದ್ದು. ಈ ಪ್ರದೇಶದ ಚಿತ್ರದುರ್ಗದ ನಾಯಕರ ಚರಿತ್ರೆಯನ್ನು ತಿಳಿಯಲು ಈ ಶಾಸನಗಳು ಸಹಾಯಕವಾಗಿವೆ.

೪.೩.೧. ಚಿತ್ರದುರ್ಗ ತಾಲೂಕಿನ ನಾಯಕರ ಶಾಸನಗಳು

ಚಿತ್ರದುರ್ಗ ಜಿಲ್ಲೆಯ ಪ್ರಸ್ತುತ ಆರು ತಾಲೂಕುಗಳಲ್ಲಿ ಒಂದಾದ ಚಿತ್ರದುರ್ಗ ತಾಲೂಕಿನಲ್ಲಿ ನಾಯಕರಿಗೆ ಸಂಬಂಧಿಸಿದಂತೆ ಒಟ್ಟು ೧೪ ಶಾಸನಗಳು ದೊರೆತದ್ದು ದೊರೆತ ಶಾಸನಗಳಲ್ಲಿ ಹೆಚ್ಚು

ಶಾಸನಗಳು ಸಿಕ್ಕಿರುವುದು ಇದೇ ತಾಲೂಕಿನಲ್ಲಿ ಎಂದು ಹೇಳಬಹುದು. ಈ ಶಾಸನಗಳಲ್ಲಿ ೧೨ ಶಿಲಾಶಾಸನಗಳಾದರೆ ೨ ತಾಮ್ರ ಶಾಸನಗಳು ದೊರೆಕಿವೆ. ಈ ಶಾಸನಗಳ ಪ್ರಕಾರ ಚಿತ್ರದುರ್ಗದ ಪಾಳೆಗಾರರೆನಿಸಿದ,

- ಹನುಮನಾಯಕ
- ಕಸ್ತೂರಿ ರಂಗಪ್ಪ ನಾಯಕ
- ಇಮ್ಮಡಿ ಮದಕರಿನಾಯಕ
- ಭರಮಣ್ಣನಾಯಕ
- ಓಬಣ್ಣನಾಯಕ
- ಚಿಕ್ಕಣ್ಣನಾಯಕ
- ಮದಕರಿನಾಯಕ

ಇವರ ಹೆಸರಿಗೆ ಸಂಬಂದಿಸಿದ ಶಾಸನಗಳ ದೊರೆತದ್ದು. ಇವರು ಚಿತ್ರದುರ್ಗ ತಾಲೂಕಿನಲ್ಲಿ ಮಾಡಿದ ಮತ್ತು ಇವರ ಸಾಧನೆಗಳನ್ನು ತಿಳಿಯಲು ಸಹಾಯಕವಾಗಿದೆ. ಹಾಗೆಯೆ ದೊರತ ಶಾಸನಗಳಲ್ಲಿ ವಿಜಯನಗರದ ಅರಸರ ಕಾರ್ಯಕರ್ತರಾಗಿ ಆಡಳಿತ ನೆಡೆಸಿದ್ದರು ಎಂಬುದನ್ನು ತಿಳಿಸುವಂತ ಕೆಲವು ಶಾಸನಗಳ ದೊರೆತಿದ್ದು. ಚಿತ್ರದುರ್ಗದ ನಾಯಕರು ವಿಜಯನಗರದ ಅರಸರ ಕಾರ್ಯಕರ್ತರಾಗಿ ಇನ್ನು ಆಡಳಿತ ನೆಡೆಸುತ್ತಿದ್ದರು ಎಂಬುದನ್ನು ತಿಳಿಯಲಾಗಿದ್ದು ಅಂತಹ ವಿಜಯನಗರದ ಅರಸರುಗಳೆಂದರೆ. ಶ್ರೀರಂಗರಾರ್ಯ ಮತ್ತು ವೆಂಕಟಪತಿ ಮಹಾರಾಯ ಶ್ರೀರಂಗರಾಯನ ಕಾರ್ಯಕರ್ತರಾಗಿ ಚಿತ್ರದುರ್ಗದ ಪಾಳೆಗಾರನಾದ ಕಸ್ತೂರಿ ರಂಗಪ್ಪನಾಯಕನ ಮಗನಾದ ಇಮ್ಮಡಿ ಮದಕರಿನಾಯಕನ್ನು ಆಡಳಿತನೆಡೆಸಿರವುದು ನಮಗೆ "ಕಡಲೆಗುದ್ದು ಗ್ರಾಮದಲ್ಲಿ ಆಂಜನೇಯ ದೇವಸ್ಥಾನ ದಲ್ಲಿ ದೊರೆತ ಶಾಸನದಿಂದ ದೊರೆಯುತ್ತದೆ."[೨೬] ಹಾಗೆಯೇ "ಕ್ಯಾಸಾಪುರದ ಶ್ಯಾನುಭೋಗ ರಾಮಣ್ಣನವರಲ್ಲಿದ ತಾಮ್ರ ಶಾಸನದಿಂದಲೂ"[೨೭] ಇಮ್ಮಡಿ ಮದಕರಿನಾಯಕನು ವಿಜಯನಗರ ಅರಸರ ಕಾರ್ಯಕರ್ತನಾಗಿ ಆಡಳಿತ ನೆಡೆಸಿದ್ದನು ಎಂಬುದು ತಿಳಿದುಬರುತ್ತದೆ.

ವೆಂಕಟಪತಿ ಮಹಾರಾಯ ಕಾರ್ಯಕರ್ತರಾಗಿ ಚಿಕ್ಕಣ್ಣನಾಯಕನು ಆಳ್ವಿಕೆ ನೆಡೆಸಿದರೆ ಚಿಕ್ಕಣ್ಣನಾಯಕನ ಪಾರುಪತ್ಯಗಾರನಾಗಿ ಬಿಳಿಚೋಡು ಸೀಮೆಯ ಸೀರೆಯ ಮಲ್ಲಿಶೆಟ್ಟಿಯ ಅಳ್ವಿಕೆ ನೆಡೆಸುತ್ತಿದ್ದನು. ಎಂಬುದನ್ನು ಬಿ.ಎಲ್.ರೈಸ್ ರವರ ಬೆವಿನಹಳ್ಳಿ ಗ್ರಾಮದ ಬಸವನ ಗುಡಿಯ

ಪ್ರಕಾರದಲ್ಲಿ ದೊರತ ಶಾಸನದಿಂದ ತಿಳಿದುಬರುತ್ತದೆ. ಚಿತ್ರದುರ್ಗ ತಾಲೂಕಿನ ದೊರತ ಶಾಸನಗಳಲ್ಲಿ ನಾವು ಗಮನಿಸಿದ್ದಂತೆ

- ದಾನಕ್ಕೆ ನೀಡಿರುವ ವಿಷಯಕ್ಕೆ ಸಂಬಂಧಿಸಿದಂತೆ ಶಾಸನಗಳೂ ದೊರೆತಿವೆ.
- ನ್ಯಾಯಡಾಳಿತಕ್ಕೆ ಸಂಬಂದಿಸಿದಂತೆ ಶಾಸನಗಳು ಕಂಡುಬಂದಿವೆ.
- ಊರಿನ ಗೌಡಿಕೆಗೆ ಸಂಬಂದಿಸಿದಂತೆ ಶಾಸನಗಳು ಕಂಡುಬಂದಿವೆ.
- ಅಗ್ರಹಾರಕ್ಕೆ ಸಂಬಂಧಿಸಿದಂತೆ ಶಾಸನಗಳು ಕಂಡುಬಂದಿವೆ.
- ಸಾಮಾಜಿಕ ಕಾರ್ಯಗಳಾದ, ಕೆರೆಯ ನಿರ್ಮಾಣ, ತೆರಿಗೆ ಬಿಟ್ಟಿದ್ದರ ಬಗ್ಗೆ, ಊರು ನಿರ್ಮಾಣ ಮಾಡಿದ್ದರ ಬಗ್ಗೆ, ಊರಿನಲ್ಲಿ ಸಾಲು ಮರಗಳನ್ನು ಹಾಕಿಸಿದ್ದರ ಬಗ್ಗೆ, ಈ ತಾಲೂಕಿನಲ್ಲಿ ದೊರೆತ ಶಾಸನಗಳಿಂದ ತಿಳಿದುಬರುತ್ತವೆ. ಈ ರೀತಿಯಲ್ಲಿ ಶಾಸನಗಳು ವಿವಿಧ ವಿಚಾರಗಳ ಮೇಲೆ ಬೆಳಕು ಚೆಲ್ಲಿರುವುದನ್ನು ಈ ತಾಲೂಕಿನ ಶಾಸನಗಳಲ್ಲಿ ಕಾಣಬಹುದಾಗಿದೆ.

ಚಿತ್ರದುರ್ಗ ತಾಲೂಕಿನಲ್ಲಿ ದೊರೆತ ಶಾಸನಗಳಲ್ಲಿ ಆರು ಶಾಸನಗಳು ದಾನಕ್ಕೆ ಸಂಬಂದ ಪಟ್ಟಂತವಾಗಿದ್ದು ದಾನಕ್ಕೆ ಹೆಚ್ಚು ಮಹತ್ವ ನೀಡಿರುವುದು ನಾವು ಗಮನಿಸಬಹುದು ಅಂತಹ ದಾನಗಳನ್ನು ನೋಡಬಹುದು ಚಿತ್ರದುರ್ಗ ಶಾಸನಗಳಲ್ಲಿ ದಾನಕ್ಕೆ ಸಂಬಂಧ ಪಟ್ಟಂತೆ ದೊರೆತ ಶಾಸನಗಳು.

- ಶೃಂಗೇರಿ ಮಠಕ್ಕೆ ಬಾಗಿಲುದಾನ(ಶಾ.ಸಂ.೫೧)
- ವೀರಭದ್ರ ದೇವಾಲಯಕ್ಕೆ ಹಣದದಾನ(ಶಾ.ಸ.೨೨)
- ವೆಂಕಟರಮಣಸ್ವಾಮಿಗೆ ಪಿಳ್ಳೆಕೆರೆ ಗ್ರಾಮದಾನ(ಶಾ.ಸಂ.೩೧)
- ಶಿಂಗನಗಿರಿದುರ್ಗಕ್ಕೆ ಯೆರೆಹೊಲದಾನ(ಶಾ.ಸಂ.೩೭)
- ಹನುಮಂತ ದೇವರಗುಡಿ ಕಟ್ಟಲು ವ್ಯಕ್ತಿಗಳಿಗೆ(ಬಡಗಿ) ಭೂಮಿದಾನ(ಶಾ.ಸಂ.೪೮)
- ಗೋಪಾಲಸ್ವಾಮಿ ರಥೋತ್ಸವಕ್ಕೆ ಮತ್ತು ಗುಡಿಕಾವಲು ಕಾರ್ಯಕ್ಕೆ ತೋಪದಾಸನ ನೇಮಕ ಮತ್ತು ಅವನಿಗೆ ಭೂಮಿದಾನ(ಶಾ.ಸಂ. ೭)

ನ್ಯಾಯಡಳಿತಕ್ಕೆ ಸಂಬಂದ ಪಟ್ಟ ಶಾಸನಗಳು

- ಅಪರಾಧಕ್ಕಾಗಿ ಪೂಜಾರಿಗೆ ದಂಡ ಉತ್ಸವದ ಜವಬ್ದಾರಿಯನ್ನು ಇನ್ನೊಬ್ಬ ವ್ಯಕ್ತಿಗೆ ವಹಿಸಿರುವುದು.(ಶಾ.ಸಂ.೨೨)

- ರೊಟ್ಟಿಹಳ್ಳಿಯ ಗೌಡಿಕೆಯನ್ನು ೨೦೦ ವರಹಗಳಿಗೆ ವಿಕ್ರಮ ಮಾಡಿಕೊಂಡ ವಿಷಯವನ್ನು ತಿಳಿಸುತ್ತವೆ. (ಶಾ.ಸ.೪೮)

ಚಿತ್ರದುರ್ಗ ತಾಲೂಕಿನ ಶಾಸನಗಳಲ್ಲಿ ಅಗ್ರಹಾರಕ್ಕೆ ಸಂಬಂಧಿಸಿದಂತೆ ಮೂರು ಶಾಸನಗಳು ದೊರೆತಿವೆ. ಇದರ ಜೊತೆಯಲ್ಲಿ ಸಾಮಾಜಿಕ ಕಾರ್ಯಗಳಿಗೆ ಸಂಬಂಧಿಸಿದಂತೆ ಶಾಸನಗಳು ದೊರೆತಿರುವುದನ್ನು ನಾವು ಈ ತಾಲೂಕಿನಲ್ಲಿ ದೊರೆತ ಶಾಸನಗಳಲ್ಲಿ ಕಾಣಬಹುದಾಗಿದೆ. ಅಂತಹ ಸಾಮಾಜಿಕ ಕೆಲಸಗಳನ್ನು ಕುರಿತಂತೆ ಶಾಸನಗಳೆಂದರೆ

- ಕೆರೆಯ ನಿರ್ಮಾಣ ಕುರಿತಂತೆ ಓಬಣ್ಣನ ಶಿಲಾಶಾಸನದಲ್ಲಿ ನೋಡಬಹುದು
- ತೆರಿಗೆ ಬಿಟ್ಟಿದ್ದರ ಬಗ್ಗೆ ಶಾ.ಸಂ.೮೦ರ ಶಾಸನದಲ್ಲಿ ಗಮನಿಸಬಹುದು
- ಓಬಣ್ಣನಹಳ್ಳಿ ಎಂಬ ಊರು ನಿರ್ಮಾಣ ಮಾಡಿರುವುದರ ಬಗ್ಗೆ ಶಾಸನ ದೊರೆತಿದೆ ಈ ಊರಿನಲ್ಲಿ ಸಾಲುಮರಗಳನ್ನು ಹಾಕಿಸಿರುವುದು ಇದೇ ಶಾಸನದಿಂದ ದೊರೆಯುತ್ತದೆ.

ಚಿತ್ರದುರ್ಗ ತಾಲೂಕಿನ ಶಾಸನಗಳ ಮೂಲಕ ದಾನ, ನ್ಯಾಯಾಡಳಿತ, ಧಾರ್ಮಿಕ ಮತ್ತು ಸಾಮಾಜಿಕ ವಿಷಯಯಗಳನ್ನು ಕುರಿತಂತೆ ಒಟ್ಟು ಹದಿನಾಲ್ಕು ಶಾಸನಗಳು ದೊರೆತಿದ್ದು, ಈ ಶಾಸನಗಳ ಮೂಲಕ ಚಿತ್ರದುರ್ಗ ನಾಯಕರ ಆಡಳಿತ ಮತ್ತು ಅವರು ಮಾಡಿದ ಸಾಧನೆಗಳನ್ನು ತಿಳಿಯಲು ಈ ಶಾಸನಗಳು ತುಂಬ ಉಪಯುಕ್ತವಾಗಿವೆ ಎಂದೂ ಹೇಳಬಹುದು.

೪.೩.೨. ಹಿರಿಯೂರು ತಾಲೂಕಿನ ನಾಯಕರ ಶಾಸನಗಳು

ಚಿತ್ರದುರ್ಗ ಜಿಲ್ಲೆಯ ಪ್ರಮುಖ ಐತಿಹಾಸಿಕ ನಗರಗಳಲ್ಲಿ ಹಿರಿಯೂರು ಸಹ ಒಂದಾಗಿದೆ. ಇದು ಮಧ್ಯಕಾಲೀನ ಕರ್ನಾಟಕದಲ್ಲಿ ಒಂದು ಮುಖ್ಯ ನಗರವಾಗಿದ್ದಿತು. ೧೬ನೇಯ ಶತಮಾನದ ಪ್ರಾರಂಭದಲ್ಲಿ ಮಾಯಸಂದ್ರದ ದೊರೆ ಕೇಶವನಾಯಕನು ಹಿರಿಯೂರನ್ನು ಸ್ಥಾಪಿಸಿದನು. ಈ ಊರಿನ ಸ್ಥಾಪನೆಯ ಬಗ್ಗೆ ಮೊದಲು ಬೇಟೆನಾಯಿಗಳನ್ನು ಅಟ್ಟಿಸಿಕೊಂಡು ಹೋದ ಸ್ಥಳವೆಂದು ಕಥೆ ಹೇಳುತ್ತಾರೆ. ಹದಿನಾರನೆಯ ಶತಮಾನದಲ್ಲಿ ಊರು ಬೆಳೆಯುತ್ತಾ ಹೋಯಿತು. ಬಿಜಾಪೂರದ ಸುಲ್ತಾನರು ಹಿರಿಯೂರನ್ನು ಗೆದ್ದು ಕೊಂಡಿದ್ದರು. ಚಿತ್ರದುರ್ಗದ ಪಾಳೆಯಗಾರರು ಮೊದಲು ಹಿರಿಯೂರಿನ ನಾಯಕರಾಗಿದ್ದರು. "೧೭೬೨ರಲ್ಲಿ ಹೈದರಾಲಿಯೂ ಹಿರಿಯೂರನು ವಶಪಡಿಸಿ ಕೊಂಡನು. ಮರಾಠರರು ಈ ಊರಿನ ಮೇಲೆ ಅನೇಕ ಬಾರಿ ದಾಳಿಯನ್ನು ನೆಡೆಸಿದರು. ಊರನ್ನು ನದಿಯ ಇನ್ನೊಂದು ದಂಡೆಗೆ ವರ್ಗಾಯಿಸಲು ಮಾಡಿದ ಪ್ರಯತ್ನವು ಯಶಸ್ವಿಯಾಗಲಿಲ್ಲ. ಕೆಲವು ದಶಕಗಳ ನಂತರ ಹಿರಿಯೂರು ಮತ್ತೆ ಚೇತರಿಸಿಕೊಂಡಿತು."[೨೮]

ಹಿರಿಯೂರಿನಲ್ಲಿರುವ ಮುಖ್ಯ ಸ್ಮಾರಕವೆಂದರೆ ತೇರುಮಲ್ಲೇಶ್ವರ ದೇವಸ್ಥಾನ ೧೪೬೬ ರಲ್ಲಿ ಕೆಂಚಪ್ಪನಾಯಕನು ಈ ದೇವಾಲಯವನ್ನು ನಿರ್ಮಿಸಿದನು. ಚಿತ್ರದುರ್ಗದ ಪಾಳೆಗಾರ ದೇವಾಲಯದ ದೊಡ್ಡ ಶಿಖರವನ್ನು ನಿರ್ಮಿಸಿದರು. ದ್ರಾವಿಡ ಶೈಲಿಯ ಈ ಶಿಖರ ೪೫ ಅಡಿ ಎತ್ತರವಾಗಿದೆ. ಮಹಾದ್ವಾರದ ಮುಂದೆ ಉನ್ನತವಾದ ಕಂಬಗಳಿವೆ ಮಹಾದ್ವಾರವನ್ನು ಪ್ರವೇಶಿಸಿದರೆ ವಿಶಾಲವಾದ ಪೌಳಿಯನ್ನು ಕಾಣಬಹುದು.

ದೇವಸ್ಥಾನದ ಮುಖಮಂಟಪವನ್ನು ಮೂರು ಕಡೆಯಿಂದ ಪ್ರವೇಶಿಸಬಹುದು. ಮುಖಮಂಟಪದ ಮುಂದಿನ ಬಾಗಿಲ ಎದುರು ಸುಮಾರು ೪೫ ಅಡಿ ಎತ್ತರದ ಶಿಲೆಯ ಅಪೂರ್ವ ಕಲಾಕೌಶಲ್ಯದ ದೀಪಸ್ಥಂಭವಿದೆ ಮೇಲೆ ಪ್ರತಿದಿಕ್ಕಿಗೆ ಎರಡರಂತೆ ಎಂಟು ಲೋಹದದೀಪಗಳಿವೆ ಪ್ರತಿ ದೀಪವು ೧೦ ಸೇರು ಎಣ್ಣೆ ಇಡಿಯೂವಷ್ಟು ದೊಡ್ಡದು. ಶೀಲಸ್ತಂಭದ ಮುಂಭಾಗದಲ್ಲಿ ಕೈಮುಗಿದುಕೊಂಡು ನಿಂತಿರುವ ಶಿಲಾವಿಗ್ರಹವಿದೆ. ಇದು ದೇವಾಸ್ಥನವನ್ನು ನಿರ್ಮಿಸಿದವರ ವಿಗ್ರಹವಿರಬೇಕೆಂದು ಊಹಿಸಲಾಗಿದೆ. ಮುಖಮಂಟಪದ ಒಳಮೈಮೇಲೆ ಶಿನಪುರಾಣ,ಕಿರಾತಾರ್ಜುನ, ಗಿರಿಜಾಕಲ್ಯಾಣ, ಗೋಕರ್ಣ ಮಹಿಮೆಗೆ ಸಂಬಂಧಿಸಿದ ಜಲವರ್ಣ ಭಿತ್ತಿಚಿತ್ರಗಳನ್ನ ರಚಿಸಲಾಗಿದೆ. ಇದನ್ನ ದಕ್ಷಿಣಕಾಶಿ ಎಂದು ಕರೆಯುವುದು ವಾಡಿಕೆಯಾಗಿದೆ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲೂ ಹಿರಿಯೂರು ತನ್ನದೆ ಆದ ಕೊಡುಗೆ ನೀಡಿದೆ. ಪರಶುರಾಮ, ರಾಮಾಯಣ ಕಾವ್ಯಗಳನ್ನು ರಚಿಸಿದ ಕವಿಯು ತನ್ನ ಕಾವ್ಯದ ಕೆಲವು ಪದ್ಯಗಳಲ್ಲಿ ತೀರುಮಲ್ಲೇಶ್ವರನನ್ನ ಕುರಿತು ಹಾಡಿ ಹೊಗಳಿದ್ದಾರೆ. ಹಿರಿಯೂರಿನ ಶಾನುಭೋಗರು ಈ ಕವಿಯ ವಂಶದವರಾಗಿದ್ದಾರೆ. "ದಂಡಿಯ ಕಾವ್ಯಾದರ್ಶವನ್ನು ಕನ್ನಡದಲ್ಲಿ ರಚಿಸಿದ ಮಾಧವನೆಂಬ ಕವಿಯು ತಾನು ಹಿರಿಯೂರಿನ ಪ್ರಭುವೆಂದು ಹೇಳಿಕೊಂಡಿದ್ದಾನೆ."[೬] ಈ ರೀತಿಯಲ್ಲಿ ಇತಿಹಾಸ ಹೊಂದಿರುವ ಹಿರಿಯೂರು ಚಿತ್ರದುರ್ಗ ಜಿಲ್ಲೆಯ ತಾಲೂಕು ಕೂಡ ಹೌದು. ಈ ತಾಲೂಕಿನಲ್ಲಿ ಚಿತ್ರದುರ್ಗನಾಯಕರಿಗೆ ಸಂಬಂದಿಸಿದಂತೆ. ಹತ್ತು ಶಾಸನಗಳು ದೊರೆತಿವೆ. ೧೫ನೇ ಶತಮಾನದಿಂದಲ್ಲೆ ಚಿತ್ರದುರ್ಗದ ನಾಯಕರ ಶಾಸನಗಳು ಇಲ್ಲಿ ದೊರೆತಿದೆ. ಚಿತ್ರದುರ್ಗದ ಮೂಲ ಪುರುಷ ಮತ್ತಿ ತಿಮ್ಮಣ್ಣ ನಾಯಕ ಶಾಸನವು ಇಲ್ಲಿ ದೊರೆಯುತ್ತದೆ. ಈ ಶಾಸನಗಳ ದೊರೆತ ಅಧಾರದ ಮೇಲೆ ಈ ತಾಲೂಕಿನಲ್ಲಿ

- ತಿಮ್ಮಣನಾಯಕ
- ಮದಕರಿನಾಯಕ (ಭರಮಣ್ಣನಾಯಕ ಪುತ್ರ)
- ಕಸ್ತೂರಿ ಚಿಕ್ಕಣ್ಣನಾಯಕ
- ಕಸ್ತೂರಿ ರಂಗಪ್ಪನಾಯಕ
- ರಾಜಾ ಮದಕರಿನಾಯಕ (ಕಸ್ತೂರಿ ರಂಗಪ್ಪನಾಯಕನ ಪುತ್ರ)

ಇವರುಗಳು ಆಳ್ವಿಕೆ ಮಾಡಿದರು ಎಂಬುದಕ್ಕೆ ಇವರ ಶಾಸನಗಳು ಹಿರಿಯೂರು ತಾಲೂಕಿನಲ್ಲಿ ದೊರೆಯುತ್ತವೆ. ಹಾಗೆಯೇ ವಿಜಯನಗರ ಅರಸರ ಕಾರ್ಯಕರ್ತರಾಗಿ ಆಡಳಿತ ನೆಡೆಸಿದ್ದರು ಎಂಬುದಕ್ಕೂ ಕೆಲವು ಶಾಸನಗಳು ಈ ತಾಲೂಕಿನಲ್ಲಿ ಕೂಡ ದೊರೆತಿವೆ.

ವಿಜಯನಗರದ ಅರಸರು ಮತ್ತು ಅವರ ಕಾರ್ಯಕರ್ತರಾಗಿ ಆಡಳಿತ ನೆಡೆಸಿದ ಚಿತ್ರದುರ್ಗದ ನಾಯಕರು ಎರದಿಂಮ ರಾಜನ ಕಾರ್ಯಕರ್ತನಾಗಿ ಚಿತ್ರದುರ್ಗದ ನಾಯಕ ಕಸ್ತೂರಿ ರಂಗಪ್ಪನಾಯಕನು ಆಡಳಿತ ನಡೆಸಿರುವುದು ರೈಸ್ ಸಂಪುಟ ೪೦ನೇ ಶಾಸನ ಹಳೆವೂರಿನ ವೀರಭದ್ರದೇವಲಯದ ಮುಂಭಾಗದಲ್ಲಿ ದೊರೆತ ಶಾಸನದಿಂದ ತಿಳಿದುಬರುತ್ತದೆ. ಹಾಗೆಯೇ ಸದಾಶಿವರಾಯರ ಕಾರ್ಯಕರ್ತರಾಗಿ ಕಾಮಗೇತಿ ತಿಮ್ಮಣ್ಣನಾಯಕನು ಆಡಳಿತ ನೆಡೆಸಿರುವುದನ್ನು ಹಿರಿಯೂರಿನಲ್ಲಿ ದೊರೆತ ಶಾಸನದಲ್ಲಿ ಕಾಣಬಹುದು.

ಈ ತಾಲೂಕಿನಲ್ಲಿ ದೊರೆತ ಶಾಸನಗಳನ್ನು ಗಮನಿಸಿದರೆ ಈ ಶಾಸನಗಳು

- ದಾನ ನೀಡಿರುವ ವಿಷಯಕ್ಕೆ ಸಂಬಂದಿಸಿದಂತೆ ಶಾಸನ ದೊರೆತಿವೆ.
- ಅಗ್ರಹಾರ ವಿಚಾರಕ್ಕೆ ಸಂಬಂಧಿಸಿದಂತೆ ಶಾಸನಗಳು ದೊರೆತಿವೆ.
- ಸಾಮಾಜಿಕ ಕಾರ್ಯಗಳಿಗೆ ಸಂಬಂದಿಸಿದಂತೆ ಶಾಸನಗಳು ದೊರೆತಿವೆ.

ದಾನಕ್ಕೆ ಸಂಬಂದಿಸಿದಂತೆ ನೋಡುವುದಾದರೆ

ಯುದ್ದದಲ್ಲಿ ಗೆದ್ದುದ್ದಕ್ಕಾಗಿ ವ್ಯಕ್ತಿಗೆ ಭೂಮಿದಾನ ನೀಡಿದ ವಿಷಯವನ್ನು ರೈ.ಸಂ. ಶಾ.ಸಂ. ೪೭ ರಲ್ಲಿ ತಿಳಿಯಬಹುದು. ಹಾಗೆಯೇ ತಂದೆ-ತಾಯಿ ಪುಣ್ಯಕ್ಕಾಗಿ ನಾಗೇನಹಳ್ಳಿ ಗ್ರಾಮವನ್ನ ದಾನ ನೀಡಿರುವುದನ್ನ ರೈ.ಸಂ.ಶಾ.ಸಂ.೫೯ ಶಾಸನದಲ್ಲಿ ನೋಡಬಹುದು. ಅದೇ ವಿಷಯವಾಗಿ ಉಪ್ಪಿಲಿಗೆರೆ ಗ್ರಾಮವನ್ನು ದಾನ ನೀಡಿರುವ ವಿಷಯವನ್ನು ರೈ.ಸಂ.ಶಾ.ಸಂ. ೬೦ ರಲ್ಲಿ ಶಾಸನವು ತಿಳಿಸುತ್ತದೆ. ಅರೆಕೆರೆ ಗ್ರಾಮವನ್ನ ದಾನ ನೀಡಿರುವ ವಿಚಾರವನ್ನು ರೈ.ಸಂ.ಶಾ.ಸಂ.೭೫ ಮತ್ತು ೭೬ನೆ ಶಾಸನಗಳು ತಿಳಿಸುತ್ತವೆ.

ಅಗ್ರಹಾರಕ್ಕೆ ಸಂಬಂದಿಸಿದಂತೆಯೂ ಕೂಡ ಶಾಸನಗಳು ದೊರೆತಿದ್ದು. ಅಗ್ರಹಾರವನ್ನು ಜೀರ್ಣೋದ್ದಾರ ಮಾಡಿಸಿದ ವಿಚಾರವನ್ನು ರೈ.ಸಂ.ಶಾ.ಸಂ. ೫೭,೫೮ ಶಾಸನಗಳಲ್ಲಿ ತಿಳಿಯಬಹುದು. ಹಾಗೆ ನಾಕಿಕೇರೆ ಗ್ರಾಮವನ್ನ ಅಗ್ರಹಾರ ಮಾಡಿ ದಾನ ನೀಡಿರುವ ವಿಚಾರವನ್ನ ರೈಸಂ.ಶಾ.ಸಂ.೭೪ರಲ್ಲಿ ತಿಳಿಯಬಹುದು.

ಸಾಮಾಜಿಕ ಕೆಲಸಗಳನ್ನು ಕುರಿತಂತೆ ಶಾಸನಗಳ ಈ ತಾಲೂಕಿನಲ್ಲಿ ದೊರೆತಿವೆ. ಅಂತಹ ಶಾಸನಗಳಲ್ಲಿ ತೆರಿಗೆಯನ್ನ ದೇವಾಲಯದ ಪೂಜೆಗಾಗಿ ಬಿಟ್ಟಿರುವುದು ಶಾ.ಸಂ.೪೦ರಲ್ಲಿ ತಿಳಿಸಿದರೆ. ಅನ್ನ ಛತ್ರ ಮಠಕ್ಕೆ ಗೌಡನಹಳ್ಳಿ ದಾನ ನೀಡಿರುವುದನ್ನು ಶಾ.ಸಂ.೫೩ ರಲ್ಲಿ ನೋಡಬಹುದಾಗಿದೆ.

೪.೩.೩. ಹೊಳಲ್ಕೆರೆ ತಾಲೂಕಿನ ನಾಯಕರ ಶಾಸನಗಳು

೩-೪ನೇ ಶತಮಾನದಲ್ಲಿ ಕದಂಬರಿಗೂ ೧೦ನೇ ಶತಮಾನದಲ್ಲಿ ಸೇವುಣರಿಗೂ ಕ್ರಿ.ಶ.೧೧೦೫ ರಿಂದ ೧೧೪೫ ರಲ್ಲಿ ಹೊಳಲ್ಕೆರೆಯ ನೊಳಂಬವಾಡಿಯ ೩೨೦೦೦-ಎಂಬ ಪ್ರದೇಶದಲ್ಲಿ ಒಳಗೊಂಡಿದ್ದು. ಮಹಾ ಮಂಡಲೇಶ್ವರನಿಂದ ತ್ರಿಭುವನಮಲ್ಲ ಪಾಂಡ್ಯನು.ಕ್ರಿ.ಶ.೧೨೦೦ರ ವರೆಗೆ ವಿಜಯಪಾಂಡ್ಯನು ಆಳಿದ್ದರಿಂದ. ಪಾಂಡ್ಯರ ನಂತರ ಬಂದಂತಹ ಹೊಯ್ಸಳರು ಈ ಹೊಳಲ್ಕೆರೆ ಪ್ರದೇಶವನ್ನು ಪಾಂಡ್ಯನಾಡೆಂದು ಕರೆದರು. ೧೨ನೇ ಶತಮಾನದಿಂದ ೧೨-೧೪ನೇ ಶತಮಾನದಲ್ಲಿ ಹೊಯ್ಸಳರಿಗೂ ಅಲ್ಲಿಂದ ವಿಜಯನಗರದವರಿಗೂ "ಕ್ರಿ.ಶ.೧೫೫೪ರಲ್ಲಿ ವಿಜಯನಗರದರಸರಿಂದ ಚಿತ್ರದುರ್ಗದ ಪಾಳೆಯಗಾರ ಮತ್ತಿ ತಿಮ್ಮಣ್ಣನಾಯಕನಿಗೆ ಅಮರಮಾಗಣಿಗೆ ದೊರತಿದ್ದು. ಮುಂದೆ ಆತ ಚಿತ್ರದುರ್ಗದ ಪಾಳೆಯಗಾರನಾದ ಮೇಲೆ ತನ್ನ ಮೈದುನ ಗುಲ್ಲಿಯಪ್ಪ ನಾಯ್ಕನಿಗೆ ವಹಿಸಿದ."[೩೦]

ಕೆಲವು ಕಾಲ ಹೊಳಲ್ಕೆರೆ ಪ್ರದೇಶದ ಮೇಲೆ ಬಸವಾಪಟ್ಟಣದ ಪಾಳೆಯಗಾರರು ಅಧಿಕಾರ ಸ್ಥಾಪಿಸಿದರು ಆದರೆ ಓಬಣ್ಣನಾಯಕ ನಂತರ ಚಿತ್ರದುರ್ಗದ ಪಾಳೆಯಗಾರನಾಗಿ ಕಸ್ತೂರಿ ರಂಗಪ್ಪನಾಯಕರು ಪಟ್ಟಕ್ಕೆ ಬಂದು ಕ್ರಿ.ಶ.೧೬೫೨ರ ವರೆಗೆ ಆಳಿದ ಈತನ ಆಳ್ವಿಕೆಯಲ್ಲಿ ಅನೇಕ ಕಾಳಗಗಳು ನಡೆದವು ಅದರಲ್ಲಿ ಬಸವಾಪಟ್ಟಣದವರೊಂದಿಗೆ ಈತ ಕಾದಾಡಿ-ಮಾವಿನಕೊಂಡ, ಸಂತೇಬೆನ್ನೂರು, ಅಣಜಿ, ಜಗಲೂರು ಹಾಗೂ ಹೊಳಲ್ಕೆರೆಯನ್ನ ಮತ್ತೆ ಗೆದ್ದು ಚಿತ್ರದುರ್ಗದ ಪಾಳೆಯ ಪಟ್ಟೆಗೆ ಸೇರಿಕೊಂಡ. ಹಿಂದೆ ರಾಜಮಹಾರಾಜರು ದಾನ ದತ್ತಿಗಳನ್ನು ನೀಡುತ್ತಿದ್ದರು. ಅವರು ನೀಡಿದ ದಾನ ದತ್ತಿಗಳನ್ನು-ದಾನ ಪಡೆದವರಷ್ಟೇ ಅಲ್ಲದೇ ಅವರ ಮಕ್ಕಳು ಮೊಮ್ಮಕ್ಕಳಾದಿಯಾಗಿ ಸೂರ್ಯ ಚಂದ್ರರಿರುವವರೆಗೂ ಇದನ್ನ ಬೆಳಸಿಕೊಂಡು ಬರಬೇಕೆಂದು ಅನೇಕ ಕೆಲಸಕಾರ್ಯಗಳನ್ನು ತಿಳಿಸುವಂತೆ ಚಿತ್ರದುರ್ಗದ ಪಾಳೆಗಾರರ ಶಾಸನಗಳು ಹೊಳಲ್ಕೆರೆಯಲ್ಲಿ ದೊರೆತಿವೆ.

ಹೊಳಲಕೆರೆ ತಾಲೂಕಿನಲ್ಲಿ ಚಿತ್ರದುರ್ಗದ ನಾಯಕರಿಗೆ ಸಂಬಂದಿಸಿದಂತೆ ಒಟ್ಟು ೧೧ ಶಾಸನಗಳು ದೊರೆತಿದ್ದು. ಇದರಲ್ಲಿ ೩ ತಾಮ್ರ ಶಾಸನಗಳೂ ಕಂಡುಬಂದಿವೆ.

ಈ ಶಾಸನಗಳ ಆಧಾರದ ಮೇಲೆ ಈ ಪ್ರದೇಶದಲ್ಲಿ

- ಕಸ್ತೂರಿ ರಂಗಪ್ಪನಾಯಕ
- ಭರಮಣ್ಣನಾಯಕ

- ಕಸ್ತೂರಿ ಚಿಕ್ಕಣ್ಣನಾಯಕ
- ಮದಕರಿನಾಯಕ

ಇವರಿಗೆ ಸಂಬಂಧಿಸಿದ ಶಾಸನಗಳು ಈ ತಾಲೂಕಿನಲ್ಲಿ ದೊರೆತಿದ್ದು. ಇತರರು ಹೊಳಲ್ಕೆರೆಯಲ್ಲಿ ನೆಡೆಸಿದ ಆಡಳಿತ ಮತ್ತು ಅವರ ಮಾಡಿದ ಕೆಲಸಕಾರ್ಯಗಳನ್ನು ಈ ಶಾಸನಗಳು ತಿಳಿಸುತ್ತವೆ. ಮತ್ತು ವಿಜಯನಗರ ಅರಸರ ಕಾರ್ಯಕರ್ತರಾಗಿ ಆಡಳಿತ ನೆಡೆಸಿದ್ದರು ಎಂಬುದಕ್ಕೆ ಶಾಸನವು ದೊರೆತಿದೆ. ವೀರ ಸದಾಶಿವರಾಯನ ಕಾರ್ಯಕರ್ತರಾಗಿ ಮದಕರಿನಾಯಕರು ಆಡಳಿತನೆಡೆಸಿದ್ದನು ಎಂಬುದಕ್ಕೆ ಈ ತಾಲೂಕಿನಲ್ಲಿ ಒಂದು ಶಾಸನ ದೊರೆತಿದೆ.

ಈ ತಾಲೂಕಿನಲ್ಲಿ ದೊರೆತ ಶಾಸನಗಳನ್ನು ಗಮನಿಸಿ ಹೇಳುವುದಾದರೆ.

- ದಾನಕ್ಕೆ ನೀಡಿರುವ ವಿಷಯವನ್ನು ತಿಳಿಸುವಂತ ಶಾಸನಗಳು ದೊರೆತಿವೆ.
- ಧಾರ್ಮಿಕ ವಿಚಾರಗಳನ್ನು ತಿಳಿಸುವಂತೆ ಶಾಸನಗಳು ದೊರೆತಿವೆ.
- ಅಗ್ರಹಾರದ ವಿಚಾರಕ್ಕೆ ಸಂಬಂದಿಸಿದ ಶಾಸನಗಳು ಈ ತಾಲೂಕಿನಲ್ಲಿ ದೊರೆತಿವೆ ಎನ್ನಲಾಗಿದ್ದು.

ದಾನಕ್ಕೆ ಸಂಬಂಧ ಪಟ್ಟ ಶಾಸನಗಳನ್ನು ನೋಡುವುದಾದರೆ ಸು.೮ ಶಾಸನಗಳು ದಾನಕ್ಕೆ ಸಂಬಂಧಿಸಿದ್ದವಾಗಿವೆ ಅವುಗಳಲ್ಲಿ.

- ಅಗ್ರಹಾರದ ಭೂಮಿಯನ್ನ ದೇವಸ್ಥಾನದ ಅರ್ಚಕರಿಗೆ ದಾನ ನೀಡಿದ ವಿಚಾರವನ್ನು ತಿಳಿಸುವಂತ ಶಾಸನವು ಈ ತಾಲೂಕಿನಲ್ಲಿ ದೊರೆತಿದೆ.
- ಹನುಮಂತ ದೇವರಗುಡಿಗೆ ಗೌಡನಕಟ್ಟೆ ಹೊಲದಾನ ನೀಡಿದ ವಿಚಾರ.
- ಗಾದರಿಪಾಲನಾಯಕಸ್ವಾಮಿಗೆ ಗಂಜಿಗಟ್ಟೆಗ್ರಾಮದಾನ ನೀಡಿದ ವಿಚಾರ.
- ರಾಮಗಿರಿ ದೇವರಿಗೆ ಪುರವರ್ಗದ ದಾನ ನೀಡಿದ ವಿಚಾರ.
- ಶಿವಾರ್ಚನೆಗೆ ಪುರವರ್ಗವನ್ನು ದಾನ ನೀಡಿರುವುದು.
- ರುದ್ರಪ್ಪ ದೇವರಿಗೆ ವೀರಾಪುರ ಗ್ರಾಮವನ್ನು ಮಹಿಳೆ ದಾನನೀಡಿರುವುದು.
- ಹೊನ್ನ ಕೆಂಚಿ ದಡಿಗೆದಸ್ತರಿ ಎಂಬುವವನಿಗೆ ಭೂಮಿಯನ್ನು ತೋಟವನ್ನು ಹಾಗೂ ಮನೆಯನ್ನು ದಾನವಾಗಿ ಕಟ್ಟಿ ವಿವರಗಳು

➢ ಭರಮಣ್ಣ ನಾಯಕರು ತಮ್ಮ ತಂದೆ-ತಾಯಿಗಳಿಗೆ ಪುಣ್ಯಕ್ಕಾಗಿ ದಾನನೀಡಿದ ವಿಚಾರ ತಿಳಿಸುವಂತೆ

ಶಾಸನಗಳು ಹೊಳಲ್ಕೆರೆ ತಾಲೂಕಿನಲ್ಲಿ ದೊರೆತಿವೆ.

ಧಾರ್ಮಿಕ ವಿಚಾರ ತಿಳಿಸುವಂತ ಶಾಸನಗಳು

ಬ್ರಾಹ್ಮಣರಿಂದ ಮದನ ಗೋಪಾಲ ಕೃಷ್ಣಸ್ವಾಮಿ ದೇವರ ಪುನಾರ ಪ್ರತಿಷ್ಠಾಪನೆ ಮತ್ತು ಗೋಪಾಲಕೃಷ್ಣಸ್ವಾಮಿ ದೇವಾಲಯದ ಜೀರ್ಣೋದ್ದಾರ ಕುರಿತಂತೆ ತಿಳಿಸುವ ಶಾಸನ ಮತ್ತು ಅಗ್ರಹಾರದ ವಿಚಾರವನ್ನು ಕುರಿತಂತೆ ಒಂದು ಶಾಸನ ಈ ತಾಲೂಕಿನಲ್ಲಿ ದೊರೆಯುತ್ತದೆ.

ಒಟ್ಟಾರೆ ವಿಜಯನಗರ ಸಾಮ್ರಾಜ್ಯದ ಪತನನಂತರ ಸ್ವತಂತ್ರ ಅಸ್ತಿತ್ವವನ್ನು ಪಡೆದು ಚಿತ್ರದುರ್ಗವನ್ನು ಕೇಂದ್ರವಾಗಿರಿಸಿಕೊಂಡು ೨೧೧ ವರ್ಷಗಳ ಕಾಲ ಆಳ್ವಿಕೆ ಮಾಡಿದ ಚಿತ್ರದುರ್ಗದ ನಾಯಕರು ತಮ್ಮ ಆಡಳಿತಾವಧಿಯಲ್ಲಿ ಅವರು ಮಾಡಿದ ಸಾಧನೆ ಮತ್ತು ಚಿತ್ರದುರ್ಗದಲ್ಲಿ ಅವರು ನಡೆಸಿದ ಆಡಳಿತವನ್ನು ಕುರಿತಂತೆ ಶಾಸನಗಳು ದೊರೆತಿದ್ದು ಸಾಮಾಜಿಕ, ಧಾರ್ಮಿಕ, ರಾಜಕೀಯವಾಗಿ ಇವರನ್ನು ತಿಳಿಯಲೂ ಈ ಚಿತ್ರದುರ್ಗದಲ್ಲಿ ದೊರೆತ ಶಾಸನಗಳೆ ಮುಖ್ಯ ಸಾಕ್ಷಿಯಾಗಿ ಕಂಡುಬಂದಿವೆ. ಎನ್ನಬಹುದು.

ಅಡಿ ಟಿಪ್ಪಣಿಗಳು

೧. ಶ್ಯಾಮಲ.ಸಿ.ಆರ್., **ಪೂರ್ವಕರ್ನಾಟಕ ಪಾಳೆಗಾರರು ಒಂದು ಅಧ್ಯಯನ,** ಪು.೫೯.

೨. ಶ್ರೀನಿವಾಸ, ಎಂ.ವಿ.(ಸಂ), **ಚಂದ್ರವಳ್ಳಿ, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಕುರಿತ ಲೇಖನಗಳು,** ಪು.೭೮.

೩. ಲಕ್ಷ್ಮಣ್ ತೆಲಗಾವಿ, **ಚಿತ್ರದುರ್ಗ ನಾಯಕ ಅರಸರು ರಾಜಕೀಯ ಚಿತ್ರ,** ಪು.೨.

೪. ಶ್ರೀನಿವಾಸ, ಎಂ.ವಿ.(ಸಂ), **ಪೂರ್ವೋಕ್ತ,** ಪು.೭೯.

೫. ಎ.ಕ.XI, ಹಿರಿ ೪೦(ರೈಸ್)

೬. ಎ.ಕ.XI, ಹೊಳ ೬(ರೈಸ್)

೭. ಶೈಲಜ ಬಿ.ಎಂ.(ಸಂ), **ಪಾಳೆಯಗಾರರ ಶಾಸನ ಸಂಪುಟ-೧,** ಪ್ರಸ್ತಾವನೆ. ಪು.೮.

೮. ಲಕ್ಷ್ಮಣ್ ತೆಲಗಾವಿ, **ಚಿತ್ರದುರ್ಗನಾಯಕ ಅರಸರು ರಾಜಕೀಯ ಚಿತ್ರ,** ಪು.೩.

೯. ಅದೇ, ಪು.೩.

೧೦. ರಾಜಶೇಖರಪ್ಪ, ಬಿ. **ದುರ್ಗಶೋಧನ,** ಪು.೧೦೮.

೧೧. ಎ.ಕೆ.XI ಚಿತ್ರ ೪೧(ರೈಸ್)

೧೨. ಶೈಲಜ ಬಿ.ಎಂ.(ಸಂ), **ಪೂರ್ವೋಕ್ತ,** ಪು.೧೦.

೧೩. ಲಕ್ಷಣ್ ತೆಲಗಾವಿ. **ಪೂರ್ವೋಕ್ತ,** ಪು.೫.

೧೪. ಅದೇ, ಪು.೭೩.

೧೫. ಅದೇ, ಪು.೭.

೧೬. ಅದೇ, ಪು.೧೦.

೧೭. ಶೈಲಜ ಬಿ.ಎಂ.(ಸಂ), **ಪೂರ್ವೋಕ್ತ, ಪ್ರಸ್ತಾವನೆ,** ಪು.೧೩.

೧೮. ಲಕ್ಷ್ಮಣ್ ತೇಲಗಾವಿ, **ಪೂರ್ವೋಕ್ತ,** ಪು.೨೧.

೧೯. ಶೈಲಜ ಬಿ.ಎಂ.(ಸಂ), **ಪೂರ್ವೋಕ್ತ, ಪ್ರಸ್ತಾವನೆ,** ಪು.೧೪.

೨೦. ಅದೇ, ಪು.೧೪.

೨೧. ಎ.ಕ.VII, ಚನ್ನ ೨೭(ರೈಸ್)

೨೨. ರಾಜಶೇಖರಪ್ಪ ಬಿ. **ಪೂರ್ವೋಕ್ತ,** ಪು.೯೮.

೨೩. ಎ.ಕ.XI, ಚಿತ್ರ ೫೧(ರೈಸ್)

೨೪. ಎ.ಕ. XI, ಚಿತ್ರ ೯೪(ರೈಸ್)

೨೫. ಎ.ಕ.XI, ಚಿತ್ರ ೪೮(ರೈಸ್)

೨೬. ಎ.ಕ.XI, ಚಿತ್ರ ೫೧(ರೈಸ್)

೨೭. ಎ.ಕ.XI, ಚಿತ್ರ ೮೪(ರೈಸ್)

೨೮. ಶ್ರೀನಿವಾಸ ಎಂ.ವಿ.(ಸಂ), **ಪೂರ್ವೋಕ್ತ,** ಪು.೨೩.

೨೯. ಅದೇ, ಪು.೨೩.

೩೦. ಗಿರಿಜ ಟಿ., **ಚಿತ್ರದುರ್ಗ ಜಿಲ್ಲಾದರ್ಶಿನಿ,** ಪು.೧೯೩.

ಅಧ್ಯಾಯ ಐದು

ಚಿತ್ರದುರ್ಗ ನಾಯಕರ ಸಾಧನೆಗಳು

ಅಧ್ಯಾಯ ಐದು

ಚಿತ್ರದುರ್ಗ ನಾಯಕರ ಸಾಧನೆಗಳು

ಚಿತ್ರದುರ್ಗದ ಪಾಳೆಯಗಾರರು ಮಹಾ ಪರಾಕ್ರಮಿಗಳಾಗಿದ್ದು, ಪ್ರಜಾಹಿತ ಕಾರ್ಯಗಳನ್ನು ಸಮರ್ಪಕವಾಗಿ ಪೂರೈಸುವಲ್ಲಿ ಅತ್ಯಂತ ಆಸಕ್ತಿ ವಹಿಸಿದ್ದರು. ಹಲವಾರು ದೇವಾಲಯಗಳು, ಅಗ್ರಹಾರಗಳು ಕೆರೆ-ಕಟ್ಟೆಗಳು, ಕೋಟೆ-ಕೋತ್ತಲಗಳು ಇವರ ಕಾಲದಲ್ಲಿ ನಿರ್ಮಾಣಗೊಂಡವು. ಇವರು ನೀಡಿದ ದಾನ ದತ್ತಿಗಳ ದೋತಕವಾಗಿ ಅಸಂಖ್ಯಾತ ಶಾಸನಗಳಿವೆ, ಆಹಾರ, ಆರ್ಥಿಕ, ಧಾರ್ಮಿಕ ಹಾಗೂ ರಾಜಕೀಯ ಸ್ಥಿತಿಗಳನ್ನು ಚಿತ್ರಿಸುವ ಸಾಧನೆಗಳೆನಿಸಿವೆ. ಇಂತಹ ಸಾಧನೆಗಳನ್ನು ಚಿತ್ರದುರ್ಗದ ಪಾಳೆಯಗಾರರಿಗೆ ಸಂಬಂಧಿಸಿದ ಶಿಲಾಶಾಸನ, ತಾಮ್ರಪಟ ಶಾಸನ ನಿರೂಪ ಇತ್ಯಾದಿಗಳಿಂದ ತಿಳಿದುಕೊಳ್ಳಬಹುದಾಗಿದೆ.

೫.೧. ಸಾಮಾಜಿಕವಾಗಿ

ಚಿತ್ರದುರ್ಗದನಾಯಕರು ತಮ್ಮ ಅವಧಿಯಲ್ಲಿ ಅನೇಕ ಸಾಮಾಜಿಕ ಕಾರ್ಯಗಳನ್ನು ಮಾಡಿದ್ದರು ಎಂಬುದಕ್ಕೆ ಅವರ ಶಾಸನಗಳೆ ಸಾಕ್ಷಿಯಾಗಿವೆ. ಅಂತಹ ಸಾಮಾಜಿಕ ಕೆಲಸಗಳನ್ನು ಈ ಕೆಳಗಿನಂತೆ ಗಮನಿಸಬಹುದು.

೫.೧.೧. ಕೆರೆಗಳ ನಿರ್ಮಾಣ

ಚಿತ್ರದುರ್ಗದ ಪಾಳೆಗಾರರು ಅಸಂಖ್ಯಾತ ಕೆರೆಗಳನ್ನು ಕಟ್ಟಿಸುವುದರ ಮೂಲಕ ಪ್ರಜಾಹಿತ ಕಾರ್ಯಗಳನ್ನು ಕೈಗೊಂಡರು. ಇಮ್ಮಡಿ ಮದಕರಿನಾಯಕನು ತನ್ನ ಪಟ್ಟದನಾಗತಿ ಚಿಕ್ಕಮ್ಮ ಎಂಬುವಳ ಹೆಸರಿನಲ್ಲಿ ಕಟ್ಟೆಬಸವಯ್ಯನ ಮಗ ಕೆಂಚಯ್ಯನ ಮುಂಖಾಂತರ ನೆಲ್ಲಿಕಟ್ಟೆಯಲ್ಲಿ ಕೆರೆಯೊಂದನ್ನು ಕಟ್ಟಿಸಿದನು. "ಭರಮಣ್ಣನಾಯಕನು ತನ್ನ ಆಡಳಿತಾವಧಿಯಲ್ಲಿ ಸುಮಾರು ೩೦ ಕೆರೆಗಳನ್ನು ಕಟ್ಟಿಸಿದನೆಂದು ಹಿಂದೆಯೇ ಹೇಳಿದೆ."[೧] ಕಾಮಗೇತಿ ಓಬಣ್ಣನಾಯಕನ ಆಳ್ವಿಕೆಯ ಕಾಲದಲ್ಲಿ ಚಿಕ್ಕಣ್ಣ ಎಂಬುವನು ಅಣ್ಣಾಗಾರ ಓಬಣ್ಣ ಎಂಬುವನಿಗೆ ಸ್ವರ್ಗ ಲೋಕ ಪ್ರಾಪ್ತಿಯಾಗಬೇಕೆಂದು ಅವನ ಹೆಸರಿನಲ್ಲಿ

"ಓಬಣ್ಣನಹಳ್ಳಿಯಲ್ಲಿ ಕೆಂಚಣ್ಣ ಎಂಬುವವನಿಂದ ಕೆರೆಯನ್ನು ಕಟ್ಟಿಸಿದ್ದನು."[೨] ಇದರಿಂದ ಒಂದು ಪ್ರದೇಶದಲ್ಲಿ ಕೃಷಿ ಮತ್ತು ಕೃಷಿಯೇತರ ಕಾರ್ಯಗಳಿಗೆ ನೀರನ್ನು ಪೂರೈಸುವ ಕೆಲಸಗಳ ಚಿತ್ರದುರ್ಗ ಪಾಳೆಗಾರ ಕಾಲದಲ್ಲಿ ನಡೆದಿದ್ದವು.

೫.೧.೨. ಅನ್ನ ಛತ್ರಗಳ ನಿರ್ಮಾಣ

ಪಾಳೆಗಾರರ ಕಾಲದಲ್ಲಿ ಜನಸಾಮಾನ್ಯರ ನೋವುಗಳಿಗೆ ಈ ಅರಸರು ಸ್ಪಂದಿಸುತ್ತಿದ್ದರು ಅನಾಥ. ನಿರ್ಗತಿಕ, ಜನರಿಗೆ ಆಶ್ರಯ ನೀಡಿದ್ದರು, ಬೇಡಿಬಂದವರಿಗೆ ಮತ್ತು ಹಸಿದವರಿಗೆ ಊಟ ನೀಡುವ ನಿಟ್ಟಿನಲ್ಲಿ ಸಾಮಾಜಿಕವಾಗಿ ಚಿತ್ರದುರ್ಗದ ಪಾಳೆಯಗಾರರು ಅನ್ನ ಛತ್ರಗಳನ್ನು ನಿರ್ಮಾಣ ಮಾಡುವುದರ ಮೂಲಕ ತಮ್ಮ ನಂಬಿದ ಜನರಿಗೆ ಆಶ್ರಯದಾಯಕರಾಗಿದ್ದುದ್ದನ್ನು ಇವರ ಕಾಲದಲ್ಲೂ ಕಾಣಬಹುದು. ಕಾಯಕ ದಾಸೋಹದ ಗುಣಗಳನ್ನು ಮೈಗೂಡಿಸಿಕೊಂಡಿದ್ದರು. ಎಂಬುದಕ್ಕೆ ಈ ಅನ್ನ ಛತ್ರಗಳೆ ಸಾಕ್ಷಿಯಾಗಿ ಕಾಮಗೇತಿ ಕಸ್ತೂರಿ ರಂಗಪ್ಪನಾಯಕರ ಪುತ್ರರಾದ ಕಡೆಯ ರಾಜಾಮದಕರಿನಾಯಕರು ತಮ್ಮ ಹಿರಿಯರಿಗೆ ಪುಣ್ಯಸುಕೃತವಾಗಬೇಕೆಂದು ಹಿರಿಯೂರಿನಲ್ಲಿ ಮಾಡಿಸಿದ್ದ ಅನ್ನ ಛತ್ರ ಮಠಕ್ಕೆ ತಾವು ಆಳುವಂತೆ ರಾಜ್ಯ ಹಿರಿಯೂರ ಸೀಮೆಒಳಗಣ "ಗೌಡನಹಳ್ಳಿ ಗ್ರಾಮವನ್ನ ಶಿವಾರ್ಪಿತವಾಗಿ ದಾನ ನೀಡಿದ್ದಾರೆ."[೩]

೫.೧.೩. ಕೋಟೆಗಳ ನಿರ್ಮಾಣ

ಚಿತ್ರದುರ್ಗ ಪಾಳೆಗಾರರು ಬಲಿಷ್ಠ ಕೋಟೆ-ಕೊತ್ತಲಗಳನ್ನ ಕಟ್ಟಿಸುವುದರ ಮೂಲಕ ಶತ್ರುಗಳ ಧಾಳಿಯನ್ನು ಯಶಸ್ವಿಯಾಗಿ ತಡೆಗಟ್ಟುತ್ತಿದ್ದರೆಂಬುದು ಸರ್ವವೇದ್ಯವಾದುದು. ಚಿತ್ರದುರ್ಗದ ಏಳಸುತ್ತಿನ ಕೋಟೆಯೇ ಇದಕ್ಕೆ ಉತ್ತಮ ಉದಾಹರಣೆ ತಾವು ಆಳುತ್ತಿದ್ದ ಸೀಮೆಗಳಲ್ಲಿ ಅವಶ್ಯಕತೆ ಇದ್ದೆಡೆಯಲ್ಲೆಲ್ಲ ಕೋಟೆಗಳನ್ನು ಕಟ್ಟಿಸಲು ಈ ನಾಯಕರು ವ್ಯವಸ್ಥೆ ಮಾಡಿದರು ಇಮ್ಮಡಿ ಮದಕರಿ ನಾಯಕನ ನಂತರ ಪಟ್ಟಕ್ಕೆ ಬಂದ "ಚಿಕ್ಕಣ್ಣನಾಯಕನು ಜಗಲೂರು ತಾಲೂಕು ಕಣಕುಪ್ಪೆ (ಕಣ್ವರ ಕುಪ್ಪೆ) ಯಲ್ಲಿ ಬಲವಾದ ಕೋಟೆಯೆಬ್ಬುಂದನ್ನು ಕಟ್ಟಿಸಿದನು."[೪] ಈ-ಕೋಟೆಯ ರಚನೆ ಇತ್ಯಾದಿಗಳ ಬಗ್ಗೆ ವಿವರವಾದ ವರ್ಣನೆಯಿದೆ.

ಇಮ್ಮಡಿ ಮದಕರಿನಾಯಕನು ಗಳ್ಳೆಲೋಕ ಚಂದೆಲ್ಲಯ್ಯನೆಂಬುವನು ಭರಮಸಮುದ್ರ ಕೋಟೆಯನ್ನು ಕಟ್ಟಿಕೊಟ್ಟುದಕ್ಕೆ ಮನಸೋತು ಆ ಕೋಟೆಯಲ್ಲಿಯೇ ಅವನು ಶಾಶ್ವತವಾಗಿ ವಾಸಮಾಡಿ ಕೊಂಡಿರುವಂತೆ ಏರ್ಪಡಿಸಿದನು. ಬಿಚ್ಚುಗತ್ತಿ ಭರಮಣ್ಣನಾಯಕನ ಅಪ್ಪಣೆಯಂತೆ ಬೊಕ್ಕಸದ ತಿಮ್ಮಣ್ಣನ ಪಾರುಪತ್ಯದಲ್ಲಿ ಜನಧಿ ಗೌಡನ ಮಗ "ಚಿಕ್ಕಣ್ಣಗೌಡನೆಂಬುವನು ಗೋಸಿಕೆರೆಯ ಕೋಟೆ ಕೊತ್ತಲ ಮತ್ತು ಅವುಗಳನ್ನು ನಿರ್ಮಿಸಿದನು."[೫]

೫.೧.೪. ಊರು ಮತ್ತು ಸಾಲು ಮರಗಳ ನಿರ್ಮಾಣ

ಚಿತ್ರದುರ್ಗ ಪಾಳೆಗಾರರು ಅರಸರಾಗಿದ್ದರು ಜನರ ಬಗ್ಗೆ ಹೆಚ್ಚಿನ ಕಾಳಜಿಯನ್ನು ಬೆಳೆಸಿಕೊಂಡಿದ್ದು. ಜನೋಪಯೋಗಿ ಕೆಲಸಗಳನ್ನು ಮಾಡಿದ್ದನು ಜನರಿಗೆ ವಸತಿ ಕಲ್ಪಿಸುವುದಕ್ಕೆ ಊರುಗಳನ್ನು ನಿರ್ಮಾಣ ಮಾಡುವ ಕೆಲಸಗಳು ಇವರ ಕಾಲದಲ್ಲಿ ನಡೆದಿದ್ದವು ಹಾಗೇಯೇ ಊರುಗಳನ್ನು ನಿರ್ಮಿಸುವುದರ ಜೊತೆಗೆ ಆ ಊರುಗಳಲ್ಲಿ ಕೆರೆಗಳನ್ನು ನಿರ್ಮಿಸುವುದು, ಬಾವಿಗಳನ್ನು ನಿರ್ಮಿಸುವುದು, ಸಾಲುಮರಗಳನ್ನು ಹಾಕಿಸುವುದು ಹೀಗೆ ಒಂದು ಪ್ರದೇಶದಲ್ಲಿ ಜನವಸತಿಗೆ ಬೇಕಾದ ಮೂಲಭೂತ ಅಂಶಗಳನ್ನು ಈ ನಾಯಕರು ಒದಗಿಸುತ್ತಿದ್ದರು. ಇಂತಹ ಕಾರ್ಯಗಳನ್ನು ಇವರು ತಮ್ಮ ಹಿರಿಯರ ಹೆಸರಿನಲ್ಲಿ ಇವುಗಳನ್ನು ನಿರ್ವಹಿಸುತ್ತಿದ್ದರು.

"೧೫೮೮ರಲ್ಲಿ ಕಾಮಾಗೇತಿ ಓಬಣ್ಣನಾಯಕನ ಆಳ್ವಿಕೆಯ ಕಾಲದಲ್ಲಿ ಚಿಕ್ಕಣ್ಣ ಎಂಬುವನು ಅಣ್ಣಗಾರ ಓಬಣ್ಣ ಎಂಬುವವನಿಗೆ ಸ್ವರ್ಗ ಪ್ರಾಪ್ತಿಯಾಗಬೇಕೆಂದು ಅವನ ಹೆಸರಿನಲ್ಲಿ ಓಬಣ್ಣನಹಳ್ಳಿಯೆಂಬ ಊರನ್ನ ಕಟ್ಟಿಸಿ ಹನುಮಂತ ದೇವರ ಪ್ರತಿಷ್ಠಾಪನೆ ಮಾಡಿಸಿ ಆ ಊರಿನಲ್ಲಿ ಸಾಲುಮರಗಳನ್ನು ಹಾಕಿಸುವುದರ ಜೊತೆಗೆ ಕೆಂಚಣ್ಣ ಎಂಬುವವನ ಮೂಲಕ ಕೆರೆಯನ್ನ ಕಟ್ಟಿಸಿದನೆಂದೂ ಈ ಶಾಸನ ತಿಳಿಸುತ್ತದೆ."[೬] ಈ ರೀತಿಯಲ್ಲಿ ಚಿತ್ರದುರ್ಗದ ಪಾಳೆಗಾರರು ತಮ್ಮ ಆಡಳಿತಾವಧಿಯಲ್ಲಿ ಸಾಮಾಜಿಕ ಕಾರ್ಯಗಳೆನಿಸಿದ, ಕೆರೆಗಳು, ಊರುಗಳು. ಅನ್ನ-ಛತ್ರಮಠ ಸಾಲು ಮರಗಳನ್ನ ನಿರ್ಮಿಸುವುದರ ಮೂಲಕ ಸಾಮಾಜಿಕ ಕೆಲಸಗಳನ್ನ ಮಾಡಿದ್ದಾರೆ.

೫.೨. ಧಾರ್ಮಿಕವಾಗಿ

ಚಿತ್ರದುರ್ಗ ನಾಯಕರು ಸರ್ವಧರ್ಮ ಸಮನ್ವಯ ಮನೋಭಾವವನ್ನು ಹೊಂದಿದವರಾಗಿದ್ದರು. ಇವರ ಶಾಸನಗಳನ್ನ ಗಮನಿಸಿದರೆ ಇವರ ಸರ್ವಧರ್ಮ ಸಮಭಾವ ತಿಳಿಯುತ್ತದೆ. ಮೂಲತಃ ಚಿತ್ರದುರ್ಗದ ನಾಯಕರು ಬೇಡರಾಗಿದ್ದರೂ ಸಹ ಅವರು ಶೈವ, ವೈಷ್ಣವ, ವೀರಶೈವ ಹೀಗೆ ಎಲ್ಲ ಪಂಥದ ದೇವಾಲಯಗಳಿಗೆ, ಮಠಗಳಿಗೆ, ಹಾಗೂ ವ್ಯಕ್ತಿಗಳಿಗೆ ದಾನಕೊಟ್ಟು ವಿವರ ಶಾಸನಗಳಲ್ಲಿ ದೊರೆಯುತ್ತವೆ.

೫.೨.೧. ದಾನ-ದತ್ತಿಗಳು

ಚಿತ್ರದುರ್ಗ ಪಾಳೆಗಾರರ ಆಳ್ವಿಕೆಯ ಅವಧಿಯಲ್ಲಿ ಅತಿ ಹೆಚ್ಚು ಶಾಸನಗಳು ದೊರೆತಿರುವುದು ದಾನ ಶಾಸನಗಳಾಗಿದ್ದು. ಈ ದಾನಶಾಸನಗಳು ದೇವಾಲಯಗಳಿಗೆ, ಮಠಗಳಿಗೆ ವ್ಯಕ್ತಿಗಳಿಗೆ ಪೂಜ್ಯ ಕಾರ್ಯ ಅಥವಾ ಉತ್ಸವಗಳಿಗೆ ದಾನ ನೀಡಿರುವ ಅಂಶಗಳು ಇವರ ಶಾಸನಗಳಲ್ಲಿ ಕಂಡುಬರುತ್ತವೆ.

ಅ. ದೇವಾಲಯಗಳಿಗೆ ದಾನ

ಭೂದತ್ತಿ ಮತ್ತು ಕೊಡುಗೆಗಳನ್ನ ಈ ಪಾಳೆಯಗಾರರು ನೀಡಿದ ಬಗ್ಗೆ ಶಾಸನಾಧಾರವಿದೆ. ದೇವಾಲಯಗಳಿಗೂ ದತ್ತಿಗಳನ್ನು ಬಿಟ್ಟು ಪ್ರೋತ್ಸಾಹ ಮತ್ತು ಪೋಷಣೆ ನೀಡಿದರು. ದೇವಾಲಯಗಳಿಗೆ ನೀಡಿದ ದತ್ತಿಗಳಲ್ಲಿ ಮತ್ತಿ ತಿಮ್ಮಣನಾಯಕನು ಹಿರಿಯೂರು ವೀರಭದ್ರ ದೇವಾಲಯಕ್ಕೆ ಹಾಗೂ ಕಾಮಗೇತಿ ಕಸ್ತೂರಿ ಮದಕರಿ ನಾಯಕರ "ಭರಮಣ್ಣನಾಯಕರು ಚನ್ನಗಿರಿದುರ್ಗದ ವೆಂಕಟರಮಣ ಸ್ವಾಮಿಗೆ ಅಮೃತ ಪಡೆ, ನಂದಾದೀಪ, ಮಂತ್ರಪುಷ್ಪ ಮುಂತಾದ ಸೇವೆಗಾಗಿ ಪಿಳ್ಳೇಕೆರೇನಹಳ್ಳಿ ಗ್ರಾಮವನ್ನು ದಾನ ನೀಡಿದ್ದಾನೆ."[೭] ಮತ್ತು "ಓಬಣ್ಣನಾಯಕರು ಹನುಮಂತ ದೇವರ ಗುಡಿಯನ್ನು ಕಟ್ಟಲು ವೊಡವಿನ ಬೋಪ್ಪಗೊಂಡ, ಕೆಂಚಗೊಂಡ ಹಾಗೂ ಸೊಂಡೇ ಕೆರೆಯ ಬಡಗಿ ಪುರುವೋಜನ ಮಗ ಗೌರಯ್ಯರಿಗೆ ಭೂಮಿಯನ್ನು ದಾನವನ್ನು ಕೊಟ್ಟಿದ್ದಾರೆ."[೮]

ಕಾಮಗೇರೆ ಕಸ್ತೂರಿ ರಂಗಪ್ಪನಾಯಕ ಪುತ್ರನಾದ ಮದಕರಿನಾಯಕರ ಕಾಲದಲ್ಲಿ ಮಾಲ್ಯೆಯನ ಮಗ "ಚನ್ನಯ್ಯನ ತಮ್ಮ ಹಿರಿಯೂರಿಗೆ ಪುಣ್ಯವಾಗಲೆಂದು ನಂದನ ಹೊಸವೂರಿನಲ್ಲಿ ಹನುಮಂತ ದೇವರ ಗುಡಿಯನ್ನು ಕಟ್ಟಿಸಿದ."[೯] ಕಾಮಗೇತಿ ಕಸ್ತೂರಿ ರಂಗಪ್ಪನಾಯಕರಿಗೆ ಪುಣ್ಯವಾಗಲೆಂದು "ತಾಳೆದ ಕರಿಯಪ್ಪನಾಯಕರು ಗಾದರಿ ಪಾಲಿನಾಯಕ ಸ್ವಾಮಿಗೆ ಗಂಜಕಟ್ಟಿ ಗ್ರಾಮವನ್ನ ದಾನ ಮಾಡಿದನು."[೧೦] ಕಾಮಗೇತಿ ಚಿಕ್ಕಣ್ಣನಾಯಕನವರು ಬಾಗೂರು ಚರಂಸಿ ಚನ್ನಬಸಪ್ಪದೇವರ ಪುತ್ರನಾದ ರುದ್ರಪ್ಪದೇವರಿಗೆ ಕೊಟ್ಟ ತಾಮ್ರಶಾಸನ ಹೇಳುವಂತೆ ಊಳಿಗವ ಭೋಕಸ್ತ ಮದ್ದಣ್ಣನ ಮಗಳು ಗಂಗಮ್ಮಳು ರುದ್ರಪ್ಪ ದೇವರಿಗೆ ಬಾಗೂರು ಸೀಮೆಗೆ ಸೇರಾವ ವೀರಾಪುರ ಗ್ರಾಮವನ್ನು ದಾನ ಬಿಟ್ಟಳು. ಹಾಗೆಯೇ "ಕಾಮಗೇತಿ ಮದಕರಿನಾಯಕನ ಮೈದುನ ಗುಲ್ಲಿಯಪ್ಪನಾಯಕನು ಭಗ್ನವಾದ ಹೊಳಲ್ಕೆರೆ ಶ್ರೀ ಮದನಗೋಪಾಲ ಕೃಷ್ಣಸ್ವಾಮಿ ದೇವರನ್ನು ಗುಲ್ಲಿಯಪ್ಪನಾಯಕನು ಬ್ರಾಹ್ಮಣ ಮೂಲಕ ಪುನರ್ ಪ್ರತಿಷ್ಠಾಪನೆ ಮಾಡಿಸಿ. ದೇವಾಲಯವನ್ನು ಜೀರ್ಣೋದ್ದಾರ ಮಾಡಿಸಿದನು."[೧೧]

ಆ. ಮಠಗಳಿಗೆ ದಾನ

ಚಿತ್ರದುರ್ಗದ ಪಾಳೆಯಗಾರರು ದೇವಾಲಯಗಳನ್ನ ಕಟ್ಟಿಸಿ ಅವುಗಳನ್ನು ಪೋಷಿಸಿದಂತೆಯೇ, ಮಠ–ಮಾನ್ಯಗಳಿಗೂ ಆಶ್ರಯ ನೀಡಿದರು. "ಚಿತ್ರದುರ್ಗದಲ್ಲಿ ಶೃಂಗೇರಿಮಠ, ಸತ್ಯಬೋಧಾಚಾರ್ಯರ ಮಠ, ರಾಘವೇಂದ್ರಸ್ವಾಮಿಗಳಮಠ, ತಾತಾಚಾರ್ಯರಮಠ, ಮುರುಘರಾಜೇಂದ್ರ ಬೃಹನ್ಮಠ, ಮಂಡಿಮಠ, ಮಧ್ವಾಚಾರ್ಯರಮಠ, ಉಜ್ಜಯನಿಮಠ, ಮೈಸೂರುಮಠ ಇವೇ ಮೊದಲಾದ ಮಠಗಳನ್ನು ಕಟ್ಟಲು ಸಹಾಯ ಮಾಡಿದರು ಚಿಕ್ಕಣ್ಣನಾಯಕ, ಭರಮಣ್ಣನಾಯಕ ಹೀರೆ ಮದಕರಿನಾಯಕ, ರಾಜಾ ವೀರಮದಕರಿನಾಯಕರು ಶಿವಮೊಗ್ಗ ಜಿಲ್ಲೆಯ ಕೂಡಲಿ ಶೃಂಗೇರಿ

ಮಠಾಧೀಶ್ವರ ಅನನ್ಯ ಭಕ್ತರಾಗಿದ್ದರು. ಇವರು ಈ ಮಠಕ್ಕೆ ೨೫ ಕ್ಕೂ ಹೆಚ್ಚು ನಿರೂಪಗಳನ್ನು ಕೊಟ್ಟಿದ್ದಾರೆ."[೧೨]

"ಬಿಚ್ಚುಗತ್ತಿ ಭರಮಣ್ಣನಾಯಕನು ಶ್ರೀ ಮುರಿಗೇಂದ್ರ ರಾಜೇಂದ್ರರಿಂದ ಉಪಕೃತವಾಗಿ ಅವರಿಗೆ ಚಿತ್ರದುರ್ಗದಲ್ಲಿ ಬೃಹನ್ಮಠವನ್ನು ಕಟ್ಟಿಸಿಕೊಟ್ಟನೆಂದು ಈ ಹಿಂದೆ ಹೇಳಿದೆ. ಅವನು ಈ ಮಠಕ್ಕೆ ಕ್ರಿ.ಶ.೧೭೧೨ರಲ್ಲಿ ಗಂಟೆಯೊಂದನ್ನು ನೀಡಿದನು. ಅವರ ಶಾಸನವನ್ನು ಕೊರೆಸಿದ್ದಾನೆ."[೧೩] ಈ ನಾಯಕನೇ ವ್ಯಾಸರಾಯ ಮಠದ ಶ್ರೀಮದ್ ರಘುತೀರ್ಥ ಪಾದಂಗಳವರಿಗೆ ಚಿತ್ರದುರ್ಗದ ಸಂಸ್ಥಾನಕ್ಕೆ ಸೇರಿದ ಕೊಡಗನೂರು ಸೀಮೆಯ ದೇವಾಲವನ್ನ (ದ್ಯಾಮವನ) ಹಳ್ಳಿಯನ್ನು ಬಿಟ್ಟು ಕೊಡುವುದರ ಮೂಲಕ ತನ್ನ ಗೌರವವನ್ನು ತೋರಿದನು. ಒಂದನೇ ಕಸ್ತೂರಿ ರಂಗಪ್ಪನಾಯಕನ ದಳವಾಯಿ ಭರಮಪ್ಪನಾಯಕನು ಜಗಲೂರು ವಿರಕ್ತಮಠಕ್ಕೆ ಗ್ರಾಮದಾನ ಮಾಡುವುದರ ಮೂಲಕ ವೀರಶೈವಧರ್ಮವನ್ನು ಪ್ರೋತ್ಸಾಹಿಸಿದನು. ಚಿತ್ರದುರ್ಗನಾಯಕರು ಮಠ ಮಾನ್ಯಗಳಿಗೆ ದತ್ತಿ ನೀಡಿ ತಮ್ಮ ಧರ್ಮಾಭಿಮಾನವನ್ನು ವ್ಯಕ್ತಪಡಿಸಿದರು.

ಇ. ಪೂಜ್ಯಾಕಾರ್ಯ ಮತ್ತು ಉತ್ಸವಗಳಿಗೆ ದಾನ

ಚಿತ್ರದುರ್ಗ ನಾಯಕರು ದಾನಗಳನ್ನ ದೇವಾಲಯ ಮತ್ತು ಮಠಗಳಿಗೆ ನೀಡುವುದರೊಂದಿಗೆ ಪೂಜ್ಯಕಾರ್ಯ ಮತ್ತು ಉತ್ಸವಗಳಿಗೆ ದಾನವನ್ನ ನೀಡುತ್ತಿದ್ದುದು ಇವರ ಶಾಸನಗಳಿಂದ ತಿಳಿದುಬರುತ್ತದೆ. "ಶ್ರೀಮನ್ ಮಹಾನಾಯಕಾಚಾರ್ಯ ಕಾಮಗೇತಿ ಇಮ್ಮಡಿ ಮದಕರಿನಾಯಕರು ಹುಲ್ಲೂರು ಗ್ರಾಮದ ವೀರಭದ್ರ ದೇವಸ್ಥಾನದ, ವೀರಭದ್ರದೇವರ ಮಹೋತ್ಸವ ನೈವೈದ್ಯಕ್ಕೆ ಹಣವನ್ನ ದಾನವಾಗಿ ನೀಡುವುದರ ಜೊತೆಗೆ ಉತ್ಸವದ ಉಸ್ತುವಾರಿಯನ್ನು ತನ್ನ ದಳವಾಯಿಯಾದ ಮಲ್ಲಪ್ಪನಿಗೆ ವಹಿಸುತ್ತಾನೆ."[೧೪] ಕಾಮಗೇತಿಯ ಮದಕರಿನಾಯಕನು ಪೋಂಬೊಳಲ "ಗೋಪಾಲಸ್ವಾಮಿಯ ರಥೋತ್ಸವಕ್ಕೆ ಬಂದಾಗ ಅದೇ ದೇವಸ್ಥಾನಕ್ಕೆ ಶಂಖು, ಜಾಗಟೆ, ಗುಡಿಕಾವಲುಕಾರ್ಯಕ್ಕೆ ತೋಪದಾಸನನ್ನ ನೇಮಿಸಿ ಕೆಸರಿಕಟ್ಟೆ ಎಂಬಲ್ಲಿ ಭೂಮಿಯನ್ನು ದಾನವಾಗಿ ನೀಡುತ್ತಾನೆ."[೧೫] ಕಾಮಗೇತಿ ಕಸ್ತೂರಿ ಮದಕರಿನಾಯಕರು ಬಾಗೂರು ಚೆರಂತ್ತಿ ಚನ್ನಬಸಪ್ಪ ದೇವರಿಗೆ "ತ್ರಿಕಾಲದಲ್ಲೂ ಶಿವಾರ್ಚನೆಯನ್ನು ಮಾಡಿಕೊಂಡು ಹೋಗಲು ಬಾಗೂರ ಸೀಮೆಯೊಳಗಣ ಗುಂಡುಸಮುದ್ರದ ಪುರವರ್ಗವನ್ನು ಸರ್ವಮಾನ್ಯವಾಗಿ ಧಾರ ಪೂರ್ವಕವಾಗಿ ದಾನ ಕೊಟ್ಟಿದ್ದಾರೆ."[೧೬]

ಈ. ವ್ಯಕ್ತಿಗಳಿಗೆ ದಾನ

ಚಿತ್ರದುರ್ಗನಾಯಕರು ದಾನಗಳನ್ನು ಕೇವಲ ದೇವಾಲಯ ಮಠಗಳ ಹಾಗೆ ಅನ್ನ ಛತ್ರಗಳಿಗೆ ಅಷ್ಟೇದಾನ ನೀಡುತ್ತಿರಲಿಲ್ಲ ವ್ಯಕ್ತಿಗಳಿಗೂ ದಾನವನ್ನ ಇವರು ನೀಡುತ್ತಿದ್ದರು. "ತಿಮ್ಮಣನಾಯಕ

ಆಜ್ಞೆಯಂತೆ ಕಿವುಡ ಮಾದಯ್ಯನ ತನ್ನ ಸಹೋದರನನ್ನ ಯುದ್ಧಕ್ಕೆ ಕಳುಹಿಸಲಾಗಿ ಅವರು ಪಡೆದ ಗೆಲುವನ್ನ ಘೋಷಿಸಿ ಹಾಗೂ ಅವರಿಗೆ ಭೂಮಿಯನ್ನು ದಾನ ನೀಡಿದನು."[೧೭] "ಕಾಮಗೇತಿ ಕಸ್ತೂರಿ ಚಿಕ್ಕಣ್ಣನಾಯಕರು ತಮ್ಮ-ತಂದೆ ತಾಯಿಗಳಿಗೆ ಧರ್ಮವಾಗಲೆಂದು ತಿರುಪತಿ ಪೆದ್ದಜೀಯಕ್ಕೆನವರಿಗೆ ನಾಗೇನಳ್ಳಿ ಗ್ರಾಮವನ್ನು ಸರ್ವಮಾನ್ಯವಾಗಿ ದಾನಕೊಟ್ಟಿದ್ದಾರೆ."[೧೮] ಹಾಗೆಯೇ ಶ್ರೀಮನ್ ಮಹಾನಾಯಕ ಕಾಮಗೇತಿ "ಕಸ್ತೂರಿ ರಂಗಪ್ಪ ನಾಯಕರು ತಮ್ಮ ತಂದೆ ತಾಯಿಗಳಿಗೆ ಪುಣ್ಯವಾಗಲೆಂದು ಉಪ್ಪಿಲಗೆರೆ ಎಂಬ ಗ್ರಾಮವನ್ನು ಕಾಶಿವಾಸಿಯಾದ ಭೈಮಭಟರಿಗೆ ಕಾಶೀಧರ್ಮಕ್ಕೆ ಸರ್ವಮಾನ್ಯವಾಗಿ ಬಿಟ್ಟಿದ್ದನು."[೧೯] ವಿಜಯನಗರದ ಅರಸು ಸದಾಶಿವರಾಯರ ಕಾಲದ್ದಾಗಿದ್ದು ಕಾಮಗೇತಿ ಹನುಮಿನಾಯಕರ ಪುತ್ರನಾದ "ತಿಮ್ಮಣ್ಣನಾಯಕರು ತುಂಗಾಭದ್ರ ತೀರದಲ್ಲಿ ತಮ್ಮ ತಂದೆಯಾದ ಹನುಮನಾಯಕರಿಗೆ ಪುಣ್ಯವಾಗಲೆಂದು ಅರಕೆರೆಯ ಗ್ರಾಮವನ್ನು ವೇದಾಂತಾಚಾರ್ಯ ಶ್ರೀಮೌಲ್ಯವಂತ ರಾಮನುಜಜಿಯ್ಯರಿಗೆ ದಾನವಾಗಿ ಕೊಟ್ಟಿದ್ದರು."[೨೦]

"ಓಬಣ್ಣನಾಯಕರು ಹನುಮಂತ ದೇವರಗುಡಿಯನ್ನು ಕಟ್ಟಲು ವೊಡವಿನ ಮೊಪ್ಪಗೊಂಡ, ಕೆಂಚಗೊಂಡ ಹಾಗೂ ಸೊಂಡೇಕೆರೆಯ ಬಡಗಿ ಪರುವೋಜನ ಮಗ ಗೌರಯ್ಯನಿಗೆ ಭೂಮಿಯನ್ನ ದಾನ ಕೊಟ್ಟಿದ್ದರು."[೨೧] ವಿಜಯನಗರದ ಅರಸು ಶ್ರೀ ರಂಗರಾಯನ ಕಾರ್ಯಕರ್ತರಾದ ಕಾಮಗೇತಿ ಕಸ್ತೂರಿ ರಂಗಪ್ಪನಾಯಕರ ಪುತ್ರನಾದ ಇಮ್ಮಡಿ ಮದಕರಿನಾಯಕನು ಭಟ್ಟರ ಭಗುತ ಪುಟ್ಟಣ್ಣನ ಮಗನಾದ ರಾಮನಿಗೆ ಮನಪ್ರೀತಿಯಾಗಿ ಚಿತ್ರಹಳ್ಳಿ ಸೀಮೆಯ ಹೀರೆಗಂಟನೂರು ಮಗಣಿಗೆ ಸಲ್ಲುವ "ಕಡಲೆಗುಂದಿ ಗ್ರಾಮವನ್ನು ಅಗ್ರಹಾರವಾಗಿ ಮಾಡಿದಾಗ ಕೊಟ್ಟಿದ್ದರು,"[೨೨] ಮತ್ತು ಕಾಮಗೇತಿಯ ಮದಕರಿನಾಯಕನು. ಪೊಂಬೊಳಲ ಗೋಪಾಲಸ್ವಾಮಿಯ ರಥೋತ್ಸವಕ್ಕೆ ಬಂದಾಗ ಆ ದೇವಾಲಯಕ್ಕೆ ಗುಡಿಕಾವಲು ಕಾರ್ಯಕ್ಕೆ "ತಿಮ್ಮದಾಸನಮಗ ತೋಪದಾಸನನ್ನು ನಿಯೋಜನೆ ಮಾಡಿ ಹಾಗೂ ಅವನಿಗೆ ಕೆಸರಿಕಟ್ಟೆ ಎಂಬಲ್ಲಿ ಭೂಮಿಯನ್ನು ದಾನವಾಗಿ ನೀಡುತ್ತಾನೆ."[೨೩]

ಮಹಾನಾಯಕಾಚಾರ್ಯ ಕಾಮಗೇತಿ ಮದಕರಿ ನಾಯಕರಿಗೆ ಅವರಮಾಣಿಗೆ ಪಾಲಿಸಿದ ಮೇಲೆ ಅಖಿಲವಾಗಿ ಹೋದ ಹೊಳಲಕೆರೆಯ ಸೀಮೆಯ ಶ್ರೀ ಮದನಗೋಪಾಲಕೃಷ್ಣಸ್ವಾಮಿ ದೇವರನ್ನು ಪುರ್ನರ್ ಪ್ರತಿಷ್ಠಾಪನೆ ಮಾಡಿಸಿ ದೇವಾಲಯವನ್ನು ಜೀರ್ಣೋದ್ದಾರ ಮಾಡಿಸಿ ಹಾಗೂ ಈ ದೇವಾಲಯದ ಅರ್ಚಕರಿಗೆ ಆತ್ರೇಸ ಗೋತ್ರದ ಯಜುಶಾಖಾಧ್ಯಾಯಿಗಳಾದ ವೆಂಕಟ್ಟಾಚಾರ್ಯ ಧೀಕ್ಷತರಿಗೆ ತಮ್ಮ ಮೈದುನನಾದ ಗುಲ್ಲಿಯಪ್ಪನ ಮುಖಾಂತರ "ಭೀಮಾ ಅಗ್ರಹಾರದ ಭೂಮಿಯನ್ನು ಕೊಡುಗೆಯಾಗಿ ನೀಡಿದನು,"[೨೪] "೧೭೩೪ರಲ್ಲಿ ಕಾಮಗೇತಿ ಕಸ್ತೂರಿ ರಂಗಪ್ಪ ನಾಯಕರು ಕಂಗಳಿರಂಗದಾಸನ ವಂಶದ ಹೊನ್ನಿಕೆಂಚಿ ಮಕ್ಕಳ ದಡಗೆದಸ್ತೆರಿ ಎಂಬುವನಿಗೆ

ಹೊರಕೆರೆ ದೇವರಪುರದ ಕಂಸಬೆಯಲು ಭೂಮಿಯನ್ನು, ತೋಟವನ್ನು ಹಾಗೂ ಮನೆಯನ್ನು ದಾನವಾಗಿ ಕೊಟ್ಟಿದ್ದರು."[೨೫]

ಈ ರೀತಿಯಲ್ಲಿ ಚಿತ್ರದುರ್ಗದ ನಾಯಕರು ತಮ್ಮ ಆಡಳಿತಾವಧಿಯಲ್ಲಿ ದಾನಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟಿದ್ದರು ಎಂಬುದಕ್ಕೆ ಇವರ ಕಾಲದಲ್ಲಿ ಅತಿಹೆಚ್ಚು ದಾನ ಶಾಸನಗಳು ದೊರೆತಿದ್ದು. ಇವುಗಳಲ್ಲಿ ದೇವಸ್ಥಾನಗಳಿಗೆ ಮತ್ತು ದೇವಸ್ಥಾನಗಳ ಪೂಜ್ಯಕಾರ್ಯ ಹಾಗೂ ಉತ್ಸವಗಳಿಗೆ ಮಠ ಮಾನ್ಯಗಳಿಗೆ, ಅನ್ನ ಛತ್ರಗಳಿಗೆ ವ್ಯಕ್ತಿಗಳಿಗೆ ದೇವಾಲಯಗಳ ಜಿರ್ಣೋದ್ಧಾರಕ್ಕೆ ಅಗ್ರಹಾರಗಳಿಗೆ ಹೀಗೆ ವಿವಿಧ ಮುಖಗಳಲ್ಲಿ ಇವರು ದಾನ ನೀಡಿರುವುದನ್ನು ಗಮನಿಸಿ ಹೇಳುವುದಾದರೆ ಚಿತ್ರದುರ್ಗದ ಪಾಳೆಗಾರರು ದಾನ ನೀಡುವುದರಲ್ಲಿ ಉದಾರಿಗಳಾಗಿದ್ದರು. ಇದರಿಂದ ಇವರು ಧಾರ್ಮಿಕವಾಗಿ ಎಲ್ಲಾ ಧರ್ಮಗಳನ್ನು ಒಪ್ಪಿಕೊಂಡು ಧಾರ್ಮಿಕ ಸಮನ್ವಯತೆಯನ್ನು ಹೊಂದಿದ್ದರು. ಎಂಬುದು ಈ ದಾನಗಳಿಂದ ತಿಳಿದುಬರುತ್ತದೆ.

೫.೩. ರಾಜಕೀಯವಾಗಿ

ಚಿತ್ರದುರ್ಗ ಪಾಳೆಗಾರರು ರಾಜ್ಯಡಳಿತವನ್ನು ತುಂಬಾವ್ಯವಸ್ಥಿತವಾಗಿ ನೆಡೆಸಿಕೊಂಡು ಆಳ್ವಿಕೆಯನ್ನು ಮಾಡಿರುವುದನ್ನು ನಾವು ಇವರ ಅಳ್ವಿಕೆಯನ್ನು ಇವರು ಮಾಡಿದ ಕೆಲಸಗಳ ಹಿನ್ನಲೆಯಲ್ಲಿ ಇವರ ರಾಜಕೀಯ ಸಾಧನೆಗಳನ್ನು ನೋಡಬಹುದು.

೫.೩.೧. ಆಡಳಿತ ಪದ್ಧತಿ

ಚಿತ್ರದುರ್ಗದ ಪಾಳೆಗಾರರು ರಾಜ್ಯಡಳಿತ ಪದ್ಧತಿಯು ವಿಜಯನಗರದ ಅರಸರ ಆಡಳಿತ ವಿಧಾನವನ್ನೇ ಹೋಲುತ್ತಿತ್ತು. ಚಿತ್ರದುರ್ಗದ ನಾಯಕರ ಆಡಳಿತ ವ್ಯವಸ್ಥೆಯ ಮುಖ್ಯವಾಗಿ ಎರಡು ಭಾಗವಾಗಿ ವಿಂಗಡಿಸಬಹುದು. ಅವುಗಳೆಂದರೆ ರಾಜ್ಯಡಳಿತ (ಕೇಂದ್ರ) ಮತ್ತು ಗ್ರಾಮಾಡಳಿತ ಅಂದು ಗ್ರಾಮಗಳನ್ನು ವಿಶೇಷ ಸಂದರ್ಭದಲ್ಲಿ ಪ್ರತ್ಯೇಕ ಘಟಕಗಳಾಗಿ ಪರಿಗಣಿಸಲಾಗುತ್ತಿತ್ತು. ಪ್ರತಿಗ್ರಾಮವು ಸಹ ತನ್ನದೇ ಆದಂತಹ ಸ್ವತಂತ್ರ ಅಸ್ತಿತ್ವವನ್ನು ಹೊಂದಿದ್ದವು ಎಂಬುದಕ್ಕೆ ಇವರ ಶಾಸನಗಳೆ ಸಾಕ್ಷಿ. ಈ ನಾಯಕರು ತಮ್ಮ ರಾಜ್ಯವನ್ನು ನಾಡು, ಸೀಮೆ, ಸ್ಥಳ, ಮಾಗಣಿ, ಹೋಬಳಿ, ಪಟ್ಟಣ, ಗ್ರಾಮ ಮುಂತಾದವುಗಳಾಗಿ ವಿಭಾಗಿಸಿರುವುದನ್ನು ಶಾಸನಗಳಿಂದ ತಿಳಿಯಬಹುದು. ಆಡಳಿತ ಅನುಕೂಲಕ್ಕಾಗಿ ಸಂಸ್ಥಾನವನ್ನು ಈ ನಾಯಕರು ಅನೇಕ ವಿಭಾಗಗಳಾಗಿ ವಿಂಗಡಿಸಿದ್ದರು. ಅವುಗಳಲ್ಲಿ ಮುಖ್ಯವಾಗಿ ಸೀಮೆ, ವೆಂತೆ ಮತ್ತು ಚಾವಡಿ ಎಂಬ ವಿಭಾಗಗಳಿದ್ದವು. ಅನೇಕ ಗ್ರಾಮಗಳು ಸೇರಿ ಸೀಮೆ ಅನೇಕ ಸೀಮೆಗಳು ಸೇರಿ ವೆಂತೆ, ವೆಂತೆಗಳನ್ನು ಸೇರಿಸಿ ಚಾವಡಿ ಎಂಬ ವಿಭಾಗ ಮಾಡಿದ್ದರು. ಆಡಳಿತದ ಮೇಲ್ವಿಚಾರಣೆಗೆ ಪ್ರತಿಯೊಂದು ಗ್ರಾಮದಲ್ಲೂ ಗೌಡ, ಶ್ಯಾನುಭೋಗ,

ತಳವಾರ ಮೊದಲಾದ ಆಯಾಗಾರದವರನ್ನ ನೇಮಿಸುತ್ತಿದ್ದರು. ಸೀಮೆ, ವೆಂತೆ, ಚಾವಡಿ ಮತ್ತು ರಾಜ್ಯಗಳ ಆಡಳಿತವು ಪಾರುಪತ್ತೇಗಾರ, ನಾಡಗೌಡ, ನಾಯಕ, ದಳವಾಯಿಯರ ಕೈಯಲ್ಲಿರುತ್ತಿತ್ತು.

ಆಡಳಿತ ನಿರ್ವಹಣೆ ಕಷ್ಟವೆಂದು ಕಂಡುಬಂದಾಗ ತಮ್ಮ ಹುದ್ದೆಯನ್ನು ಇತರರಿಗೆ ವಹಿಸಿಕೊಡುವ ಪದ್ದತಿ ಇದ್ದಿತೆಂದು ಶಾಸನಗಳಿಂದ ತಿಳಿದುಬರುತ್ತದೆ. "ಕ್ರಿ.ಶ.೧೫೮೧ರ ರೊಟ್ಟಿಹಳ್ಳಿಯ ಗೌಡಿಕೆಯನ್ನು ಸಿದ್ದಾಪುರದ ಸಿದ್ದಣ್ಣಗೌಡ ಎಂಬುವನು ೨೦೦ ವರಹಗಳನ್ನ ಪಡೆಯುವುದರ ಮೂಲಕ ವಿಕ್ರಯಿಸಿರುವುದನ್ನು ಕಾಣಬಹುದು."[೨೬] ಚಿಕ್ಕಣನಾಯಕರ ಆಡಳಿತದಲ್ಲಿ ಬಿಳಿಚೋಡು ಸೀಮೆಯ ಪಾರುಪತ್ತೆಗಾರ ಮಲ್ಲಶೆಟ್ಟಿ ಎಂಬುವನು ಅಲ್ಲಿನ ಕೆಲಸಗಾರರಿಗೆ "ಬಿಳಿಚೋಡು ಗ್ರಾಮದ ತೆರಿಗೆಯನ್ನು ಬಿಟ್ಟುಕೊಟ್ಟ ವಿಚಾರ ಶಾಸನವೊಂದರಿಂದ ತಿಳಿಯುತ್ತದೆ."[೨೭] ವಿಜಯನಗರ ಅರಸು ರಾಮರಾಜರು ಎರದಿಂಮ ರಾಜನ ಆಳ್ವಿಕೆಯಲ್ಲಿ ಅವನ ಕಾರ್ಯಕರ್ತರಾದ ಕಾಮಗೇತಿಯ ತಿಮ್ಮಣ್ಣ ನಾಯಕರು ತನ್ನ ಒಡೆಯ ಎರದಿಂಮನಿಗೆ ಪುಣ್ಯವಾಗಲೆಂದು ಹಾಗೂ ದೇವಸ್ಥಾನದಲ್ಲಿ ಪೂಜೆಯನ್ನು ನೆಡೆಸಿಕೊಂಡು ಹೋಗಲು ಹಿರಿಯೂರ ತಮ್ಮಡಿಯವರಿಗೂ ಮತ್ತು ದೇವಸ್ಥಾನದ ಬ್ರಾಹ್ಮಣರಿಗೂ ದೇವಸ್ಥಾನದಿಂದ ಬರುವ ಆದಾಯವನ್ನು ಬಿಟ್ಟ ಹಾಗೂ ಎಲ್ಲಾ ರೀತಿಯ ತೆರಿಗೆಯಿಂದ ವಿನಾಯಿತಿ ನೀಡಿದ್ದಾನೆ.

೫.೩.೨. ನ್ಯಾಯ ಪದ್ಧತಿ

ಈ ಪಾಳೆಯಗಾರರ ನ್ಯಾಯ ಪದ್ದತಿಯು ಉದಾರವಾಗಿದ್ದಿತೆಂದು ಹೇಳಬಹುದು. ಏಕೆಂದರೆ ತಪ್ಪಿತಸ್ಥನಿಗೆ ದಂಡ ವಿಧಿಸುವುದರ ಮೂಲಕ ನ್ಯಾಯ ತೀರ್ಮಾನ ಮಾಡುತ್ತಿದ್ದರು. ಜೀವಹರಣದಂತಹ ಕ್ರೂರ ಶಿಕ್ಷೆಗಳೂ ಇಲ್ಲದಿರಲಿಲ್ಲ "ಚಿಕ್ಕಣ್ಣನ ಮಗ ಮದಕರಿನಾಯಕನು ಹುಲ್ಲೂರು ಗ್ರಾಮದ ವೀರಭದ್ರದೇವರ ಪೂಜಾರಿಯು ದೇವರ ಆರಾಧನೆಗೆಂದು ಕೊಟ್ಟಿರುವುದನ್ನು ದುರುಪಯೋಗ ಮಾಡಿದ್ದರಿಂದ ಅವನಿಂದ ೨೪ ಹಣ ದಂಡವನ್ನು ವಸೂಲುಮಾಡಿದನಲ್ಲದೆ, ಆ ಸಂಗತಿಯನ್ನು ದಳವಾಯಿ ಮಲ್ಲಪ್ಪನಿಗೆ ವಹಿಸಿಕೊಟ್ಟನು."[೨೮] ಬಿಚ್ಚುಗತ್ತಿ ಭರಮಣ್ಣನಾಯಕನ ಕಾಲದಲ್ಲಿ ತಪ್ಪಿತಸ್ಥರನ್ನು ಅವರ ಹಳೆಯ ದಾಖಲೆಗಳನ್ನು ಪರಿಶೀಲಿಸುವುದರಿಂದಲೂ ದಿಷ್ಟಿ ದೀವಿಗೆ ಪರೀಕ್ಷೆಯಿಂದಲೂ ಮುದ್ದೆತುಪ್ಪದ ಪ್ರಮಾಣದಿಂದಲೂ ಬ್ರಾಹ್ಮಣರನ್ನು ಧರ್ಮಶಾಸ್ತ್ರದಲ್ಲಿ ವಿಘ್ನೇಶ್ವರಶಾಸ್ತ್ರವನ್ನು ಓದುವುದರ ಮೂಲಕವು ತಪ್ಪನ್ನು ಕಂಡು ಹಿಡಿದು ದಂಡ ವಿಧಿಸುತ್ತಿದ್ದರು. ಆಯಾ ಸ್ಥಳದ ೧೨ಜನ ಕೈವಾಡದವರು ಒಮ್ಮತಾಭಿಪ್ರಾಯ ಸೂಚಿಸುವುದರ ಮೂಲಕ ತಪ್ಪಿತಸ್ಥನನ್ನು ದಂಡನೆಗೆ ಗುರಿ ಮಾಡುತ್ತಿದ್ದರು. ಗಡಿಪಾರು ಮಾಡುವ ಪದ್ದತಿಯೂ ಇದ್ದಿತು. ವಿವಾದಗಳನ್ನು ಶೀಘ್ರವಾಗಿ ಪರಿಹರಿಸುತ್ತಿದ್ದರು. ವಿಶೇಷವೆಂದರೆ, ಬಹುಪಾಲು ವಿವಾದಗಳು ರಾಜಧಾನಿಯಾಗಿದ್ದ ಚಿತ್ರದುರ್ಗದಲ್ಲೆ ಪರಿಹರಿಸಲ್ಪಡುತ್ತಿದ್ದವು.

ಚಿತ್ರದುರ್ಗದ ನಾಯಕರು ಸಾಮಾನ್ಯ ಅರಸು ಮನೆತನಗಳಲ್ಲಿ ಒಂದಾಗಿದು ಸ್ಥಳೀಯವಾಗಿ ಜನರ ಸಮಸ್ಯೆಗಳನ್ನು ಬಲ್ಲವರಾಗಿದ್ದು, ಅವರಿಗೆ ನ್ಯಾಯವನ್ನ ಒದಗಿಸುವಲ್ಲಿ ಇವರು ತುಂಬ ಮಹತ್ವವನ್ನು ಹೊಂದಿದು, ಯಾವುದೇ ಕಠಿಣ ಶಿಕ್ಷೆಯನ್ನು ನೀಡದೆ ತುಂಬ ಸರಳವಾದ ಶಿಕ್ಷೆಗಳನ್ನ ನೀಡುವುದರ ಮೂಲಕ ನ್ಯಾಯತಿರ್ಮಾನಗಳನ್ನ ಹೊಂದಿದ್ದರು. ಹಾಗೆಯೇ ಯಾವುದೇ ರೀತಿಯ ತಪ್ಪುಗಳನ್ನು ನೆಡೆಯದಂತೆ ಇವರು ಮಾಡಿದ ತಪ್ಪಿಗೆ ಸರಳ ಮರ್ಗಗಳಲ್ಲಿ ಶಿಕ್ಷೆ ಮತ್ತು ದಂಡಗಳನ್ನು ನೀಡುತ್ತಿದ್ದರು. ಇದರಿಂದ ಜನರ ಮೇಲೆ ಚಿತ್ರದುರ್ಗದ ಪಾಳೆಗಾರರು ರೀತಿಯ ಕಠಿಣ ಶಿಕ್ಷೆಗಳನ್ನ ಇವರು ನೀಡುತ್ತಿರಲಿಲ್ಲ.

ಈ ನಾಯಕರು ಯಾವುದೇ ತರಹದ ಜೀವ ತೆಗೆಯುವಂತೆ ಶಿಕ್ಷೆಗಳನ್ನ ವಿದಿಸದೆ ತುಂಬ ಸರಳವಾಗಿ ನ್ಯಾಯವನ್ನ ಒದಗಿಸುತ್ತಿದ್ದರು. ಇವರು ತಪ್ಪು ಮಾಡಿದವರನ್ನ ತಮ್ಮ ಕೆಲವು ವಿಧಾನಗಳ ಮೂಲಕ ಅವುಗಳನ್ನ ನ್ಯಾಯ ತಿರ್ಮಾನ ಮಾಡುವ ಮೂಲಕ ಸರಿ–ತಪ್ಪುಗಳನ್ನ ಕಂಡು ಹಿಡಿದು ತಪ್ಪು ಮಾಡಿದ ಹಿನ್ನಲೆಯಲ್ಲಿ ಶಿಕ್ಷೆ ಮತ್ತು ದಂಡವನ್ನು ವಿಧಿಸುವ ಕ್ರಿಯೆಯು ಈ ಪಾಳೆಗಾರರಲ್ಲಿ ಇತ್ತು. ಯಾವುದೇ ವ್ಯಕ್ತಿ ತಪ್ಪು ಮಾಡಿದರೆ ಅವನಿಗೆ ಶಿಕ್ಷೆ ಮತ್ತು ದಂಡದೊಂದಿಗೆ ಅವನ ಕೆಲಸದ ಜವಬ್ದಾರಿಯನ್ನು ಬಿಡಿಸಿ ಬರೆಯವರಿಗೆ ವಹಿಸುತ್ತಿದ್ದರು. ಈ ಮೂಲಕ ಚಿತ್ರದುರ್ಗದ ನಾಯಕರು ನ್ಯಾಯತಿರ್ಮಾನವನ್ನ ಕೈಗೊಳುತ್ತಿದ್ದರು. ತಪ್ಪ–ಸರಿಗಳನ್ನು ಸಾಕ್ಷಿಗಳ ಆಧಾರದ ಮೇಲೆಯೂ ಕೂಡ ಅವುಗಳನ್ನ ಪರಿಶೀಲಿಸಿ ತಪ್ಪು ಮಾಡಿದವರಿಗೆ ಶಿಕ್ಷೆಯನ್ನು ನೀಡುತ್ತಿದ್ದರು. ಸಾಕ್ಷಿ ಪರಿಶೀಲನೆಯಲ್ಲಿ ಹೆಚ್ಚು ಜನರ ಓಮ್ಮತವನ್ನು ಪಡೆದು ಅವರ ಅಭಿಪ್ರಾಯದ ಮೇರೆಗೆ ನ್ಯಾಯತೀರ್ಮಾನ ಕೈಗೊಳ್ಳುತ್ತಿದ್ದರು. ಈ ರೀತಿಯಲ್ಲಿ ಇವರ ನ್ಯಾಯ ವ್ಯವಸ್ಥೆಯನ್ನು ನೋಡಬಹುದಾಗಿದೆ.

೫.೩.೩.ಅಗ್ರಹಾರಗಳ ನಿರ್ಮಾಣ

ವಿದ್ಯಾಸಂಸ್ಥೆಗಳಿಗೂ, ವಿದ್ವಜನರಿಗೂ ಈ ಪಾಳೆಯಗಾರರು ಪೋಷಕರಾಗಿದ್ದರು. ಕಡೆಯ ಅರಸ ರಾಜಾ ವೀರ ಮದಕರಿನಾಯಕನ ಆಸ್ಥಾನವು ಹಲವಾರು ಪಂಡಿತರಿಂದಲೂ, ವಕೀಲರಿಂದಲೂ, ಸಂಗೀತಗಾರರಿಂದಲೂ ತುಂಬಿದ್ದಿತು. ತಮ್ಮ ಆಳ್ವಿಕೆಯಲ್ಲಿ ಈ ಪಾಳೆಯಗಾರರು ಹಲವಾರು ಅಗ್ರಹಾರ ಮತ್ತು ಬ್ರಹ್ಮಪುರಿಗಳನ್ನು ಸ್ಥಾಪಿಸಿದ್ದರು. ಕಸ್ತೂರಿ ರಂಗಪ್ಪನಾಯಕನ ಮಗ "ಇಮ್ಮಡಿ ಮದಕರಿನಾಯಕನು (ಕ್ರಿ.ಶ.೧೬೫೨–೧೬೭೪) ಚಿತ್ರದುರ್ಗ ಸಂಸ್ಥಾನದ ಚಿತ್ರಹಳ್ಳಿ ಸೀಮೆ ಹೀರೆಗುಂಟನೂರು ಮಾಗಣಿಗೆ ಸೇರಿದ ಕಡಲೆಗುದ್ದು ಗ್ರಾಮದಲ್ಲಿ ಅಗ್ರಹಾರವನ್ನು ಸ್ಥಾಪಿಸಿ ಅದನ್ನು ಕ್ಷಾತ್ರಭಟ್ಟರ ವಂಶಜನಾದ ತಿಮ್ಮಣ್ಣ ಎಂಬಾತನಿಗೆ ವಹಿಸಿಕೊಟ್ಟು, ಸಂಗಡ ಆಗ್ರಾಮದ ಆದಾಯವನ್ನು ಆ ಅಗ್ರಹಾರದ ಅಭಿವೃದ್ದಿಗೆ ಬಿಟ್ಟುಕೊಟ್ಟು ಶಿಲಾಶಾಸನ ಮತ್ತು ತಾಮ್ಮ ಪಟ ಶಾಸನಗಳನ್ನು ಬರೆಸಿದನು."[೨೯]

"ಚಿಕ್ಕಣ್ಣನಾಯಕನ ಮಗ ಮದಕರಿನಾಯಕನು ಜಗಲೂರು ಸೀಮೆಯ ಕಸವನಹಳ್ಳಿ ಗ್ರಾಮವನ್ನು ಅಗ್ರಹಾರವನ್ನಾಗಿ ಮಾಡಿ ಆ ಗ್ರಾಮದ ಉತ್ಪತ್ತಿಯನ್ನು ವಾರಿಜನಾಬೆಯ ಸೀನಯ್ಯನಿಗೂ ನೀಡುತ್ತಾನೆ."[೩೦] ವಿಜಯನಗರದ ಅರಸು ಶ್ರೀರಂಗರಾಯನ ಕಾರ್ಯಕರ್ತರಿಂದ ಕಾಮಗೇತಿ ಕಸ್ತೂರಿ ರಂಗಪ್ಪ ನಾಯಕರ ಪುತ್ರನಾದ ಇಮ್ಮಡಿ ಮದಕರಿನಾಯಕನು ಭಟ್ಟರ ಭಗುತಪುಟ್ಟಣ್ಣನ ಮಗನಾದ ರಾಮನಿಗೆ ಮನಪ್ರೀತಿಗಾಗಿ "ಚಿತ್ರಹಳ್ಳಿ ಸೀಮೆಯ ಹೀರೆ ಸೀಮೆಯ ಹೀರೆಗುಂಡನೂರು ಮಾಗಣಿಗೆಸಲ್ಲುವ ಕಡಲೆಗುಡ್ಡು ಗ್ರಾಮವನ್ನು ಅಗ್ರಹಾರವಾಗಿ ಮಾಡಿ ದಾನ ಕೊಟ್ಟು ಆ ಪ್ರದೇಶದಲ್ಲಿ ಬರುವ ಎಲ್ಲಾ ತರಹದ ತೆರಿಗೆಯು ರಾಮನಿಗೆ ಸೇರತಕ್ಕದೆಂದು ಇಮ್ಮಡಿ ಮದಕರಿನಾಯಕನು ತಮ್ಮ ಹಾಗೂ ಶಿಲಾಶಾಸನಾಂಕಿತವನ್ನು ಹಾಕಿಸಿದ್ದಾನೆ."[೩೧] "ಕ್ರಿಶ ೧೭೧೮ ರಲ್ಲಿ ಕಾಮಗೇತಿ ಮದಕರಿನಾಯಕ ಪುತ್ರರಾದ ಭರಮಣ್ಣನಾಯಕರು ತಮ್ಮ ಭಟಯರುಗಳಿಗೆ ಕೀರ್ತಿಸುಕೃತವಾಗಬೇಕು ಬಣ್ಣೋರ ಭಟರ ಪುಟ್ಟಪ್ಪನ ಪುತ್ರನಾದ ಭಟರ ತಿಮ್ಮಪ್ಪನಿಗೆ ದುರ್ಗದ ಸೀಮೆಯ ಹಳುವದಾರಯೆಂಬ ಗ್ರಾಮದ ಅಗ್ರಹಾರವನ್ನ ದಾನವಾಗಿ ನೀಡಲಾಗಿದೆ."[೩೨]

ಕ್ರಿ.ಶ.೧೫೬೮ರಲ್ಲಿ ವೀರ ಸದಾಶಿವರಾಯರು ವಿಜಯನಗರ ಸಿಂಹಾಸನಾರೂಢರಾಗಿ ಆಳ್ವಿಕೆ ನೆಡೆಸುತ್ತಿರುವಾಗ ಶ್ರೀಮನ್ ಮಹಾಮಂಡಲೇಶ್ವರನಾದ ಅಳಿಯರಾಮರಾಯದೇವ ಮಹಾರಾಯರು ಮುಸ್ಲಿಂರ ವಿರುದ್ಧ ಹೋರಾಟದಲ್ಲಿ ಸಾಯುತ್ತಾನೆ. ಆ ಸಂದರ್ಭದಲ್ಲಿ ಹೊಳಲ್ಕೆರೆ ನಾಗರವು ಮುಸ್ಲಿಂರಿಂದ ಕೊಳ್ಳೆಹೊಡೆಯಲ್ಪಟ್ಟಿದ್ದು ಅರಾಜಕತೆ ಉಂಟಾಗುತ್ತದೆ. ಆಗ ರಾಜಶ್ರೀ ತಿರುಮಲ ರಾಜಯದೇವ ಮಹಾ ಅರಸುಗಳು ಶ್ರೀಮನ್ ಮಹಾನಾಯಕಾಚಾರ್ಯ ಕಾಮಗೇತಿಯ ಮದಕರಿನಾಯಕರಿಗೆ ಅಮರ ಮಾಗಣಿಗೆ ಪಾಲಿಸಿದ ಮೇಲೆ ಅಖಿಲವಾಗಿ ಹೊದ ಹೊಳಲ್ಕೆರೆಯ ಸೀಮೆಯ ಶ್ರೀಮದನಗೋಪಾಲಕೃಷ್ಣಸ್ವಾಮಿ ದೇವರನ್ನು ಪುನರ್ ಪ್ರತಿಷ್ಠಾಪನೆ ಮಾಡಿಸಿ. ದೇವಾಲಯವನ್ನು ಜೀಣೋದ್ದಾರ ಮಾಡಿಸಿದ. ಹಾಗೂ ಆ ದೇವಾಲಯದ ಅರ್ಚಕರಾದ ಆತ್ರೇಸ ಯಜುಶಾಖಾಯಿಗಳಾದ ವೆಂಕಟ್ಟಯ್ಯ ಧೀಕ್ಷೆತರ ತಮ್ಮ ಮೈದುನನಾದ ಗುಲ್ಲಿಯಪುನ ಮುಖಾಂತರ "ಭೀಮಾ ಅಗ್ರಹಾರದ ಭೂಮಿಯನ್ನು ಕೂಡುಗೆಯಾಗಿ ನೀಡಿದರು."[೩೩]

ಕ್ರಿ.ಶ.೧೭೨೧ರಲ್ಲಿ ಕಾಮಗೇತಿ ಕಸ್ತೂರಿ ಭರಮಣ್ಣನಾಯಕ ಮಗ ಮದಕರಿನಾಯಕರು ಅಪ್ಪಣೆಯ ಮೇರೆಗೆ ಕೋಮಾರ ಚಿಕ್ಕಣ್ಣನವರು ಆನೆ ಸಿದ್ರಿಗ್ರಾಮಕ್ಕೆ ಬಂದು ಚಿಕ್ಕಣ್ಣನು "ಆನೆಸಿದ್ದಿ ಅಗ್ರಹಾರವನ್ನು ಅಲ್ಲಿನ ಗೌಡ ಮತ್ತು ಅಯಾಗಾರರ ಸಮ್ಮತಿಯೊಡನೆ ಕವಿಕೊನಪ್ಪನ ಅಗ್ರಹಾರವೆಂದು ಕರೆದು, ಅದಕ್ಕೆ ಬೇಕಾದ ಭೂಮಿಯನ್ನು ದತ್ತಿ ಕೊಟ್ಟಿದ್ದನು."[೩೪] ಬಿಚ್ಚುಗತ್ತಿ ಭರಮಣ್ಣನಾಯಕನು (ಕ್ರಿ.ಶ.೧೬೮೯–೧೭೨೦) ಬಿಳಿಚೋಡುಸೀಮೆ ಯೋಳಗಣ "ಕಲ್ಲೇನಹಳ್ಳಿ ಗ್ರಾಮದ ಅಗ್ರಹಾರವನ್ನು ಉಗ್ರಾಣದ

ರಂಗಪ್ಪನಿಗೆ ವಹಿಸುವುದರ ಮೂಲಕ ಆ ಗ್ರಾಮದ ಹುಟ್ಟುವಳಿಯನ್ನು ಅನುಭವಿಸುವಂತೆ ಶಾಸನ ನೀಡಿದ್ದನು."[೩೫]

"ಕ್ರಿ.ಶ.೧೬೮೭ ರಲ್ಲಿ ಹಿಂದೆ ವಿಜಯನಗರ ಕೃಷ್ಣದೇವರಾಯನ ಕಾಲದಲ್ಲಿ ಆನೆಸಿದ್ರಿ ಗ್ರಾಮದ ಅಗ್ರಹಾರವು ಸ್ಥಾಪಿಸಲ್ಪಟ್ಟಿದ್ದು, ಈ ಅಗ್ರಹಾರವನ್ನು ಮಹಾನಾಯಕಾಚರ್ಯ ಕಾಮಗೇತಿ ಕಸ್ತೂರಿ ಮದಕರಿನಾಯಕನು ಅದನ್ನು ಜೀರ್ಣೋದ್ದಾರ ಮಾಡಿ ಶಿಲಾಸ್ಥಾಪನೆ ಮಾಡಿಸಿ ಶಿಲಾಶಾಸನ ಬರೆಸಿದ್ದನು."[೩೬] ತಮ್ಮ ಹಿರಿಯರಿಗೆ ಪುಣ್ಯವಾಗಲೆಂಬ ಉದ್ದೇಶದಿಂದ ಕೊಡಗನೂರ ಸೀಮೆಗೆ ಸೇರಿದ್ದ ಹಾಗೂ ಹಾಳು ಬಿದ್ದಿದ್ದ ಮಲ್ಲಣ್ಣನಹಳ್ಳಿಯನು. ದುರಸ್ತಿಗೊಳಿಸಿ ಗ್ರಾಮವನ್ನು ಅಭಿವೃದ್ಧಿಗೊಳಿಸಿ ಅದಕ್ಕೆ "ಮದಕರಿಪುರವೆಂದು ನಾಮಕರಣಮಾಡಿ ಅಗ್ರಹಾರ ಸ್ಥಾಪಿಸುವುದರ ಮೂಲಕ ಶಾಮಾಚಾರ್ಯರೆಂಬುವರಿಗೆ ಆ ಗ್ರಾಮವನ್ನು ಬಿಟ್ಟು ಕೊಟ್ಟನು."[೩೭] ೧೬೮೯ರಲ್ಲಿ ಭರಮಣ್ಣನಾಯಕರು ತಮ್ಮ ಹಿರಿಯೂರಿಗೆ ಪುಣ್ಯ ಸುಕೃತವಾಗಬೇಕೆಂಬ ಆಪ್ತಸ್ತಂಭ ಸೂತ್ರದ ಭಾರದ್ವಜ ಗೋತ್ರದ ಆರು ವೇಲಿ ಹರಿಭಟ್ಟರ ಪುತ್ರನಾದ ವೆಂಗ್ಗಂಭಟ್ಟರ ಪುತ್ರನಿಗೆ "ಸಂತೇಬೆನ್ನೂರು ಸೀಮೆಯ ದೇಮಚಾರ್ಯವನ ದುರ್ಗವೆಂಬ ಗ್ರಾಮದ ಅಗ್ರಹಾರವನ್ನು ಮಹಾವೈಶಾಖ ಶುದ್ದಪೌರ್ಣಮಿ ಪುಣ್ಯಕಾಲದಲ್ಲಿ ಶಿವಾರ್ಪಿತವಾಗಿ ದಾನ ನೀಡಿದ್ದನು."[೩೮] ವಾಲ್ಮಿಕಿ ಗೋತ್ರದ ಕಾಮಗೇತಿ ಭರಮಣ್ಣನಾಯಕರು (ಕ್ರಿ.ಶ.೧೭೮೯) ತಮ್ಮ ಹಿರಿಯರಿಗೆ ಪುಣ್ಯಸುಕೃತವಾಗಲೆಂದು "ಬೇತೂರು ಸೀಮೆಯ ಚಿಕ್ಕಬೂದಿಹಾಳು ಗ್ರಾಮದ ಅಗ್ರಹಾರವನ್ನು ಅಶ್ವಲಾಯನ ಸೂತ್ರದ ವಿಶ್ವಾಮಿತ್ರ ಗೋತ್ರದ ಬೆಳಗಾವಿ ರಾಮಣ್ಣನಾಯಕರ ಪಾತ್ರ ಸೂರಪ್ಪನಾಯಕ ಪುತ್ರ ರಾಮಣ್ಣ ನಾಯಕರಿಗೆ ಪೌರ್ಣಮಿ ಪುಣ್ಯಕಾಲದಲ್ಲಿ ದಾನ ನಿಡಿದ್ದಾನೆ."[೩೯]

ಕ್ರಿ.ಶ.೧೭೩೩ ರಲ್ಲಿ ವಾಲ್ಮೀಕಿ ಗೋತ್ರದ ಮದಕರಿನಾಯಕ ಕ್ಷಾತ್ರರೂ ಭರಮಣ್ಣನಾಯಕರ ಪುತ್ರರೂ ಆದ ಮದಕರಿನಾಯಕರು ಶಿಂಜನೀ ಗೋತ್ರದ ಭಟ್ಟರ ಬಾಗ್ಯರಿನ ಪುಟ್ಟಯ್ಯನ ತಿಮ್ಮಪ್ಪನ ಪೌತ್ರರಾದ ಪುಟ್ಟಿಯ್ಯನ ಪುತ್ರರಾದ ವಾರಿಜನಭ ಸೀನಯ್ಯ. ಭರಮಯ್ಯ. ಇವರಿಗೆ ತಾವು ಆಳುವಂಥ ರಾಜ್ಯದ "ಜಗಳೂರು ಸೀಮೆಯೊಳಗಿನ ಕಸವನಹಳ್ಳಿ ಎಂಬ ಗ್ರಾಮವನ್ನು ಅಗ್ರಹಾರವಾಗಿ ಪಾಲಿಸಿ ಅದನ್ನು ಅವರ ಪೌತ್ರ ಪಾರಂಪರ್ಯವಾಗಿ ಅನುಭವಿಸಿಕೊಂಡು ಬರಬಹುದು ಎಂದು ಬರೆಯಿಸಿಕೊಟ್ಟಿದ್ದನು."[೪೦] "ಕ್ರಿ.ಶ೧೭೭೬ರಲ್ಲಿ ಕಾಮಗೇತಿ ಕಸ್ತೂರಿ ಭರಮಣ್ಣನಾಯಕರ ಮಗ ಮದಕರಿನಾಯಕರು ನಾಕೇಕೆರೆ ಗ್ರಾಮವನ್ನು ಅಗ್ರಹಾರವಾಗಿ ಮಾಡಿ ಆ ಗ್ರಾಮವನ್ನು ತಿರುವಲೆ ಪೆನುಗೊಂಡ ರಾಮಚಾಯ್ಯರ ಮಗ ಶ್ರೀನಿವಾಸಚಾರ್ಯರಿಗೆ ದಾನ ಕೊಟ್ಟಿದ್ದನು ಈ ಶಾಸನದ ಮೂಲಕ ತಿಳಿಯುತ್ತವೆ."[೪೧]

ಒಟ್ಟಾರೆ ಕ್ರಿ.ಶ೧೫೬೮ ರಿಂದ ಚಿತ್ರದುರ್ಗವನ್ನು ಕೇಂದ್ರವಾಗಿಕೊಂಡು ಆಳ್ವಿಕೆ ಮಾಡಿದ ಚಿತ್ರದುರ್ಗದ ಪಾಳೆಗಾರರ ಅವಧಿಯಲ್ಲಿ ಇವರು ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ

ಅನೇಕ ಸಾಧನೆಗಳನ್ನು ಮಾಡಿರುವುದು ನಮಗೆ ಶಾಸನಗಳ ಮೂಲಕ ತಿಳಿದುಬರುತ್ತದೆ. ಇದರಿಂದ ಈ ಪಾಳೆಗಾರರು ಸಮಾಜಮುಖಿ ಮತ್ತು ಜನೋಪಯೋಗಿ ಕೆಲಸಗಳನ್ನು ಮಾಡುವುದರ ಮೂಲಕ ಚಿತ್ರದುರ್ಗ ಪ್ರದೇಶವನ್ನು ಇತಿಹಾಸ ಪ್ರಸಿದ್ಧ ನಾಡಾಗಿ ರೂಪಿಸುವಲ್ಲಿ ಸಾಕಷ್ಟು ಇವರ ಪರಿಶ್ರಮ ಕಂಡುಬಂದಿದ್ದು. ಇವರು ಮಾಡಿದ ಕೆಲಸಗಳು ಇಂದಿಗೂ ಸಾಕ್ಷಿಯಾಗಿ ನಿಂತಿವೆ ಎಂಬುದನ್ನು ಶಾಸನಗಳ ಮೂಲಕ ತಿಳಿಯಬಹುದು.

ಅಡಿಟಿಪ್ಪಣಿಗಳು

೧. ಶ್ರೀನಿವಾಸ, ಎಂ.ವಿ.(ಸಂ), **ಚಂದ್ರವಳ್ಳಿ,** *ಚಿತ್ರದುರ್ಗ ಜಿಲ್ಲೆಯ ಇತಿಹಾಸ ಕುರಿತ ಲೇಖನಗಳು,* ಪು.೮೭.

೨. ರಾಜಶೇಖರಪ್ಪ ಬಿ., **ದುರ್ಗಶೋಧನ,** ಪು.೧೦೮.

೩. ಎ.ಕೆ.XI, ಹಿರಿ.೫೩(ರೈಸ್)

೪. ರಾಮರಾವ್ ಬಿ.(ಸಂ), **ಕಣಕುಪ್ಪೆ ಕೋಟೆ ಕಟ್ಟದ ಕೈಫಿಯತ್ತು,** ಸಂ.೧೬. ಪು.೧೨೮–೧೩೬.

೫. ಶ್ರೀನಿವಾಸ, ಎಂ.ವಿ.(ಸಂ), **ಪೂರ್ವೋಕ್ತ,** ಪು.೮೮.

೬. ರಾಜಶೇಖರಪ್ಪ ಬಿ. **ಪೂರ್ವೋಕ್ತ,** ಪು.೧೦೮.

೭. ಎ.ಕ.XI, ಚಿತ್ರ ೩೧(ರೈಸ್)

೮. ಎ.ಕ.XI, ಚಿತ್ರ ೪೧(ರೈಸ್)

೯. ಎ.ಕ.XI, ಹೊಳಲ ೫೫(ರೈಸ್)

೧೦. ಎ.ಕ.XI, ಹೊಳಲ ೬೬(ರೈಸ್)

೧೧. ಎ.ಕ.XI, ಹೊಳಲ ೬(ರೈಸ್)

೧೨. ಶ್ರೀನಿವಾಸ, ಎಂ.ವಿ.(ಸಂ), **ಪೂರ್ವೋಕ್ತ,** ಪು.೮೬

೧೩. ಅದೇ ಪು.೪೯–೮೭

೧೪. ಎ.ಕ.XI, ಚಿತ್ರ ೨೨(ರೈಸ್)

೧೫. ಎ.ಕ.XI, ಚಿತ್ರ ೭(ರೈಸ್)

೧೬. ಎ.ಕ.XI, ಹೊಳಲ ೮೧(ರೈಸ್)

೧೭. ಎ.ಕ.XI, ಹಿರಿ ೭(ರೈಸ್)

೧೮. ಎ.ಕ.XI, ಹಿರಿ ೫೯(ರೈಸ್)

೧೯. ಎ.ಕ.XI, ಹಿರಿ ೬೦(ರೈಸ್)

೨೦. ಎ.ಕ.XI, ಹಿರಿ ೭೬(ರೈಸ್)

೨೧. ಎ.ಕ.XI, ಚಿತ್ರ ೪೧(ರೈಸ್)

೨೨. ಎ.ಕ.XI, ಚಿತ್ರ ೫೧(ರೈಸ್)

೨೩. ಎ.ಕ.XI, ಚಿತ್ರ ೭(ರೈಸ್)

೨೪. ಎ.ಕ.XI, ಹೊಳಲ ೭(ರೈಸ್).

೨೫. ಎ.ಕ.XI, ಹೊಳಲ ೫೪(ರೈಸ್)

೨೬. ಎ.ಕ.XI, ಚಿತ್ರ ೪೮(ರೈಸ್)

೨೭. ಎ.ಕ.XI, ಚಿತ್ರ ೮೦(ರೈಸ್)

೨೮. ಎ.ಕ.XI, ಚಿತ್ರ ೨೨(ರೈಸ್)

೨೯. ಎ.ಕ.XI, ಚಿತ್ರ ೮೪(ರೈಸ್)

೩೦. ಶ್ರೀನಿವಾಸ, ಎಂ.ವಿ.(ಸಂ), **ಪೂರ್ವೋಕ್ತ**, ಪು.೮೫.

೩೧. ಎ.ಕ.XI, ಚಿತ್ರ ೫೧(ರೈಸ್)

೩೨. ಎ.ಕ.XI, ಚಿತ್ರ ೫೬ (ರೈಸ್)

೩೩. ಎ.ಕ.XI, ಹೊಳಲ ೭(ರೈಸ್)

೩೪. ಎ.ಕ.XI, ಹಿರಿ ೫೭(ರೈಸ್)

೩೫. ಶ್ರೀನಿವಾಸ, ಎಂ.ವಿ.(ಸಂ), **ಪೂರ್ವೋಕ್ತ**, ಪು.೮೫.

೩೬. ಎ.ಕ.XI, ಹಿರಿ ೫೮(ರೈಸ್)

೩೭. ಶ್ರೀನಿವಾಸ, ಎಂ.ವಿ.(ಸಂ), **ಪೂರ್ವೋಕ್ತ**, ಪು.೮೬.

೩೮. ಎ.ಕ.XI, ಚನ್ನ ೨೦(ರೈಸ್)

೩೯. ಎ.ಕ.XI, ದಾವಣ ೧೬(ರೈಸ್)

೪೦. ರಾಜಶೇಖರಪ್ಪ ಬಿ., **ಪೂರ್ವೋಕ್ತ**, ಪು.೧೨೧.

೪೧. ಎ.ಕ.XI, ಹಿರಿ ೭೪(ರೈಸ್)

ಅಧ್ಯಾಯ ಆರು

ಸಮಾರೋಪ

ಅಧ್ಯಾಯ ಆರು

ಸಮಾರೋಪ

ಕನ್ನಡ ನಾಡಿನ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ನಂತರದಲ್ಲಿ ಕೆಲವು ನೂತನ ರಾಜಕೀಯ ಶಕ್ತಿಗಳು ಅಸ್ತಿತ್ವಕ್ಕೆ ಬಂದವು. ಇವುಗಳಲ್ಲಿ ಚಿತ್ರದುರ್ಗ ನಾಯಕರದೂ ಒಂದು. ಕ್ರಿ.ಶ.೧೬ನೇ ಶತಮಾನದ ಮಧ್ಯಕಾಲದಿಂದ ೧೮ನೇ ಶತಮಾನದ ಉತ್ತರಾರ್ಧದವರೆಗೆ ಎರಡು ಶತಮಾನಗಳಿಗೂ ಹೆಚ್ಚು ಕಾಲ ಇವರು ಆಳ್ವಿಕೆ ನೆಡೆಸುವುದರ ಮೂಲಕ ವಿಜಯನಗರ ಅರಸರು ಹಾಕಿಕೊಟ್ಟ ಮಾರ್ಗದಲ್ಲಿಯೇ ಮುನ್ನೆಡೆದು ಪ್ರಾದೇಶಿಕ ಮಟ್ಟದಲ್ಲಿ ಗುರುತಿಸಿಕೊಂಡವರೆಂದರೆ ಚಿತ್ರದುರ್ಗ ನಾಯಕರು. ಹೀಗೆ ಗುರಿತಿಸಿಕೊಂಡ ಇವರು ಚಿತ್ರದುರ್ಗ ಪ್ರದೇಶದಲ್ಲಿ ತಮ್ಮ ಪ್ರಾಬಲ್ಯವನ್ನು ಗುರುತಿಸಿಕೊಳ್ಳುವುದರ ಮೂಲಕ ನಾಡಿನ ಸ್ಥಳೀಯ ಅರಸು ಮನೆತನಗಳ ಚರಿತ್ರೆಯ ಅಧ್ಯಯನದಲ್ಲಿ ಇವರೂ ಮಹತ್ವವನ್ನ ಪಡೆದ್ದಿದ್ದಾರೆ. ಹೀಗೆ ಇವರು ಕೂಡ ನಾಡಿನ ಏಳಿಗೆಗಾಗಿ ಹೋರಾಡಿರುವುದು ಕಾಣಬಹುದು. ಇಂತಹ ನಾಯಕ ಬೆಳವಣಿಗೆ ಮತ್ತು ಸಾಧನೆಗಳನ್ನ ಈ ಅಧ್ಯಯನದಲ್ಲಿ ತಿಳಿಸುವ ಪ್ರಯತ್ನ ನೆಡೆದಿದೆ.

ಒಂದು ಪ್ರದೇಶದ ವ್ಯವಸ್ಥಿತವಾದ ಆಡಳಿತ ನಿರ್ವಹಣೆಯ ಕಾರ್ಯಕ್ಕೆ ರಾಜ್ಯವ್ಯವಸ್ಥೆಯೇ ನಿರ್ವಹಣೆಯೇ ಮುಖ್ಯವಾಗಿ ಬೇಕಾಗುವಂತ ಅಂಶವೆಂದು ಹೇಳಿದರು ಇಂತಹ ರಾಜ್ಯವ್ಯವಸ್ಥೆಯ ಏಳಿಗೆಗೆ ಬಹುಮುಖ್ಯವಾಗಿ ಸೈನ್ಯವ್ಯವಸ್ಥೆ ಎಷ್ಟು ಅವಶ್ಯಕ ಎಂಬುದನ್ನ ತಿಳಿಸಲಾಗಿದ್ದು. ಇಂತಹ ಸೈನ್ಯ ವ್ಯವಸ್ಥೆಯ ನಿರ್ಮಾಣದಲ್ಲಿ ಸಾಮಾನ್ಯ ಜನರ ಪಾತ್ರವೇನು ಸೈನ್ಯ ವ್ಯವಸ್ಥೆಯ ಪ್ರಾಚೀನತೆ ಮತ್ತು ಸೈನ್ಯ ವ್ಯವಸ್ಥೆಯ ವಿಭಾಗ ಕ್ರಮಗಳನ್ನ ಈ ಅಧ್ಯಯನದಲ್ಲಿ ನೋಡಬಹುದು. ಪ್ರಮುಖವಾಗಿ ಈ ಸೈನ್ಯ ವ್ಯವಸ್ಥೆಯಲ್ಲಿ ನಾಯಕ ಜನಾಂಗದ ಪಾತ್ರ ಎಷ್ಟರಮಟ್ಟಿಗೆ ಕಂಡುಬಂದಿದೆ, ಮಿಲಿಟರಿ ದೃಷ್ಟಿಯಿಂದ ಇವರ ಮಹತ್ವವೇನು, ಸೈನ್ಯ ವ್ಯವಸ್ಥೆಯಲ್ಲಿ ಇವರು ಗುರುತಿಸಿಕೊಳ್ಳುವುದರ ಜೊತೆಗೆ ಕನ್ನಡ ನಾಡಿನ ರಾಜ ಮನೆತನಗಳ ಸೈನ್ಯ ವ್ಯವಸ್ಥೆಯಲ್ಲಿ ಇವರ ಪಾತ್ರ ಸೈನಿಕ ವೃತ್ತಿಯಿಂದ ಇವರು

ಬೇರೆ-ಬೇರೆ ಅಧಿಕಾರ ಪಡೆಯುವುದು ಕರ್ನಾಟಕದ ಸೈನ್ಯವೆಂದರೆ ಬೇಡರ ಸೈನ್ಯವೆಂದೇ ಎನ್ನುವಷ್ಟರ ಮಟ್ಟಗೆ ಇವರು ಸೈನ್ಯ ವ್ಯವಸ್ಥೆಯಲ್ಲಿ ಗುರುತಿಸಿಕೊಂಡಿದ್ದರ ಬಗ್ಗೆ ಅಧ್ಯಯನದಲ್ಲಿ ತಿಳಿಸಿದೆ.

ಕರ್ನಾಟಕದಲ್ಲಿ ನಾಯಕ ಜನಾಂಗವು ಎಲ್ಲಿಂದ ಹುಟ್ಟಿ ಅದು ಬೇರೆ-ಬೇರೆ ಪ್ರದೇಶಗಳಲ್ಲಿ ಯಾವ-ಯಾವ ಹೆಸರುಗಳಿಂದ ಗುರುತಿಸಿ ಕೂಂಡಿದೆ. ಹಾಗೆಯೇ ಈ ಜನಾಂಗದಲ್ಲಿ ಕಂಡು ಬರುವ ಉಪ-ಪಂಗಡಗಳ ಪರಿಚಯ, ಮೊದಲು ವೃತ್ತಿಯಿಂದ ಬಂದ ಹೆಸರುಗಳು ನಂತರ ಇವುಗಳ ಜಾತಿ ವಾಚಕಗಳಾಗಿರುವುದು ಹಾಗೆಯೇ ಇವರ ಮೂಲವೃತ್ತಿ ಬೇಟೆಯಾಗಿದ್ದು, ಈ ವೃತ್ತಿಯೇ ಇವರ ಬೆಳವಣಿಗೆಗೆ ಕಾರಣವಾದ ಅಂಶಗಳು ಇವರ ಬೆಳವಣಿಗೆಯು ಕ್ರಿ.ಪೂ.ದಿಂದಲೂ ಗುರುತಿಸಿಕೊಂಡಿದ್ದು. ನಂತರ ರಾಜಮನೆತನಗಳ ಸೈನ್ಯ ವ್ಯವಸ್ಥೆಯಲ್ಲಿ ಪ್ರಬಲವಾಗಿ ಗುರುತಿಸಿಕೊಂಡು ಬರುವುದರೊಂದಿಗೆ ಇವರ ಬೆಳವಣಿಗೆಗೆ ಇದು ಸಹಾಯಕವಾಗಿ ಇವರು ಸ್ವತಂತ್ರ್ಯ ಅಸ್ತಿತ್ವವನ್ನ ಪಡೆದು ಪ್ರಾದೇಶಿಕವಾಗಿ ಬೆಳೆದು ಬಂದಿದ್ದರ ಬಗ್ಗೆ ತಿಳಿಸಲಾಗಿದೆ.

ಇನ್ನೂರು ವರ್ಷಕ್ಕಿಂತಲೂ ಹೆಚ್ಚು ಕಾಲ ಚಿತ್ರದುರ್ಗದಲ್ಲಿ ಆಳ್ವಿಕೆ ಮಾಡಿದ ಚಿತ್ರದುರ್ಗದ ನಾಯಕರ ಶಾಸನಗಳಾನ್ನಧರಿಸಿ ಚಿತ್ರದುರ್ಗದ ನಾಯಕ ಪಾಳೆಗಾರರ ರಾಜಕೀಯ ಚರಿತ್ರೆಯನ್ನ ಮತ್ತು ಈ ರಾಜಕೀಯ ಚರಿತ್ರೆಯಲ್ಲಿ ಚಿತ್ರದುರ್ಗ ಪಾಳೆಗಾರರು ಯಾರಾರು ಎಂಬುದನ್ನ ಇವರ ಕಾಲಾವಧಿ ಎಷ್ಟು ಇವರು ಯಾವ-ಯಾವ ಪ್ರದೇಶಗಳಲ್ಲಿ ಆಡಳಿತದ ಮೂಲಕ ಇವರ ಚಾರಿತ್ರಿಕ ಹಿನ್ನೆಲೆಯನ್ನ ನೋಡುವುದರ ಜೊತೆಗೆ ಇವರ ವಂಶಾವಳಿಯ ಮೂಲಕ ಈ ವಂಶದಲ್ಲಿ ಎರಡು ವಂಶಗಳು ಮುಖ್ಯವಾಗಿ ಕಾಣಿಸಿ ಕೊಂಡಿರುವುದನ್ನ ನಾವು ಗಮನಿಸಬಹುದು. ಒಂದು ಮತ್ತಿ ಸಂತತಿ. ಇನ್ನೊಂದು ಬಿಳಿಚೊಡು ಸಂತತಿ. ಈ ಸಂತತಿಗಳಲ್ಲಿ ಬರುವ ಪಾಳೆಗಾರರು ಯಾರಾರು ಎಂಬುದನ್ನ ಇಲ್ಲಿ ಗುರುತಿಸಲಾಗಿದೆ. ನಂತರದಲ್ಲಿ ಚಿತ್ರದುರ್ಗದ ನಾಯಕರ ಶಾಸನಗಳು ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ. ಹಿರಿಯೂರು, ಹೊಳಲ್ಕೆರೆ ತಾಲೂಕುಗಳಲ್ಲಿ ಈ ನಾಯಕರಿಗೆ ಸಂಬಂದಿಸಿದಂತೆ ಒಟ್ಟು ೩೫ ಶಾಸನಗಳು ದೊರೆತಿದ್ದು. ದೊರೆತ ಈ ಶಾಸನಗಳಲ್ಲಿ ದಾನಕ್ಕೆ ಸಂಬಂದಿಸಿದಂತೆ, ಧಾರ್ಮಿಕತೆಗೆ ಸಂಬಂಧಿಸಿದಂತೆ, ಸಾಮಾಜಿಕ ಅಂಶಗಳಿಗೆ ಸಂಬಂಧಿಸಿದಂತೆ, ಇವರ ಆಡಳಿತಕ್ಕೆ ಸಂಬಂದಿಸಿದಂತೆ ಶಾಸನಗಳ ದೊರೆತಿವೆ. ಈ ಶಾಸನಗಳನ್ನ ಮೂರು ತಾಲೂಕುಗಳಿಂದ ಪ್ರತ್ಯೇಕವಾಗಿ ಒಂದೊಂದು ತಾಲೂಕಿನಲ್ಲಿ ದೊರೆತ ಶಾಸನಗಳನ್ನ ಆಧರಿಸಿ ಆಯಾ ತಾಲೂಕಿನಲ್ಲಿ ಸಿಕ್ಕಂತಹ ಶಾಸನಗಳು ವೈವಿಧ್ಯತೆಯನ್ನ ತಿಳಿಸಿದೆ.

ಚಿತ್ರದುರ್ಗ ನಾಯಕರಿಗೆ ಸಂಬಂದಿಸಿದಂತೆ ಶಾಸನಗಳನ್ನ ಆಧರಿಸಿ ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಗೆ ಸಂಬಂದಿಸಿದಂತೆ ವ್ಯಾಪ್ತಿಗೆ ಸಂಬಂದಿಸಿದಂತೆ ಈ ನಾಯಕರ ಸಾಧನೆಗಳನ್ನು ಗುರುತಿಸಿಸುವ ಪ್ರಯತ್ನಗಳು ನೆಡೆದಿದ್ದು. ದೊರೆತ ಶಾಸನಗಳ ಆಧಾರದ ಮೇಲೆ ಚಿತ್ರದುರ್ಗ ನಾಯಕರು ತಮ್ಮ

ಆಡಳಿತಾವದಿಯಲ್ಲಿ ಧಾರ್ಮಿಕವಾಗಿ, ರಾಜಕೀಯವಾಗಿ ಇವರ ಸಾಧನೆಗಳನ್ನು ನೋಡಲಾಗಿದೆ. ಧಾರ್ಮಿಕ ದೃಷ್ಠಿಯಿಂದ ಈ ನಾಯಕರು ತಮ್ಮ ಕಾಲಾವಧಿಯಲ್ಲಿ ಅನೇಕ, ಧಾರ್ಮಿಕ ಕೆಲಸಗಳಿಗೆ ದಾನನೀಡಿರುವುದನ್ನು ಶಾಸನಗಳ ಮೂಲಕ ಗುರುತಿಸಲಾಗಿದೆ, ಈ ದಾನಗಳನ್ನು ದೇವಾಲಯ, ಮಠ–ಮಾನ್ಯಗಳಿಗೆ, ಪೂಜ್ಯಕಾರ್ಯ ಮತ್ತು ಉತ್ಸವಗಳಿಗೆ, ವ್ಯಕ್ತಿಗಳಿಗೆ ಸಂಬಂದಿಸಿದಂತೆ ದಾನ ನೀಡಿರುವ ಅಂಶಗಳನ್ನು ತಿಳಿಸಲಾಗಿದ್ದು. ಸಾಮಾಜಿಕವಾಗಿ ಕೆರೆಗಳನ್ನು ನಿರ್ಮಾಣಮಾಡಿರುವುದು, ಅನ್ನ–ಛತ್ರಗಳನ್ನು ನಿರ್ಮಾಣ ಮಾಡಿರುವುದು, ಹಾಗೆಯೇ ಜನವಸತಿಗಾಗಿ ಊರುಗಳನ್ನ ನಿರ್ಮಾಣ ಮಾಡಿರುವುದನ್ನು ಸಾಮಾಜಿಕ ಅಂಶಗಳನ್ನಾಧರಿಸಿ ಗುರುತಿಸಿದೆ. ರಾಜಕೀಯವಾಗಿ ಇವರ ಆಡಳಿತ ವ್ಯವಸ್ಥೆ ಮತ್ತು ನ್ಯಾಯಾಡಳಿತದಲ್ಲಿ ಸರಳತೆಯನ್ನ ಹೊಂದಿದ್ದರು. ಎಂಬ ಅಂಶಗಳನ್ನಾ ತಿಳಿಯುವುದರೊಂದಿಗೆ ಅನೇಕ ಅಗ್ರಹಾರಗಳನ್ನ ನಿರ್ಮಾಣ ಮತ್ತು ಜೀರ್ಣೋದ್ದಾರವನ್ನು ಮಾಡಿರುವ ಅಂಶಗಳನ್ನು ಈ ಅಧ್ಯಯನದಲ್ಲಿ ತಿಳಿಸಿದೆ. ಹೀಗೆ ಚಿತ್ರದುರ್ಗ ನಾಯಕರ ಸಾಧನೆಗಳನ್ನು ಗುರುತಿಸುವ ಪ್ರಯತ್ನ ಮಾಡಿದೆ.

ಮುಖ್ಯವಾಗಿ ಚಿತ್ರದುರ್ಗ ಜಿಲ್ಲೆಯ ತಾಲೂಕುಗಳಾದ ಹಿರಿಯೂರು, ಹೊಳಲ್ಕೆರೆ, ಚಿತ್ರದುರ್ಗ ತಾಲೂಕನ್ನ ಅನುಲಕ್ಷಿಸದರೊಂದಿಗೆ ಈ ತಾಲೂಕಿನಲ್ಲಿ ದೊರೆತ ಶಾಸನಗಳನ್ನ ವಿಂಗಡಿಸುವುದರ ಮೂಲಕ ಅಧ್ಯಯನಕ್ಕೆ ಒಳಪಡಿಸಿಕೊಳ್ಳುವುದರೊಂದಿಗೆ, ಒಂದೊಂದು ತಾಲೂಕಿನಲ್ಲಿ ಕಂಡುಬರುವ ಶಾಸನಗಳನ್ನ ಪ್ರತ್ರೇಕಿಸಲಾಗಿದ್ದು, ಈ ಮೂಲಕ ಅಯಾ ತಾಲೂಕಿನ ಶಾಸನಗಳ ಸಂಖ್ಯೆ ಮತ್ತು ಅವುಗಳ ವಿಂಗಡಣೆಯನ್ನು ಮಾಡಲಾಗಿದೆ.

ಪ್ರಬಲವಾಗಿದ್ದ ಚಿತ್ರದುರ್ಗ ನಾಯಕರು ಪ್ರಜಾಹಿತ ಕಾರ್ಯಗಳನ್ನು ಸಮರ್ಪಕವಾಗಿ ಪೂರೈಸುವಲ್ಲಿ ಅತ್ಯಂತ ಆಸಕ್ತಿ ವಹಿಸಿದ್ದರು. ಹಲವಾರು ದೇವಾಲಯಗಳು, ಅಗ್ರಹಾರಗಳು. ಕೆರೆ–ಕಟ್ಟೆಗಳು, ಕೋಟೆ–ಕೋತ್ತಲಗಳು ಇವರ ಕಾಲದಲ್ಲಿ ನಿರ್ಮಾಣಗೊಂಡವು. ಇವರು ನೀಡಿದ ದಾನ ದತ್ತಿಗಳ ದೋತಕವಾಗಿ ಶಾಸನಗಳಿವೆ, ಆಹಾರ, ಆರ್ಥಿಕ, ಧಾರ್ಮಿಕ ಹಾಗೂ ರಾಜಕೀಯ ಸ್ಥಿತಿಗಳನ್ನು ಚಿತ್ರಿಸುವ ಸಾಧನೆಗಳೆನಿಸಿವೆ. ಇಂತಹ ಸಾಧನೆಗಳನ್ನು ಚಿತ್ರದುರ್ಗದ ಪಾಳೆಯಗಾರರಿಗೆ ಸಂಬಂಧಿಸಿದ ಶಿಲಾಶಾಸನ, ತಾಮ್ರಶಾಸನ ಇತ್ಯಾದಿಗಳಿಂದ ತಿಳಿಸಲಾಗಿದೆ.

ಚಿತ್ರದುರ್ಗ ತಾಲೂಕಿನಲ್ಲಿ ನಾಯಕರಿಗೆ ಸಂಬಂಧಿಸಿದಂತೆ ಒಟ್ಟು ೧೪ ಶಾಸನಗಳು ದೊರೆತಿವೆ ಅದರಲ್ಲಿ ೧೨ ಶಿಲಾಶಾಸನಗಳಾದರೆ ೨ ತಾಮ್ರ ಶಾಸನಗಳೆಂದು ವಿಂಗಡಿಸಲಾಗಿದ್ದು, ದೊರೆತ ಶಾಸನಗಳಲ್ಲಿ ಚಿತ್ರದುರ್ಗ ನಾಯಕರು ದಾನಗಳಿಗೆ, ನ್ಯಾಯಡಾಳಿತಕ್ಕೆ, ಅಗ್ರಹಾರ, ಸಾಮಾಜಿಕ ಕಾರ್ಯಗಳನ್ನ ಗುರಿತಿಸುವಂತ ಶಾಸನಗಳು ದೊರೆತಿವೆ ಹಿಗೆ ದೊರೆತ ಶಾಸನಗಳನ್ನ ವಿಸ್ತೃತವಾಗಿ ವಿಶ್ಲೇಷಿಸಲಾಗಿದೆ. ಹಿಗೆ ಚಿತ್ರದುರ್ಗ ತಾಲೂಕಿನ ಶಾಸನಗಳನ್ನು ಗುರುತಿಸಲಾಗಿದೆ. ಚಿತ್ರದುರ್ಗ

ತಾಲೂಕಿನಲ್ಲಿ ದೊರೆತ ಶಾಸನಗಳಲ್ಲಿ ಆರು ಶಾಸನಗಳು ದಾನಕ್ಕೆ ಸಂಬಂದ ಪಟ್ಟಂತವಾಗಿದ್ದು ದಾನಕ್ಕೆ ಹೆಚ್ಚು ಮಹತ್ವ ನೀಡಿರುವುದು ನಾವು ಗಮನಿಸಬಹುದು.

ಹಿರಿಯೂರು ತಾಲೂಕಿನಲ್ಲಿ ಚಿತ್ರದುರ್ಗ ನಾಯಕರಿಗೆ ಸಂಬಂಧಿಸಿದಂತೆ ಒಟ್ಟು ೧೦ ಶಾಸನಗಳು ದೊರೆತ್ತಿದ್ದು, ನಾಯಕರ ಮೂಲ ಪುರುಷ ಮತ್ತಿ ತಿಮ್ಮಣ್ಣನಾಯಕನಿಗೆ ಸಂಬಂಧಿಸಿದಂತೆ ಶಾಸನವು ಈ ತಾಲೂಕಿನಲ್ಲಿಯೇ ದೊರೆತ್ತಿದ್ದು ವಿಶೇಷವಾಗಿದೆ. ಹಾಗೆಯೇ ಈ ಶಾಸನಗಳನ್ನ ಅದರಿಸಿ ದಾನಕ್ಕೆ ಸಂಬಂಧಿಸಿದಂತೆ, ರಾಜಕೀಯ, ಸಾಮಾಜಿಕ, ಹಾಗೂ ಧಾರ್ಮಿಕ ಸಾದನೆಗಳ ವಿಚಾರವಾಗಿ ಈ ಶಾಸನಗಳು ಬೆಳಕು ಚೆಲ್ಲಿರುವುದು ಈ ತಾಲೂಕಿನ ಶಾಸನಗಳಿಂದ ತಿಳಿದುಬರುತ್ತದೆ.

ಹೊಳಲ್ಕೆರೆ ತಾಲೂಕಿನಲ್ಲಿ ಚಿತ್ರದುರ್ಗ ನಾಯಕರಿಗೆ ಸಂಬಂಧಿಸಿದಂತೆ ಒಟ್ಟು ೧೧ ಶಾಸನಗಳು ದೊರೆತ್ತಿದ್ದು, ಇದರಲ್ಲಿ ೩ ತಾಮ್ರ ಶಾಸನಗಳಾಗಿವೆ. ಈ ತಾಲೂಕಿಲ್ಲಿ ದೊರೆತ ಶಾಸನಗಳಿಂದ ಚಿತ್ರದುರ್ಗ ನಾಯಕರಾದ ಕಸ್ತೂರಿ ರಂಗಪ್ಪನಾಯಕ, ಭರಮಣ್ಣನಾಯಕನಿಗೆ ಸಂಬಂಧಪಟ್ಟ ಶಾಸನಗಳಾಗಿದ್ದು, ಹೆಚ್ಚಾಗಿ ಧಾರ್ಮಿಕ ವಿಚಾರವನ್ನ ತಿಳಿಸುವಂತಅ ಶಾಸನಗಳಾಗಿ ಕಂಡುಬಂದಿವೆ. ನಾಯಕರ ಅಳ್ವಿಕೆಯಲ್ಲಿ ಧಾರ್ಮಿಕ, ಅರ್ಥಿಕ, ಸಾಮಾಜಿಕ, ಮತ್ತು ರಾಜಕಿಯ ವಿಷಯಗಳ ಮೇಲೆ ಬೆಳಕುಚಲ್ಲುವುದರ ಜೊತೆಗೆ ಅಗ್ರಹಾರಗಳ ನಿರ್ಮಾಣಮಾಡಿರುವುದನ್ನು ಇವರ ಶಾಸನಗಳಿಂದ ತಿಳಿದುಬರುತ್ತದೆ.

ಈ ರೀತಿಯಲ್ಲಿ ಚಿತ್ರದುರ್ಗ ನಾಯಕರು ಕೂಡ ತಮ್ಮ ಅಳ್ವಿಕೆಯ ಅವಧಿಯಲ್ಲಿ ಅನೇಕ ಸಾಮಾಜೊಪಯೋಗಿ ಕೆಲಸಗಳನ್ನು ಮಾಡಿದ್ದಾರೆ. ಅಂತಹ ಸಾಮಾಜಿಕ ಕಾರ್ಯಗಳಾದ, ಕೆರೆಯ ನಿರ್ಮಾಣ, ತೆರಿಗೆ ಬಿಟ್ಟಿದ್ದರ ಬಗ್ಗೆ, ಊರು ನಿರ್ಮಾಣ ಮಾಡಿದ್ದರ ಬಗ್ಗೆ, ಊರಿನಲ್ಲಿ ಸಾಲು ಮರಗಳನ್ನು ಹಾಕಿಸಿದ್ದರ ಬಗ್ಗೆ, ಈ ತಾಲೂಕಿನಲ್ಲಿ ದೊರೆತ ಶಾಸನಗಳಿಂದ ತಿಳಿದುಬರುತ್ತವೆ. ಈ ರೀತಿಯಲ್ಲಿ ಶಾಸನಗಳು ವಿವಿದ ವಿಚಾರಗಳ ಮೇಲೆ ಬೆಳಕು ಚೆಲ್ಲಿರುವುದನ್ನು ಈ ತಾಲೂಕಿನ ಶಾಸನಗಳಲ್ಲಿ ಕಾಣಬಹುದಾಗಿದೆ. ಎಂಬುದನ್ನು ಶಾಸನಗಳ ಮೂಲಕ ತಿಳಿಸಲಾಗಿದೆ.

ಚಿತ್ರದುರ್ಗ ನಾಯಕರನ್ನು ಕುರಿತಂತೆ ಇನ್ನು ಸಾಕಷ್ಟು ಅಧ್ಯಯನಗಳು ನಡೆಯಬೇಕಾಗಿದೆ. ಇವರ ೨೧೧ ವರ್ಷಗಳ ಆಡಳಿತಾವದಿಯ ಸಮಗ್ರವಾದ ಅಧ್ಯಯನದ ಅವಶ್ಯಕತೆ ಇನ್ನು ಮಾಡಬೇಕಾಗಿದ್ದು. ಸ್ಥಳೀಯ ಅರಸರ ಚರಿತ್ರೆಯಲ್ಲಿ ಚಿತ್ರದುರ್ಗ ನಾಯಕರು ಪ್ರಬಲವಾದ ಅರಸು ಮನೆತನವಾಗಿ ಕಂಡುಬರುವುದರಿಂದ ಇದು ನಾಡಿನ ಚರಿತ್ರೆಯ ಅಧ್ಯಯನದಲ್ಲಿ ಮಹತ್ವಸ್ಥಾನ ಪಡೆಯಬೇಕಾದರೆ ಸಮಗ್ರವಾದ ಅಧ್ಯಯನಗಳು ಅವಶ್ಯಕತೆ ಇದ್ದು, ಇವರ ಆಡಳಿತ ಸಾಧನೆಗಳ ಬಗ್ಗೆ ನಾಡಿನಾದ್ಯಂತ ಇವರ ಪ್ರಾಬಲ್ಯವನ್ನ ಅಧ್ಯಯನಗಳ ಮೂಲಕ ತಿಳಿಸುವ ಪ್ರಯತ್ನಗಳು ನಡೆಯಬೇಕಾಗಿದೆ.

ಗ್ರಂಥಋಣ

VOLUMS

Epigraphia Caranatic(**EC**)

Epigraphia Indica(**EI**)

South Indian Incriptions(**SII**)

ಪುಸ್ತಕಗಳು

* ಅನಸೂಯ ಎಸ್. ಕೆಂಪನಹಳ್ಳಿ., ೨೦೧೩, **ಪರಂಪರೆಯ ಪಯಣದಲ್ಲಿ ನನ್ನವರ ನೆನಪು,** ಸಂವಹನ ಪ್ರಕಾಶನ, ಮೈಸೂರು.
* ಅನಸೂಯ ಎಸ್. ಕೆಂಪನಹಳ್ಳಿ., ೨೦೧೪, **ಮಹರ್ಷಿ ವಾಲ್ಮೀಕಿ ದಿವ್ಯದರ್ಶನ ಸಂ-೧,** ಶಬರಿ ಪ್ರಕಾಶನ, ಮೈಸೂರು.
* ಅಮರೇಶ ಯತಗಲ್, ೨೦೦೮, **ವಾಲ್ಮೀಕಿ ಸಮುದಾಯ ಮತ್ತು ಚರಿತ್ರೆ,** ವಾಲ್ಮೀಕಿ ಸಾಹಿತ್ಯ ಸಂಪಾದ, ಹರ್ತಿಕೋಟೆ.
* ಅಯ್ಯರ್ ಎಲ್.ಕೆ.ಎ., ೧೯೮೮, **ದಿ ಮೈಸೂರು ಟ್ರೈಬ್ಸ್ ಆಂಡ್ಯ್ ಕ್ಯಾಸ್ಟ್ಸ್, ವ್ಯಾಲೂಮ್-೨,** ಮಿಥಲ್ ಪ್ರಕಾಶನ, ದೆಹಲಿ.
* ಈಶ್ವರಪ್ಪ ಎಂ.ಜಿ., ೧೯೮೨, **ಮ್ಯಾಸಬೇಡರು,** ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.
* ಕಪಟರಾಳ ಕೃಷ್ಣರಾವ್, ೧೯೭೭, **ಸುರಪುರ ಸಂಸ್ಥಾನ ಇತಿಹಾಸ,** ಮಂಜುನಾಥ ಪ್ರಕಾಶನ, ಬೆಂಗಳೂರು.
* ಕಲಬುರ್ಗಿ ಎಂ.ಎಂ.(ಸಂ), ೧೯೯೪, **ಕರ್ನಾಟಕದ ಕೈಪಿಯತ್ತುಗಳು,** ಕನ್ನಡ ವಿಶ್ವವಿದ್ಯಾಲಯ ಹಂಪಿ.
* ಕೃಷ್ಣರಾವ್ ಎಂ.ಎ., ಹಾಲಪ್ಪ ಜಿ.ಎಸ್.(ಸಂ), ೧೯೬೪, **ಹಿಸ್ಟರಿ ಅಫ್ ಫ್ರೀಡಂ ಮೂವ್ಮೆಂಟ್ ಇನ್ ಕರ್ನಾಟಕ, ವ್ಯಾಲೂಮ್-೨,** ಬೆಂಗಳೂರು.

* ಕೋಡದ ಎಸ್.ವಿ., ೧೯೬೦, ವಿಜಯನಗರದ ನಿರ್ಣಾಯಕ ಯುದ್ಧ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.
* ಗಿರಿಜಾ ಟಿ, ೧೯೯೧, ಚಿತ್ರದುರ್ಗ ಜಿಲ್ಲಾ ದರ್ಶನ, ರೇಖಾ ಪ್ರಕಾಶನ, ದಾವಣಗೆರೆ.
* ಚಿದಾನಂದಮೂರ್ತಿ ಎಂ, ೨೦೧೧, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನ ಬುಕ್ ಹೌಸ್, ಬೆಂಗಳೂರು.
* ಚಿನ್ನಸ್ವಾಮಿ ಸೋಸಲೆ ಎನ್., ೨೦೦೪, ಸಾಮ್ರಾಜ್ಯ ಮತ್ತು ಸಂಸ್ಥಾನ, ಕನ್ನಡ ವಿಶ್ವವಿದ್ಯಾಲಯ ಹಂಪಿ.
* ಜೋಶಿ ಶಂ.ಬಾ., ೧೯೩೬, ಕರ್ನಾಟಕದ ವೀರ ಕ್ಷತ್ರಿಯರು ಅಥವಾ ಹಟ್ಟಿಕಾರರು, ಮನೋಹರ ಗ್ರಂಥಭಂಡಾರ, ಧಾರವಾಡ.
* ನಂಜುಡಸ್ವಾಮಿ ಎ.ಎಸ್., ೧೯೮೬, ಕರ್ನಾಟಕ ಪಾಳೆಗಾರರು ಮತ್ತು ಒಡೆಯರ ಇತಿಹಾಸ, ಸಮಾಜ ಪುಸ್ತಕಾಲಯ, ಧಾರವಾಡ.
* ನರಸಿಂಹಮೂರ್ತಿ ಎ.ವಿ. ಅನು(ಸಂ), ೨೦೦೧, ದೆಹಲಿ ಸುಲ್ತಾನರ ಅಧಿಪತ್ಯ ಭಾಗ-೧, ಭಾರತೀಯ ವಿದ್ಯಾಭವನ, ಬೆಂಗಳೂರು.
* ನೇಗಿನಾಳ ಎಂ.ವಿ., ಕರ್ನಾಟಕ ಸಾಹಿತ್ಯ ಕೃತಿಗಳಲ್ಲಿ ಬೇಡಜನಾಂಗ, ಘಟ್ಟಿಹೊಸಹಳ್ಳಿ ಗಟ್ಟಿಗ, ಹರ್ತಿಕೋಟೆ.
* ಪಾಟೀಲ್ ಸಿ.ಎಸ್., ೧೯೯೯, ಕರ್ನಾಟಕದ ಕೋಟೆಗಳು ಸಂ-೧, ಕನ್ನಡ ವಿಶ್ವ ವಿದ್ಯಾಲಯ ಹಂಪಿ.
* ಪುಟ್ಟಣ್ಣ ಎಂ.ಎಸ್., ೧೯೨೪, ಚಿತ್ರದುರ್ಗ ಪಾಳೆಯಗಾರರು, ದಿ ಪವರ್ ಪ್ರಿಂಟಿಂಗ್ ಪ್ರೆಸ್, ಬೆಂಗಳೂರು.
* ಫಿಲಿಯೋಜಾ ವಸುಂದರಾ, ೧೯೯೯, ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
* ಮಂಜುನಾಥ ಬೇವಿನಕಟ್ಟೆ(ಸಂ)., ೨೦೦೭. ವ್ಯಾದ ಚರಿತೆ ಬೇಡ ಕುಲಮೂಲದ ಕಥನಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ.
* ಮಹೇಶ ತಿಪ್ಪಶೆಟ್ಟಿ(ಅನು)., ೨೦೦೧, ಮೈಸೂರು ಚಾಮುಂಡೇಶ್ವರಿ ದೇವಸ್ಥಾನ ಒಂದು ಸಾಮಾಜಿಕ ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

* ಮೀರಾಸಾಬಿಹಳ್ಳಿ ಶಿವಣ್ಣ, ೧೯೮೯, **ನಾಯಕ ಜನಾಂಗದ ಒಂದು ನೋಟ,** ಹರ್ತಿಕೋಟೆ ವೀರೇಂದ್ರಸಿಂಹ(ಸಂ), ವಾಲ್ಮೀಕಿ ಜ್ಯೋತಿ, ಹರ್ತಿಕೋಟೆ.
* ಯೋಗಿಶ್ವರಪ್ಪ ಡಿ.ಎನ್., ೨೦೦೯, **ಕರ್ನಾಟಕದ ಪಾಳೆಗಾರರು,** ವಿಶ್ವಾಸ್ ಪ್ರಿಂಟ್ಸ್, ಬೆಂಗಳೂರು.
* ರಾಜಶೇಖರಪ್ಪ ಬಿ., ೨೦೦೧, **ದುರ್ಗಶೋಧನ,** ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
* ರಾಜರಾಮ ಹೆಗಡೆ, ಆಶೋಕ ಶೆಟ್ಟರ್(ಸಂ), ೨೦೦೧, **ಕರ್ನಾಟಕದ ಅರಸುಮನೆತನಗಳು,** ಕನ್ನಡ ವಿಶ್ವವಿದ್ಯಾಲಯ ಹಂಪಿ.
* ರಾಜರಾಮ ಹೆಗಡೆ, ೨೦೦೮, **ವಸಹಾತುಪೂರ್ವ ಕರ್ನಾಟಕ ರಾಜ್ಯ ಪದ್ಧತಿ,** ಕನ್ನಡ ವಿಶ್ವವಿದ್ಯಾಲಯ ಹಂಪಿ.
* ರಾಬರ್ಟ್‌ಸಿವೆಲ್, ೧೯೯೨, ಸದಾನಂದಕನವಳ್ಳಿ(ಅನು), **ಮರೆತುಹೋದ ಸಾಮ್ರಾಜ್ಯ,** ಕನ್ನಡ ವಿಶ್ವವಿದ್ಯಾಲಯ ಹಂಪಿ.
* ರಾಮರಾವ್ ಬಿ.(ಸಂ), **ಕಣಕುಪ್ಪೆ ಕೋಟೆಕಟ್ಟಡದ ಕೈಫಿಯತ್ತು,** ೧೯೩೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
* ಲಕ್ಷ್ಮಣ್ ತೆಲಗಾವಿ, ೨೦೦೯, **ಚಿತ್ರದುರ್ಗನಾಯಕ ಅರಸರು ರಾಜಕೀಯಚಿತ್ರ,** ವಾಲ್ಮೀಕಿ ಸಾಹಿತ್ಯ ಸಂಪಾದ, ಹರ್ತಿಕೋಟೆ.
* ಲಕ್ಷ್ಮಣ್ ತೆಲಗಾವಿ, ೧೯೮೯, **ಹರತಿಸಿರಿ,** ವಾಲ್ಮೀಕಿ ಸಾಹಿತ್ಯ ಸಂಪಾದ, ಹರ್ತಿಕೋಟೆ.
* ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ ಎಂ.ವಿ.(ಸಂ), ೧೯೭೬, ಹುಲ್ಲೂರು ಶ್ರೀನಿವಾಸ ಜೋಯಿಸರ **ಐತಿಹಾಸಿಕ ಲೇಖನಗಳು,** ಚಿತ್ರದುರ್ಗ.
* ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ ಎಂ.ವಿ.(ಸಂ), ೧೯೯೫, ಹುಲ್ಲೂರು ಶ್ರೀನಿವಾಸ ಜೋಯಿಸರ **ಸಂಶೋಧನಾ ಲೇಖನಗಳು,** ಚಿತ್ರದುರ್ಗ.
* ವಸು ಎಂ.ವಿ.(ಸಂ), ೨೦೦೧, **ದಕ್ಷಿಣ ಕರ್ನಾಟಕ ಅರಸುಮನೆತನಗಳು,** ಕನ್ನಡ ವಿಶ್ವದ್ಯಾಲಯ ಹಂಪಿ.
* ವಿಜಯಾ ಪೂಣಚ್ಚ ತಂಬಂಡ (ಸಂ), ೨೦೧೦, **ಚರಿತ್ರೆ ಬರವಣಿಗೆ ಕ್ರಮಗಳು ಮತ್ತು ಸಂಶೋಧನಾ ವಿಧಾನ ಚರಿತ್ರೆ ಸಂ–೧,** ಕನ್ನಡ ವಿಶ್ವವಿದ್ಯಾಲಯ ಹಂಪಿ.

* ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೨, **ಕರ್ನಾಟಕದಲ್ಲಿ ಬೇಡನಾಯಕ ವೀರರ ಆರಾಧನೆಗಳು,** ಹರ್ತಿಕೋಟೆ ವೀರೇಂದ್ರಸಿಂಹ(ಸಂ), ಘಟ್ಟಿಹೊಸಹಳ್ಳಿ ಗಟ್ಟಿಗ, ಹರ್ತಿಕೋಟೆ.

* ವೀಣಾ ಎಂ.ಪಿ., ೨೦೦೦, **ಮನೆ ಸಮಾಜ ಮತ್ತು ಸಂಸ್ಕೃತಿ,** ನೆಲಮನೆ ಪ್ರಕಾಶನ, ಶ್ರೀರಂಗಪಟ್ಟಣ.

* ವೀರನಾಯಕ ಎಚ್.ವಿ., ೧೯೮೭, **ಕ್ಷಾತ್ರಾಂಶ ಪ್ರಭೋಧ,** ಸಾಹಿತ್ಯ ಸಂಪದ ಹರ್ತಿಕೋಟೆ, ಚಿತ್ರದುರ್ಗ(ಜಿ).

* ವೆಂಕಟರಂಗೋಕಟ್ಟಿ(ಅನು), ೧೮೯೩, **ಗೇಜೆಟಿಯರ್,ಮುಂಬೈ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು, ಮುಂಬೈ ಗವರ್ನ್‌ಮೆಂಟ್,** ಸೆಚಿಟ್ರಲ್ ಬುಕ್ ಡಿಪೋ, ಮುಂಬೈ.

* ವೆಂಕಟರತ್ನ ಎ.ವಿ., ೧೯೭೪, **ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ,** ಮೈಸೂರು ವಿಶ್ವವಿದ್ಯಾಲಯ, ಮೈಸೂರು.

* ವೆಂಕಟೇಶಯ್ಯ ಎಂ.ಜಿ. ೧೯೭೧, **ಚಿತ್ರದುರ್ಗದ ಪಾಳೆಯಗಾರರು,** ಐ.ಬಿ.ಎಚ್ ಪ್ರಕಾಶನ ಬೆಂಗಳೂರು.

* ಶಾಸ್ತ್ರೀ ಬಿ.ಎನ್. ೧೯೭೦, **ಕರ್ನಾಟಕ ಪರಂಪರೆ, ಕರ್ನಾಟಕ ಸರ್ಕಾರ,** ಬೆಂಗಳೂರು.

* ಶಿವಶಂಕರ ಎಂ.ಎಲ್., ಚನ್ನಬಸಪ್ಪ ಎಸ್.ಪಾಟೀಲ್(ಸಂ), ೧೯೯೬, **ವಿಜಯನಗರ ಅಧ್ಯಯನ ಸಂಪುಟ-೨,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ, ಮೈಸೂರು.

* ಶೈಲಜ ಬಿ.ಎಂ., ೨೦೧೩, **ಪಾಳೆಗಾರರ ಶಾಸನ ಸಂಪುಟ-೧,** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿ ಮೈಸೂರು

* ಶ್ರೀಕಂಠಯ್ಯ ಎಸ್., ೧೯೮೩, **ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರಣ,** ಗೀತಾಬುಕ್ ಹೌಸ್, ಮೈಸೂರು.

* ಶ್ರೀನಿವಾಸ, ಎಂ.ವಿ.(ಸಂ), ೧೯೭೬, **ಚಂದ್ರವಳ್ಳಿ,** ಜಿಲ್ಲಾ ಇತಿಹಾಸ ಸಂಶೋಧನಾ ಮಂಡಳಿ, ಚಿತ್ರದುರ್ಗ.

* ಶ್ರೀನಿವಾಸ ನಾಯಕ ಬಿ.ಎಸ್., ೧೯೮೪, **ಚಿತ್ರದುರ್ಗ ಕಾಮಗೇತಿ ಅರಸರು ಸರ್ಜಾರಾಮಸ್ವಾಮಿ ನಾಯಕರು,** ಚಿಕ್ಕಮಗಳೂರು.

* ಶ್ರೀಸತ್ಯನ್ ಬಿ.ಎನ್.(ಸಂ), ೧೯೬೭, **ಚಿತ್ರದುರ್ಗ ಜಿಲ್ಲೆ ಗೇಜೆಟಿಯರ್, ಮೈಸೂರು ರಾಜ್ಯ ಗೇಜೆಟಿಯರ್,** ಬೆಂಗಳೂರು.

* ಷೇಕ್ ಅಲಿ ಮತ್ತು ಇತರರು, ೧೯೯೭, **ಕರ್ನಾಟಕ ಚರಿತ್ರೆ ಸಂಪುಟಗಳು**, ಕನ್ನಡ ವಿಶ್ವವಿದ್ಯಾಲಯ ಹಂಪಿ.
* ಸೋಮಶೇಖರ್ ಎಸ್.ವೈ., ೨೦೦೯, **ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ**, ಸಂಚಿಕೆ ಪ್ರಕಾಶನ. ಚಿತ್ರದುರ್ಗ.
* ಹರ್ತಿಕೋಟೆ ವೀರೇಂದ್ರಸಿಂಹ, ೧೯೯೮, **ನಾಯಕ ಜನಾಂಗದ ಪರಂಪರೆ**, ಹರ್ತಿಕೋಟೆ ವೀರೇಂದ್ರಸಿಂಹ(ಸಂ), ವಾಲ್ಮೀಕಿ ಕಿರಣ, ಹರ್ತಿಕೋಟೆ.
* ಹರ್ತಿಕೋಟೆ ವೀರೇಂದ್ರಸಿಂಹ ಮತ್ತು ತೇಜಸ್ವೀಕಟ್ಟೆಮನಿ(ಸಂ), ೨೦೦೨, **ಘಟ್ಟಿಹೊಸಹಳ್ಳಿ ಗಟ್ಟಿಗ**, ಹರ್ತಿಕೋಟೆ, ಚಿತ್ರದುರ್ಗ(ಜಿ).

ENGLISH BOOKS

* Dikshit G.S, 1964, **The Local Self Government in Medieval Karnataka,** Karnataka University, Dharwar.
* Saletore B.A., 1934, **Social and Political Life in The Vijayanagara Eimpir, Vol- II,** povl B.G.and Co, Madras.
* Sarkar D.C., 1960, **Military History of India, Calcutta.**

ಮಹಾಪ್ರಬಂಧಗಳು

* ಅಮರೇಶ ಯತಗಲ್, ೨೦೦೫, **ಕರ್ನಾಟಕ ನಾಯಕ ಅರಸು ಮನೆತನಗಳ ವಿಶಿಷ್ಟ ಸಾಂಸ್ಕೃತಿಕಾಚರಣೆಗಳು: ಚಾರಿತ್ರಿಕ ಅಧ್ಯಯನ**, ಕನ್ನಡ ವಿಶ್ವವಿದ್ಯಾಲಯ ಹಂಪಿ.
* ದುರುಗಪ್ಪ ಎಂ.ಕೆ., ೨೦೦೩, **ವಿಜಯನಗರೋತ್ತರ ಕಾಲೀನ ಬೇಡಜನಾಂಗದಲ್ಲಾದ ಸ್ಥಿತ್ಯಾಂತರಗಳು: ಚಾರಿತ್ರಿಕ ಅದ್ಯಯನ**, ಕನ್ನಡ ವಿಶ್ವವಿದ್ಯಾಲಯ ಹಂಪಿ.
* ಲೋಕೇಶ ಜಿ.ಎಂ., ೨೦೧೩, **ಕರ್ನಾಟಕ ಬಯಲು ಸೀಮೆಯ ಮ್ಯಾಸನಾಯಕರ ಹಟ್ಟಿಗಳು: ಚಾರಿತ್ರಿಕ ಅದ್ಯಯನ**, ಕನ್ನಡ ವಿಶ್ವವಿದ್ಯಾಲಯ ಹಂಪಿ.
* ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೦, **ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರುಪಿತವಾಗಿರುವ ಬೇಟೆ ಮತ್ತು ಬೇಡರಸಂದರ್ಭಗಳು: ಚಾರಿತ್ರಿಕ ಅದ್ಯಯನ**, ಕನ್ನಡ ವಿಶ್ವವಿದ್ಯಾಲಯ ಹಂಪಿ.
* ಶಕುಂತಲ ಎಂ., ೨೦೦೯, **ಚಿತ್ರದುರ್ಗ ಪಾಳೆಗಾರರ ಕಾಲದ ಕಲೆ ಮತ್ತು ವಾಸ್ತುಶಿಲ್ಪ-ಒಂದು ಅದ್ಯಯನ**, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪತ್ರಿಕೆಗಳು

* ಇತಿಹಾಸ ಚಂದ್ರಿಕೆ, ತುಮಕೂರು.
* ಇತಿಹಾಸ ದರ್ಶನ ಸಂಪುಟಗಳು
* ವಾಲ್ಮೀಕಿ ಕರ್ನಾಟಕ ಮಾಸಿಕ, ಬೆಂಗಳೂರು.
* ವಾಲ್ಮೀಕಿ ಬಂಧು ಮಾಸಿಕ, ಧಾರವಾಡ.
* ವಾಲ್ಮೀಕಿ ಮಿತ್ರ, ತುಮಕೂರು.
* ವಾಲ್ಮೀಕಿ ವಾಣಿ ಮಾಸಿಕ, ಚಿತ್ರದುರ್ಗ.
* ವಾಲ್ಮೀಕಿ ಸಂದೇಶ ಮಾಸಿಕ, ಗದಗ.